ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಫೆಬ್ರವರಿ 27, 2008 ರೂ. 12/-



ಯಾದವ ಮಠ

ಪೇಜಾವರ ದಬ್ಬಾಳಿಕೆ!



ಡಾನ್ ರವಿ ಪೂಜಾರಿ ಪೌರೋಹಿತ್ಯ?



ಮಾದೇಗೌಡರ ಕಳ್ಳಾಟಕ್ಕೆ ಒದೆ



ಅಶೋಕ್ ಕೊರಳಿಗೆ ಸಿಬಿಐ ಕುಣಿಕೆ


ಹುಬ್ಬಳ್ಳಿ ವಕೀಲರ ಭಯೋತ್ಪಾದನೆ

ಕ್ರಿಕೆಟ್ಟೂ ಅಲ್ಲ ದೇಶಪ್ರೇಮವೂ ಅಲ್ಲ: ಮಿಲಿಯನ್ ಡಾಲರ್‌ನ ಪ್ರಶ್ನೆ!

ಚಾರ್ವಾಕ

- ಶಿವಸುಂದರ್-

ಭಾರತದ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಕಂಪನಿಗಳು ತಮ್ಮ ಪ್ರಚಾರಕ್ಕೆ ಕ್ರಿಕೆಟ್ ಆಟಗಾರರನ್ನು ಬಳಸಿಕೊಳ್ಳುತ್ತವೆ. ಸರ್ಕಾರವೂ ಸಹ ಇತ್ತೀಚೆಗೆ ತಾನೇ ಮುಗಿದ ಪೋಲಿಯೋ ಡ್ರಾಪ್ಸ್ ಪ್ರಚಾರದಿಂದ ಹಿಡಿದು ಕುಟುಂಬಕಲ್ಯಾಣ ಯೋಜನೆಯವರೆಗೆ ಎಲ್ಲದಕ್ಕೂ ಕ್ರಿಕೆಟ್ ಆಟಗಾರರನ್ನು ಬಳಸಿಕೊಳ್ಳುತ್ತದೆ. ಇದರಿಂದಾಗಿಯೇ ಕ್ರಿಕೆಟ್ ಎಂದರೆ ಈ ದೇಶದಲ್ಲಿ ಒಂದು ಧರ್ಮವಾಗಿಯೂ ಮತ್ತು ಕ್ರಿಕೆಟ್ ಆಟಗಾರರೆಂದರೆ ಮಹಾನ್ ದೇಶಭಕ್ತರೆಂದೂ ಪರಿಗಣಿಸಲಾಗುತ್ತದೆ. ಹೀಗಾಗಿ ಹರಭಜನ್ ಸಿಂಗ್ ಪ್ರಕರಣದಲ್ಲಿ ಆದಂತೆ ಬೇರೇ ದೇಶದವರು ಕ್ರಿಕೆಟ್ ಆಟಗಾರರಿಗೆ ಅವಮಾನ ಮಾಡಿದರೆ ಇಡಿ ದೇಶವೇ ಎದ್ದು ನಿಲ್ಲುತ್ತದೆ. ಕ್ರಿಕೆಟ್ ಆಟಗಾರರಿಗೆ ಆದ ಅವಮಾನವನ್ನು ಇಡೀ ದೇಶಕ್ಕೆ ಆದ ಅವಮಾನವೆಂಬಂತೆ ಭಾವಿಸುತ್ತಾರೆ.



ಕೆಲವು ವರ್ಷಗಳ ಕೆಳಗೆ ಅಮೆರಿಕದ ವಿಮಾನ ನಿಲ್ದಾಣವೊಂದರಲ್ಲಿ ನಮ್ಮ ದೇಶದ ಕೇಂದ್ರ ಮಂತ್ರಿಯಾಗಿದ್ದ ಜಾರ್ಜ್ ಫರ್ನಾಂಡಿಸ್‌ಗೆ ಅಮೆರಿಕದ ಅಧಿಕಾರಿಗಳು ಮಾಡಿದ್ದ ಅವಮಾನವನ್ನೂ ಸಹ ನಮ್ಮ ದೇಶದ ಜನ ಹರಭಜನ್ ಸಿಂಗ್ ಪ್ರಕರಣದಷ್ಟು ತೀವ್ರವಾಗಿ ಪರಿಗಣಿಸಿರಲಿಲ್ಲ. ಒಂದು ಸಾರ್ವಭೌಮಿ ದೇಶದ ಸರ್ಕಾರದ ಪ್ರತಿನಿಧಿಗೆ ಆದ ಅವಮಾನಕ್ಕಿಂತ ಹೆಚ್ಚಾಗಿ ಕ್ರಿಕೆಟ್ ಆಟಗಾರನಿಗೆ ಆದ ಅವಮಾನ ಈ ದೇಶದ ಜನರನ್ನು ತೀವ್ರವಾಗಿ ತಾಕುತ್ತದೆಂದರೆ ಕ್ರಿಕೆಟ್ ಸಾರ್ವಜನಿಕರ ರಾಜಕೀಯ ಪ್ರಜ್ಞೆಯಲ್ಲೂ ಪಡೆದುಕೊಂಡಿರುವ ಪಾತ್ರವೇನೆಂದು ಸ್ಪಷ್ಟವಾಗುತ್ತದೆ.


ಕ್ರಿಕೆಟ್ ಆಟಗಾರರನ್ನು ಮತ್ತು ರಾಜಕಾರಣಿಗಳನ್ನು ಜನ ಬೇರೆ ಮಾಡಿ ನೋಡುವುದು ಸ್ವಲ್ಪ ಈ ರೀತಿಯಲ್ಲಿ. ಸ್ವಾತಂತ್ರ್ಯದ ನಂತರದ 60 ವರ್ಷಗಳಲ್ಲಿ ಭಾರತದ ಎಲ್ಲಾ ರಾಜಕಾರಣಿಗಳು ಪರಮ ಸ್ವಾರ್ಥಿಗಳು ಎಂಬ ಸಕಾರಣ ಅಭಿಪ್ರಾಯ ಜಾನಪದ ನಂಬಿಕೆಯೇ ಆಗಿಬಿಟ್ಟಿದೆ. ಹೀಗಾಗಿ ರಾಜಕಾರಣಿಗಳಿಗಾಗುವ ಅವಮಾನವನ್ನು ಜನ ತಮಗಾಗುವ ಅವಮಾನವೆಂದು ಭಾವಿಸುವುದಿಲ್ಲ. ರಾಜಕಾರಣವನ್ನು ತಮ್ಮ ಸ್ವಾರ್ಥದ ಪ್ರಯೋಜನಕ್ಕೆ ಒಂದು ಉದ್ದಿಮೆಯನ್ನಾಗಿ ಮಾಡಿಕೊಂಡಿದ್ದಾರಾದ್ದರಿಂದ ಯಾವುದಾದರೂ ರಾಜಕಾರಣಿಯನ್ನು ಜನ ಮೆಚ್ಚಿಕೊಳ್ಳಬೇಕೆಂದರೆ ಕನಿಷ್ಠ ಅವನು ನಿಸ್ವಾರ್ಥಿಯಾಗಿರಬೇಕು. ಆಗ ಜನತೆ ಆತ ಅಥವಾ ಆಕೆಯೊಂದಿಗೆ ಗುರುತಿಸಿಕೊಳ್ಳುತ್ತಾರೆ.

ಆದರೆ ಕ್ರಿಕೆಟ್ ಆಟಗಾರರ ಬಗ್ಗೆ ಜನ ಅಸಹ್ಯಿಸಿಕೊಳ್ಳುವುದು ಆತ ದೇಶವನ್ನು ಗೆಲ್ಲಿಸದೇ ಹೋದಾಗ. ಅದೂ ದುಡ್ಡಿನ ವ್ಯಾಮೋಹಕ್ಕೆ ಬಿದ್ದು ಆಟದೊಂದಿಗೆ ರಾಜಿ ಮಾಡಿಕೊಂಡಾಗ. ಕ್ರಿಕೆಟ್ ಮೋಸದಾಟ ಪ್ರಕರಣದಲ್ಲಿ ಮಾತ್ರ ಜನ ತಾತ್ಕಾಲಿಕವಾಗಿ ಕ್ರಿಕೆಟ್ ಆಟಗಾರರ ಬಗ್ಗೆ ಅಸಹ್ಯಿಸಿಕೊಂಡಿದ್ದರು. ಆದರೆ ಈ ಪ್ರಕರಣದಲ್ಲಿ ಅತ್ಯಂತ "ಕುಖ್ಯಾತರಾದ" ಕೆಲವು ಆಟಗಾರರನ್ನು ಕೈಬಿಟ್ಟು ಆಟವು ಮುಂದುವರೆದಂತೆ ಜನರು ನಿಧಾನವಾಗಿ ಅದನ್ನು ಮರೆತು ಬಿಟ್ಟರು. ಅಂದರೆ ಜನರು ರಾಜಕಾರಣಿಗಳಿಗಿಲ್ಲದ ಕೆಲವು ರಿಯಾಯತಿಗಳನ್ನು ಕ್ರಿಕೆಟ್ ಆಟಗಾರರಿಗೆ ನೀಡುತ್ತಾರೆ. ಆ ರಿಯಾಯತಿಯ ಹಿಂದೆ ಕ್ರಿಕೆಟ್ ಆಟಗಾರರು ನಿಜಕ್ಕೂ ದೇಶಕ್ಕಾಗಿ ದೇಶದ ಪ್ರತಿಷ್ಠೆ ಕಾಪಾಡಲು ಶ್ರಮಿಸುತ್ತಿರುವ ಕ್ರೀಡಾಯೋಧರು ಎನ್ನುವ ಅಭಿಪ್ರಾಯವೇ ಪ್ರಧಾನವಾಗಿ ಕೆಲಸ ಮಾಡುತ್ತಿರುತ್ತದೆ. ಆದರೆ ಕ್ರಿಕೆಟ್ ಇತಿಹಾಸದಲ್ಲಿ ಹಲವಾರು ಬಾರಿ ಅವೆಲ್ಲವನ್ನು ಪೊಳ್ಳು ಮಾಡಿರುವ ಘಟನೆಗಳು ನಡೆದಿವೆ.

ಕ್ರಿಕೆಟ್ ಆಟಗಾರರು ತಾವು ದೇಶಕ್ಕಾಗಿ ಆಡುತ್ತಿಲ್ಲ

(18ನೇ ಪುಟಕ್ಕೆ)


ಕ್ರಿಕೆಟ್ ಎಂದರೆ ದುಡ್ಡು ಕಣಾ! ದೇಶ ಗೀತ ಸುಳ್ಳು ಕಣಾ!



"ಬಿಸಿಸಿಐನ ಐಪಿಎಲ್‌ನಲ್ಲಿ ಆಡುವುದೆಂದರೆ ಅದೊಂದು ಅದ್ಭುತ ಅನುಭವ. ಕ್ರಿಕೆಟ್ ಆಸ್ಟ್ರೇಲಿಯಾ ಅದನ್ನು ವಿರೋಧಿಸುವ ಬದಲು ಅದನ್ನು ಪ್ರೋತ್ಸಾಹಿಸಬೇಕು."

-ಶೇನ್ ವಾರ್ನೆ, ಐಪಿಎಲ್‌ನಲ್ಲಿ ಆಡಲು ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿಯನ್ನು ಧಿಕ್ಕರಿಸುತ್ತಿರುವ ಆಟಗಾರ

"ನಾನು ಪಾಕಿಸ್ತಾನ ಕ್ರಿಕೆಟ್ ಬೋರ್ಡ್‌ನೊಂದಿಗೆ ಗುತ್ತಿಗೆ ಹೊಂದಿಲ್ಲ, ನಾನು ಐಪಿಎಲ್‌ನಲ್ಲಿ ಆಡಲು ಪಾಕಿಸ್ತಾನದ ಬೋರ್ಡಿನ ನಿರಪೇಕ್ಷಣಾ ಪತ್ರ ಬೇಕಾಗಿಲ್ಲ."



-ಶೋಯಬ್ ಅಕ್ತರ್, ಐಪಿಎಲ್‌ನಲ್ಲಿ ಆಡಲು ಪಾಕಿಸ್ತಾನ ಕ್ರಿಕೆಟ್ ಮಂಡಳಿಯನ್ನು ಧಿಕ್ಕರಿಸುತ್ತಿರುವ ಆಟಗಾರ

ಅಭಿವೃದ್ಧಿಯ ಮತ್ತೊಂದು ಮಾನದಂಡ!

"ಬಿಹಾರ ಮತ್ತು ಉತ್ತರ ಪ್ರದೇಶದಂತಹ ಹಿಂದುಳಿದ ರಾಜ್ಯಗಳಿಗಿಂತಲೂ ಮುಂದುವರೆದ ರಾಜ್ಯವಾದ ಕರ್ನಾಟಕದಲ್ಲಿ ದಲಿತರ ಮೇಲೆ ಹೆಚ್ಚಿನ ದೌರ್ಜನ್ಯ ನಡೆಯುತ್ತಿದೆ."

-ಆರ್.ಬಿ. ಅಗವಾನೆ, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ

ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಪತ್ರಿಕೋದ್ಯಮದ ಒಂದು ಜ್ವಲಂತ ಉದಾಹರಣೆ

(ಫೆಬ್ರವರಿ 11ರಂದು **ವಾರ್ತಾಭಾರತಿಯ** ಮುಖಪುಟದಲ್ಲಿ ಪ್ರಕಟವಾದ ಒಂದು ವರದಿ)

ಕಳೆದ ಎರಡು ವಾರಗಳಿಂದ ಕನ್ನಡ ಮತ್ತು ಇಂಗ್ಲಿಷ್‌ನ ಕೆಲವು ಪತ್ರಿಕೆಗಳು "ಉಗ್ರ"ರಿಂದ ವಶಪಡಿಸಿಕೊಂಡಿರುವ ಮಾರಕ ಶಸ್ತ್ರಾಸ್ತ್ರಗಳು ಕೆಳಗಿನಂತಿವೆ.

ಕನ್ನಡಪ್ರಭ ದಿನಪತ್ರಿಕೆ ಫೆಬ್ರವರಿ 3, 4 ಮತ್ತು 8 ರಂದು ವಶಪಡಿಸಿಕೊಂಡ ಆಯುಧಗಳು

1. ಪ್ರಪಂಚದ ನಂಬರ್, 1 ಶಕ್ತಿಶಾಲಿ ಸ್ಫೋಟಕ ಪೆಂಟ್ರೈಟ್ ಆಯುಧ
2. ಆರ್‌ಡಿಎಕ್ಸ್
3. ಇಸ್ರೇಲ್ ಗನ್ ಮತ್ತು ಕಂಪ್ಯೂಟರ್ ಹಾರ್ಡ್‌ಡಿಸ್ಕ್
4. ಕೈ ಬಾಂಬ್ ಹಾಗೂ ಭಾರಿ ಪ್ರಮಾಣದ ಸ್ಫೋಟಕ ಸಾಮಗ್ರಿಗಳು

ಉದಯವಾಣಿ ದಿನಪತ್ರಿಕೆ ಫೆಬ್ರವರಿ 3 ರಂದು ವಶಪಡಿಸಿಕೊಂಡ ಆಯುಧಗಳು

1. ಅಸಾದುಲ್ಲ ತಂಗಿದ್ದ ಬಾಡಿಗೆ ಕೋಣೆಯಿಂದ ಸ್ಫೋಟಕ ಸಾಮಗ್ರಿ
2. ಅತ್ಯಾಧುನಿಕ ವಾಕಿಟಾಕಿಗಳು
3. ಸಣ್ಣ ಕಲ್ಲಂಗಡಿ ಮಾದರಿಯ ಗ್ಲೋಬ್ ಟೈಮರ್, ಹಾರ್ಡ್‌ಡಿಸ್ಕ್ ಸೇರಿದಂತೆ ವಿವಿಧ ಸ್ಫೋಟಕ ಸಾಮಗ್ರಿ

ಟೈಮ್ಸ್ ಆಫ್ ಇಂಡಿಯಾ ಫೆಬ್ರವರಿ 3 ರಂದು ವಶಪಡಿಸಿಕೊಂಡ ಆಯುಧಗಳು

ಗನ್ ಪೌಡರ್, ನೈಟ್ರೋಜನ್, ಪಾಯಿಂಟ್ 9 ಎಂಎಂ ಬುಲೆಟ್‌ಗಳು, ಹುಬ್ಬಳ್ಳಿ ಅಡಗುದಾಣದಿಂದ ಹಾರ್ಡ್‌ಡಿಸ್ಕ್ ಮತ್ತು ವಾಕಿಟಾಕಿಗಳು

ವಿಜಯ ಕರ್ನಾಟಕ ಫೆಬ್ರವರಿ 3 ರಂದು ವಶಪಡಿಸಿಕೊಂಡಿದ್ದು

ಉಗ್ರ ಅಸಾದುಲ್ಲಾನ ಹುಬ್ಬಳ್ಳಿಯ ಹೇಮಂತನಗರದ ಬಾಡಿಗೆ ಕೊಠಡಿಯಲ್ಲಿ ಸ್ಫೋಟಕ ಸಾಮಗ್ರಿ, ರಾಜ್ಯದ ಪ್ರತಿಷ್ಠಿತ ಜಲಾಶಯ, ದೇವಸ್ಥಾನ, ಮಠ-ಮಾನ್ಯಗಳ ನಕ್ಷೆಗಳು.

ಪೊಲೀಸರು ವಶಪಡಿಸಿಕೊಂಡಿರುವ ಆಯುಧಗಳು

ನಕಲಿ ಸಂಖ್ಯಾಫಲಕಗಳು, ಕಪ್ಪು ಬಣ್ಣದ ಪರ್ಸ್‌ಗಳು, ಸಿಡಿಗಳು, ರಸ್ತೆ ಹಾಗೂ ರೈಲ್ವೆ ನಕ್ಷೆಗಳು, ವಾಹನದ ಕೀ ಗೊಂಚಲುಗಳು, ಎಟಿಎಂ ಕಾರ್ಡ್, ಎರಡು ಚಾಕುಗಳು, ಎರಡು ಚಕ್ರ, ಬ್ಯಾಟರಿ, ಜನವರಿ 21 ರಂದು ಅಸಾದುಲ್ಲಾನಿಂದ ಒಂದು ಚಾಕು (ಡ್ಯಾಗರ್), ಇಸ್ಲಾಮೀ ಸಾಹಿತ್ಯ, ಏರಗನ್ ಪೆಲೆಟ್ಸ್, ಒಂದು ಕಾಂಪಾಸ್, ಡಿಜಿಟಲ್ ಡೈರಿ, ಆಸೀಫ್‌ನ ಮಾಹಿತಿಯ ಮೇರೆಗೆ ಜಿಲೆಟಿನ್ ಸ್ಟಿಕ್ ಹಾಗೂ ಡೈನಮೈಟನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನೋ ಕಾಮೆಂಟ್ಸ್

"ಭಾರತೀಯರಿಗೆ ವ್ಲಾದಿಮಿರ್ ಪುಟಿನ್ ಬಗ್ಗೆ ಗೊ... ದೃಷ್ಟ, ವ್ಲಾದಿಮಿರ್ ಲೆನಿನ್ ಬಗ್ಗೆ ಗೊತ್ತಿಲ್ಲ."

-ರಷ್ಯಾದ ದಿ ಸನ್ ಪತ್ರಿಕೆಯ ವರ...


"ನಾವು ಹೇಳಿದ್ದೇ ಅಂತಿಮ ಸತ್ಯ ಎನ್ನುವ ಮೂ... ಭೂತವಾದಿ ಸಂಶೋಧಕರ ಬಗ್ಗೆ ಎಚ್ಚರದಿಂದಿ... ಬೇಕು."

-ಶಿ.ರಂ.ನಾಗರಾಜ...

"ವಿಶ್ವದಲ್ಲಿ 2006-07ರ ಸಾಲಿನಲ್ಲಿ ವಿಶ್ವಶಾಂತಿಗಾ... 700 ಕೋಟಿ ಡಾಲರ್ ವ್ಯಯಿಸಲಾಗಿದ್ದರೆ 1,23,0... ಕೋಟಿ ಡಾಲರ್ ಹಣವನ್ನು ಮಿಲಿಟರಿ ಕಾರ್ಯಾ... ಚರಣೆಗೆಂದು ವ್ಯಯಿಸಲಾಗಿದೆ. ಅಂದರೆ ವಿಶ್ವಶಾಂತಿಗಿಂ... ಮಿಲಿಟರಿ ಕಾರ್ಯಾಚರಣೆಗೆ 228 ಪಟ್ಟು ಹೆ... ಹಣವನ್ನು ವ್ಯಯಿಸಲಾಗಿದೆ."

-ವರ್ಲ್ಡ್‌ವಾಚ್ ಸಂಸ್ಥೆಯ ವರ...

ನಂಬಿದ್ರೆನಂಬಿ ಬಿಟ್ರೆಬಿಡಿ




"ಹಿರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ರಾಜ್ಯಪಾಲರು ಕಾಂಗ್ರೆಸ್ ಮುಖಂಡರ ಶಿಫಾರಸ್ಸುಗಳನ್ನು ಪರಿಗಣಿಸಿಲ್ಲ."

-ಮಲ್ಲಿಕಾರ್ಜುನ ಖರ್ಗೆ

"ಇಶಾಂತ್ ಶರ್ಮ ಭಾರತ ತಂಡದ ಭರವಸೆಯ ಬೌಲರ್. ಅವರು ವಿಶ್ವದ ಈಗಿನ ಅತ್ಯುತ್ತಮ ಬೌಲರ್‌ಗಳಲ್ಲೇ ಅತ್ಯುತ್ತಮ ಬೌಲರ್."



-ಜಾವಗಲ್ ಶ್ರೀನಾಥ್



"ಚಿತ್ರದುರ್ಗ-ತುಮಕೂರು ರೈಲು ಜೋಡಣೆಗೆ ಕ್ರಮ ಕೈಗೊಳ್ಳಲಾಗುವುದು."


-ಲಾಲೂ ಪ್ರಸಾದ್ ಯಾದವ್

"ಪ್ರತಿಭಟನೆಯ ಹೆಸರಲ್ಲಿ ದೊಂಬಿ ನಡೆಸುವವ... ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು..."

-ಶಂಕರ್ ಬಿದ...

ಭೂತದ ಬಾಯಲ್ಲಿ ಭಗವದ್ಗೀತೆ

"ವ್ಯಾಲಂಟೈನ್ ದಿನಾಚರಣೆಯು ಉದ್ರಿ ಹಣದಲ್ಲಿ ಮೆರೆಯುತ್ತಿರುವ ನವ ಶ್ರೀಮಂತರ ಕೊಳೆತ ಸಂಸ್ಕೃತಿ."



-ಬಾಳಾಠಾಕ್ರೆ

ಬೆಂಕಿಯ ಬೆಳಕು

"ಕಚೇರಿಗೆ ಬೆಂಕಿ ಹಚ್ಚುವುದರಿಂದ ಮನೆಗೆ ಕ... ತೂರುವುದರಿಂದ ನನ್ನನ್ನು ಹೆದರಿಸಲು ಸಾಧ್ಯವಿ..."

-ಇಸ್ಮಾಯಿಲ್ ಜಾಲಗಾ... ಉಗ್ರರೆಂದು ಹಣೆಪಟ್ಟಿ ಹಚ್ಚಿಸಿಕೊಂಡಿರು... ಆಸೀಫ್ ಪರ ವಕಾಲತ್ತು... ತೆಗೆದುಕೊಂಡಿರುವ ಹುಬ್ಬಳ್ಳಿಯ ವಕೀಲ...

ಸುಳ್ಳಿಗೆ ಸತ್ಯ ಎದುರಿಗಿದ್ದರೂ... ಕಾಣುವುದಿಲ್ಲ!

"ಸಂಘ ಪರಿವಾರದ ಮೇಲೆ ಗೂಬೆ ಕೂರಿಸ... ಗೌರಿ ಲಂಕೇಶ್ ಎಲ್ಲಿದ್ದಾಳೆ? ಅನಂತಮೂರ್ತಿ ... ಹೋದ?"

-ಮಂಗಳೂರಿನ ಸಭೆಯೊಂದರ... ಬಿಜೆಪಿ ಮುಖಂಡ ಕುಂಬ್ಳೆ ಸುಂದರರಾ... ಭಾ...

ಇವರಿಗೆ ಕನ್ನಡಿಗರ ಗುತ್ತೇದಾ... ಕೊಟ್ಟವರು ಯಾರು?

"ಕನ್ನಡಿಗರ ಸಿಟ್ಟಿಗೆ ದಂಡು ರೈಲು ಕಚೇರಿ ಧ್ವ...

-ಕರವೇ ಮಾಡಿದ ಪುಂಡಾಟಿಕೆ...

ಕನ್ನಡ ಪ್ರಭ ...


ಸಂಕ್ರಮಣದ ಕಾಲದಲ್ಲಿ ಒಂದು ಆಶಯ...

ಆದ್ಯಾಕೋ ನಮ್ಮ ರಾಜ್ಯದ ರಾಜಕಾರಣದಲ್ಲಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲ ಎಂಬ ಭಾವನೆ ಆವರಿಸಿಕೊಳ್ಳಲಾರಂಭಿಸಿದ್ದಾಗಲೇ ಎರಡು ಆಶಾದಾಯಕ ಪ್ರಯತ್ನಗಳು ಕಳೆದೆರಡು ದಿನಗಳಲ್ಲಿ ಸಂಭವಿಸಿವೆ. ಮೊದಲನೆಯದು ಇತ್ತೀಚೆಗೆ ತೀರಾ ಅಗತ್ಯವಾಗಿದ್ದ ರೈತ ಸಂಘದ ವಿಲೀನದ ಪ್ರಯತ್ನ. ಎರಡನೆಯದು ಕೋಮುವಾದಿಗಳನ್ನು ಸೋಲಿಸಲು ಕರ್ನಾಟಕದ ಹಲವು ಪ್ರಗತಿಪರರು ನಡೆಸಿರುವ ಯತ್ನ.

ಆತ್ಮಹತ್ಯೆಗೆ ಶರಣಾಗುತ್ತಿರುವ ರೈತರ ಸಮಸ್ಯೆ ಮತ್ತು ರಾಜ್ಯದ ನೆಮ್ಮದಿಗೆ ಬೆಂಕಿ ಹಚ್ಚುತ್ತಿರುವ ಕೋಮುವಾದ- ಇವೆರಡೂ ಕರ್ನಾಟಕ ಈಗ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು. ಹಾಗೆ ನೋಡಿದರೆ ಈ ಎರಡು ಸಮಸ್ಯೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಯಾಕೆಂದರೆ ರೈತರ ಸಮಸ್ಯೆಗೆ ಕಾರಣವಾಗುತ್ತಿರುವ ಜಾಗತೀಕರಣ ಮತ್ತು ಅದರೊಂದಿಗೆ ಬಂದಿರುವ ಆರ್ಥಿಕ ನೀತಿ ಒಂದೆಡೆಯಾದರೆ, ಇನ್ನೊಂದೆಡೆ ಕೋಮುವಾದ ಹಬ್ಬುವುದಕ್ಕೆ ಕಾರಣವಾಗುತ್ತಿರುವುದು ಅದರ ಅಂತರಾಳದಲ್ಲೇ ಇರುವ ಜನರನ್ನು ಒಡೆದು ಆಳುವ ನೀತಿ. ಆ ಒಡೆದಾಳುವ ನೀತಿಯ ಹಿಂದೆ ಅತಿ ಶ್ರೀಮಂತ ಮತ್ತು ಅತಿ ಬಡವ ಎಂಬ ಎರಡು ವರ್ಗಗಳೂ ಇವೆ. ಆದ್ದರಿಂದ ಹೊಸ ಆರ್ಥಿಕ ನೀತಿಗಳನ್ನು ಸ್ವಾಗತಿಸುವ ಮೇಲು ವರ್ಗದ ಜನ ಒಂದೆಡೆಯಾದರೆ, ಅವುಗಳಿಂದ ಸಮಾಧಿ ಸೇರುತ್ತಿರುವ ಬಡವರ್ಗದ ಜನ ಇನ್ನೊಂದೆಡೆ ಇದ್ದಾರೆ. ಹೀಗೆ ಒಂದೆಡೆ ಆರ್ಥಿಕ ನೀತಿಗಳು ಇಡೀ ಸಮುದಾಯವನ್ನೇ ಒಡೆಯುತ್ತಿದ್ದರೆ, ಇನ್ನೊಂದೆಡೆ ಧಾರ್ಮಿಕ ಆಧಾರದ ಮೇಲೂ ಸಮಾಜವನ್ನು ಛಿದ್ರಗೊಳಿಸಲಾಗುತ್ತಿದೆ. ಒಂದು ಮಾರುಕಟ್ಟೆ ಮೂಲಭೂತವಾದ, ಮತ್ತೊಂದು ಧಾರ್ಮಿಕ ಮೂಲಭೂತವಾದ.

ಇಲ್ಲೊಂದು ವಿಪರ್ಯಾಸವನ್ನು ಗಮನಿಸಿ. ಭಾರತದ 500 ಜಿಲ್ಲೆಗಳ ಪೈಕಿ 36 ಜಿಲ್ಲೆಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ 36 ಜಿಲ್ಲೆಗಳು ಇರುವುದು ಅಭಿವೃದ್ಧಿಶೀಲ ರಾಜ್ಯಗಳೆಂದೇ ಪರಿಗಣಿಸಲಾಗಿರುವ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ. ಅಂದಹಾಗೆ ಈ ನಾಲ್ಕು ರಾಜ್ಯಗಳು GDP ಇತ್ಯಾದಿ 'ಅಭಿವೃದ್ಧಿ' ಪಟ್ಟಿಯಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಅಲಂಕರಿಸಿರುವ ರಾಜ್ಯಗಳೂ ಆಗಿವೆ! ಮೊನ್ನೆ ಸಮಾಜಕಲ್ಯಾಣ ಇಲಾಖೆಯು ಸ್ಪಷ್ಟಪಡಿಸಿರುವಂತೆ ಈ ಅಭಿವೃದ್ಧಿಶೀಲ ಕರ್ನಾಟಕದಲ್ಲೇ ಹಿಂದುಳಿದ ಬಿಹಾರಕ್ಕಿಂತ ಹೆಚ್ಚು ದೌರ್ಜನ್ಯಗಳೂ ದಲಿತರ ಮೇಲೆ ನಡೆಯುತ್ತಿದೆ.

ಕೋಮುವಾದಿ ಬಿಜೆಪಿ ಪಕ್ಷವು ಕರ್ನಾಟಕವನ್ನು ತನ್ನ ಪಾಲಿಗೆ ದಕ್ಷಿಣದ ಹೆಬ್ಬಾಗಿಲು ಎಂದೇ ಸಾರುತ್ತಾ ಬಂದಿದೆ. ಕಳೆದ ಬಾರಿ ಆ ಹೆಬ್ಬಾಗಿಲು ಬಿಜೆಪಿಗೆ ಅರ್ಧ ಮಾತ್ರ ತೆರೆದುಕೊಂಡಿತ್ತು. ಅಧಿಕಾರ ಸಿಗುವವರೆಗೂ ಮತ್ತು ಅಧಿಕಾರ ಸಿಕ್ಕ ನಂತರ ಅವರು ಎಂತಹ ಪಿಶಾಚಿಗಳನ್ನು ಹುಟ್ಟು ಹಾಕಿದ್ದಾರೆಂದರೆ ಅವರು ಹಿಂದುಳಿದ ವರ್ಗವಾದ ಕುರುಬರ ಕನಕಗೋಪುರವನ್ನು ಕೆಡವುತ್ತಾರೆ, ಅಲ್ಪಸಂಖ್ಯಾತ ಮುಸಲ್ಮಾನ ಸಮುದಾಯದ ಮೇಲೆ ಭಯೋತ್ಪಾದನೆಯ ಗೂಬೆ ಕೂರಿಸುತ್ತಾರೆ, ಮತ್ತೊಂದು ಅಲ್ಪಸಂಖ್ಯಾತ ಸಮುದಾಯವಾದ ಕ್ರಿಶ್ಚಿಯನ್ನರ ಮೇಲೆ ಮತಾಂತರ ಆರೋಪ ಹೊರಿಸಿ ಅವರ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ಮಾಡುತ್ತಾರೆ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಮೇಲೂ ದಬ್ಬಾಳಿಕೆ ನಡೆಸುತ್ತಾರೆ. ಇಲ್ಲೂ ಇರುವ ವಿಪರ್ಯಾಸ ಯಾವುದೆಂದರೆ ಇಂತಹ ದುಷ್ಕೃತ್ಯಗಳಲ್ಲಿ ಶೂದ್ರ, ಹಿಂದುಳಿದ, ದಲಿತ ಯುವಕರೇ ಭಾಗಿಯಾಗುತ್ತಾರಲ್ಲದೆ,



ಅವರ ಹಿಂದೆ ನಿಂತು ಪ್ರಚೋದಿಸಲು ರವಿಶಂಕರ್, ಚಿದಾನಂದಮೂರ್ತಿ ಮತ್ತು ಎಸ್.ಎಲ್. ಭೈರಪ್ಪನಂತಹ ಪ್ರತಿಗಾಮಿಗಳಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಎರಡೂ ಶತ್ರುಗಳ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಡುವ ತುರ್ತು ಇಂದು ನಮ್ಮೆಲ್ಲರ ಮುಂದಿದೆಯಲ್ಲದೆ, ಕನ್ನಡ ನಾಡಿನ, ಇಲ್ಲಿನ ದುಡಿಯುವ ಜನತೆಯ ನೆಮ್ಮದಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯೂ ನಮ್ಮದಾಗಿದೆ.


ರೈತರ ಆತ್ಮಹತ್ಯೆಗಳ ಬಗ್ಗೆ ಅಧ್ಯಯನ ಮಾಡಿರುವವರು ಮತ್ತು ಕೋಮುಗಲಭೆಗಳ ಬಗ್ಗೆ ವಿಶ್ಲೇಷಿಸಿರುವವರು ಇವೆರಡರ ಮಧ್ಯೆ ಒಂದು ಸಾಮ್ಯತೆಯನ್ನು ಗುರುತಿಸುತ್ತಾರೆ. ಉದಾಹರಣೆಗೆ, ಆತ್ಮಹತ್ಯೆ ತರಹದ ತೀವ್ರವಾದ ವ್ಯಕ್ತಿಗತ ನಿರ್ಣಯವನ್ನು ತೆಗೆದುಕೊಳ್ಳುವಾಗ ರೈತನೊಬ್ಬ ತನ್ನ ಸುತ್ತಮುತ್ತಲಿನ ಸಮಾಜದಿಂದ ಸಂಪೂರ್ಣವಾಗಿ ಬೇರ್ಪಟ್ಟು ಏಕಾಂಗಿಯಾಗಿರುತ್ತಾನೆ. ಆತನನ್ನು ಸಮಾಜದೊಂದಿಗೆ, ಸಾಮಾಜಿಕ ಆಸರೆಯೊಂದಿಗೆ ಬೆಸೆಯುವ ಕೊಂಡಿ ಕಳಚಿ ಹೋಗಿರುತ್ತದೆ. ರೈತ ಸಂಘ ಇದ್ದ ಕಡೆ, ಅದು ಸಮರ್ಥವಾಗಿ ಕಾರ್ಯನಿರ್ವಹಿಸಿದ ಕಡೆ ರೈತನೊಬ್ಬ ಎಷ್ಟೇ ಸಂಕಷ್ಟದಲ್ಲಿದ್ದರೂ ಆತ ಆತ್ಮಹತ್ಯೆಯಂತಹ ನಿರ್ಣಾಯಕ ನಿರ್ಧಾರ ತೆಗೆದ[illegible]ಯಾಗಿರುತ್ತಿತ್ತು. ಇದನ್ನು ಅರಿತುಕೊಂಡಿದ್ದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು "ರೈತ ಸಂಘ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಕಡೆ ಆತ್ಮಹತ್ಯೆಗಳಾಗಿಲ್ಲ" ಎಂದೇ ಹೇಳುತ್ತಿದ್ದರು.

ಆದರೆ ದುರಾದೃಷ್ಟವಶಾತ್, ರೈತರು ಅತಿಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಕಳೆದ ಒಂದು ದಶಕದುದ್ದಕ್ಕೂ ರೈತ ಸಮುದಾಯಕ್ಕೆ ಆಸರೆಯಾಗಬೇಕಿದ್ದ ರೈತ ಸಂಘವೇ ವಿಭಜನೆಗೊಂಡು, ನಾಯಕರ ಸ್ವಪ್ರತಿಷ್ಠೆಗೆ ಬಲಿಯಾಗಿತ್ತು, ಈಗ ಅದೆಲ್ಲ ಮುಗಿದ ಕತೆ ಎಂದು ಆಶಿಸಬಹುದಾಗಿದೆ.

ಕರ್ನಾಟಕದಲ್ಲಿ ಕೋಮುವಾದ ಹೆಚ್ಚಾಗಿರುವುದರ ಹಿಂದೆಯೂ ಇಂತಹದ್ದೇ ಕಾರಣಗಳಿವೆ. 1969 ರಲ್ಲಿ ಮಂಗಳೂರಿನಲ್ಲಿ ನಡೆದ ಕೋಮುಗಲಭೆ ಹೊರತುಪಡಿಸಿದರೆ 70 ಮತ್ತು 80 ರ ದಶಕದಲ್ಲಿ ಅಲ್ಲಲ್ಲಿ ಮಾತ್ರ ಕೋಮುಗಲಭೆಗಳು ನಡೆದಿತ್ತು. ಆದರೆ 90 ರ ದಶಕದಲ್ಲಿ ಆರಂಭಗೊಂಡ ಕೋಮುಗಲಭೆಗಳು ಇವತ್ತಿನವರೆಗೂ ನಿಂತಿಲ್ಲ.

ಇದಕ್ಕೆ ಪ್ರಮುಖ ಕಾರಣ 80 ರ ದಶಕದವರೆಗೂ ಹಲವಾರು ಪ್ರಗತಿಪರರು ಮತ್ತು ಎಡಪಂಥಿಯರು ಈ ನಾಡಿನ ರೈತ, ಕೂಲಿ, ಕಾರ್ಮಿಕ, ದಲಿತ, ಶೂದ್ರ, ಯುವ ಜನಾಂಗ-ಇವರೆಲ್ಲರನ್ನು ಸಂಘಟಿಸುತ್ತಿದ್ದದ್ದು ಮತ್ತು ಚಿಂತನೆಗೆ, ಚಳವಳಿಗೆ ಪ್ರೇರೇಪಿಸುತ್ತಿದ್ದದ್ದು. ಆದರೆ 90 ರ ದಶಕದಲ್ಲಿ ನಡೆದ ದುಷ್ಟ ರಾಜಕಾರಣದಿಂದಾಗಿ ಪ್ರಗತಿಪರ, ದಲಿತ, ಎಡಪಂಥೀಯರ ನಡುವೆ ಒಡಕುಗಳ ಸೃಷ್ಟಿಯಾದದ್ದಲ್ಲದೆ, ಅದರಲ್ಲಿ ಹಲವರಿಗೆ ಆಮಿಷಗಳನ್ನು ನೀಡಿ ಭ್ರಷ್ಟಗೊಳಿಸಲಾಯಿತು. ರೈತ ಸಂಘದಲ್ಲಿ ಮಾತ್ರವಲ್ಲ, ದಲಿತ ಸಂಘರ್ಷ ಸಮಿತಿ ಕೂಡ ಛಿದ್ರಗೊಂಡಿರುವುದು ಇದಕ್ಕೆ ಸಾಕ್ಷಿಯಾಗಿ ನಿಂತಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಈಗ ರೈತ ಸಂಘಟನೆ ಮತ್ತು ಪ್ರಗತಿಪರರ ಹೊಸ ಆಶಯದ ಪ್ರಯತ್ನಗಳು ಸ್ವಾಗತಾರ್ಹವಾಗಿವೆ. ಆದರೆ ಅವು ಈಗಲಾದರೂ ತಾವು ಹಿಂದೆ ಸೋತಿದ್ದೆಲ್ಲಿ ಎಂಬುದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡರೆ ಒಳ್ಳೆಯದು ಅನಿಸುತ್ತಿದೆ. ಯಾಕೆಂದರೆ ಇವುಗಳು ಹಿಂದೊಮ್ಮೆ ವಿಫಲಗೊಂಡಿದ್ದರ ಹಿಂದಿದ್ದ ಹಲವು ಕಾರಣಗಳಲ್ಲಿ ಅವಕಾಶವಾದ, ಸ್ವಾರ್ಥ, ಅಧಿಕಾರ ಲಾಲಸೆ ಪ್ರಮುಖ. ಅಂದಿನ ನಾಯಕರ ಸ್ವಪ್ರತಿಷ್ಠೆ ಮತ್ತು ಸ್ವಾರ್ಥ ಹೆಚ್ಚಾದಂತೆ ಅವರ ಸಂಘಟನೆಗಳು ಶಕ್ತಿ ಕಳೆದುಕೊಂಡವಲ್ಲದೆ, ಅವುಗಳ ರಾಜಿರಹಿತ ಹೋರಾಟವೂ ಮೂಲೆಗುಂಪಾದವು. ಅಂತಹ ಅಪಾಯಗಳು ಈಗ ಎದುರಾಗದಂತೆ ಎಚ್ಚರ ವಹಿಸಬೇಕಿದೆ.



ಈಗಿನ ಜಾಗತೀಕರಣವಂತೂ ರೈತ, ದಲಿತ, ಎಡಪಂಥೀಯ ಮತ್ತು ಮಹಿಳಾವಾದಿಗಳ ಚಳವಳಿಗಳಿಗೆ ಹೊಸ ಸವಾಲುಗಳನ್ನು ಹಾಕಿದೆ. ಇದೇ ಹೊತ್ತಿಗೆ ಸರ್ಕಾರಗಳು ಕೂಡ ಅನ್ಯಾಯಕ್ಕೆ, ದಬ್ಬಾಳಿಕೆಗೆ, ಶೋಷಣೆಗೆ ಒಳಗಾಗುತ್ತಿರುವ ಸಮುದಾಯಗಳ ಪರವಿಲ್ಲದೆ WTO, IMF, ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳ ಪರವಾಗಿ ನಿಂತಿದೆ. ಅದರೊಂದಿಗೆ ಜನಪರ ಹೋರಾಟಗಳನ್ನು, ಚಳವಳಿಗಳನ್ನು ದಮನ ಮಾಡಲೆಂದೇ ಕರಾಳ ಕಾನೂನುಗಳನ್ನು ಜಾರಿಗೆ ತಂದಿದೆ. ತುರ್ತುಪರಿಸ್ಥಿತಿಯ ಕಾಲದಲ್ಲಿದ್ದ MISA ಗಿಂತಲೂ TADA ಕರಾಳವಾಗಿದ್ದರೆ, 90ರ ದಶಕದಲ್ಲಿ TADA ಜಾಗಕ್ಕೆ ಬಂದಿದ್ದ POTA ಮತ್ತು ಈಗ ಅದರ ಬದಲಿಗೆ UPA ಸರ್ಕಾರ ತಂದಿರುವ ULPA ಮಾನವ ಹಕ್ಕುಗಳನ್ನೇ ನಿರಾಕರಿಸುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಕಪಟ ಶಾಸಕ, ಭ್ರಷ್ಟ ಅಧಿಕಾರಿ, ಲಂಪಟ ಪೊಲೀಸ್ ಮತ್ತು ಹಿಂದೂತ್ವವಾದಿ ಪುಡಾರಿ ಜೊತೆಗೂಡಿದರೆ ಯಾರನ್ನು ಬೇಕಾದರೂ ಕೊಲ್ಲಬಹುದು, ಯಾರನ್ನು ಬೇಕಾದರೂ ಜೈಲಿಗೆ ದೂಡಬಹುದು, ಯಾರ ಚಳವಳಿಯನ್ನಾದರೂ ಮುರಿದುಹಾಕಬಹುದು.


ಕರ್ನಾಟಕ ಇವತ್ತು ಎಲ್ಲ ರೀತಿಯಲ್ಲೂ ಸಂಕ್ರಮಣ ಕಾಲದಲ್ಲಿದೆ. ಆದ್ದರಿಂದ ಈಗ ನಮ್ಮೆಲ್ಲರ ಶತ್ರು ಯಾರೆಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕಿದೆಯಲ್ಲದೆ, ನಮ್ಮೊಳಗಿನ ಶತ್ರುವನ್ನೂ ಗುರುತಿಸಿ ಹೋರಾಟಗಳು ವಿಫಲ ಆಗದಂತೆ ನೋಡಿಕೊಳ್ಳಬೇಕಿದೆ. ಹಾಗೆಯೇ ಎಲ್ಲಾ ಸಮಾನ ಮನಸ್ಕರು ತಮ್ಮ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದುಗೂಡಬೇಕಿದೆ. ನಮ್ಮೆಲ್ಲರ ಶತ್ರುಗಳು ಒಂದಾಗುತ್ತಿರುವ ಈ ಕಾಲದಲ್ಲಿ ನಾವೆಲ್ಲ ದಾಯಾದಿಗಳಂತೆ ಕಚ್ಚಾಡುವುದರಲ್ಲಿ ಅರ್ಥವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಿದೆ.

ರೈತ ಸಂಘಗಳ ವಿಲೀನ, ಕೋಮುವಾದದ ವಿರುದ್ಧ ಪ್ರಗತಿಪರರ ಹೊಸ ಯತ್ನ ಹಳೆಯ ಅನುಭವಗಳಿಂದ ಪಾಠಗಳನ್ನು ಕಲಿತು, ಸಂಘಟನಾತ್ಮಕ ಚಳವಳಿಯನ್ನು ಮಾಡುತ್ತವೆ ಎಂದು ಆಶಿಸುತ್ತೇನೆ. ಅವರ ಅಂತಹ ಎಲ್ಲಾ ಪ್ರಯತ್ನಗಳಿಗೆ ನಿಮ್ಮ ಮತ್ತು ನಮ್ಮ ಬೆಂಬಲ ಇದ್ದೇ ಇರುತ್ತದೆ ಎಂದೂ ಹೇಳಲು ಇಚ್ಛಿಸುತ್ತೇನೆ.....

-ಗೌರಿ ಲಂಕೇಶ್



ಕಂಡಹಾಗೆ



ಲಂಕೇಶ್ 73

ಮಾರ್ಚ್ 8, 2008

ಬರುವ ಮಾರ್ಚ್ 8 ಪಿ. ಲಂಕೇಶರ 73 ನೇ ಜನ್ಮ ದಿನಾಚರಣೆ. ಅಂದು ಅವರ ನೆನಪಿನಲ್ಲಿ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದೇವೆ. ಆ ಕಾರ್ಯಕ್ರಮದಲ್ಲಿ ಹಲವಾರು ಪುಸ್ತಕಗಳ ಬಿಡುಗಡೆ, 'ಲಂಕೇಶ್ ಚಲನಚಿತ್ರ ಪ್ರಶಸ್ತಿ' ವಿತರಣೆ ಕೂಡ ಇರುತ್ತದೆ.

ಈಗಲೇ ಮಾರ್ಚ್ 8 ದಿನಾಂಕವನ್ನು ನಿಮ್ಮ ಡೈರಿಯಲ್ಲಿ ಮಾರ್ಕ್ ಮಾಡಿಟ್ಟುಕೊಂಡು, ಅವತ್ತು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿ.

ದಿನಾಂಕ	: ಶನಿವಾರ, ಮಾರ್ಚ್ 8, 2008
ಸ್ಥಳ	: ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಸಮಯ	: ಸಂಜೆ 4.00

ಎಲ್ಲರಿಗೂ ಸ್ವಾಗತ

ಲಂಕೇಶ್ ಪ್ರಕಾಶನದಿಂದ ಸದ್ಯದಲ್ಲೇ ಬರಲಿರುವ ಪುಸ್ತಕಗಳು

1. 'ಟೀಕೆ ಟಿಪ್ಪಣಿ- ಸಂಪುಟ 3'	ಪಿ. ಲಂಕೇಶ್ (ಸಂಗ್ರಹ: ಬಳಿದಾಳೆ ಈಶ)
2. ಸಾಹಿತಿ, ಸಾಹಿತ್ಯ, ವಿಮರ್ಶೆ	ಪಿ. ಲಂಕೇಶ್ (ಸಂಗ್ರಹ: ಡಾ. ವಿ.ಎಸ್.ಶ್ರೀಧರ)
3. ರೂಪಕ ಬರಹಗಾರರು	ಪಿ. ಲಂಕೇಶ್ ಮತ್ತು ಎಸ್.ಎಫ್. ಯೋಗಪ್ಪನವರ್
4. ರೈತರ ಆತ್ಮಹತ್ಯೆ	ಶಿವಸುಂದರ್
5. ಶತಶತಮಾನಗಳಿಂದ ಭಾರತೀಯ ಸಂವಿಧಾನ ಮನುಸ್ಮೃತಿ	ವಿಕಲಚಿತ್
6. ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್	ಗೌರಿ ಲಂಕೇಶ್


ಒಂದು ಮನವಿ

ಕರ್ನಾಟಕದ ನೂರಾರು ಕಡೆ ಸುತ್ತಾಡಿ ಹಲವಾರು ಸಭೆ, ಸಮಾರಂಭ, ಚರ್ಚೆಗಳಲ್ಲಿ ಪಾಲ್ಗೊಂಡಿದ್ದ ಪಿ. ಲಂಕೇಶರ ಫೋಟೋಗಳು ನಿಮ್ಮಲ್ಲಿದ್ದರೆ ದಯವಿಟ್ಟು ನಮಗೆ ಕಳುಹಿಸಿ ಕೊಡಿ. (ಈ-ಮೇಲ್ ಮೂಲಕವಾದರೂ ಆದೀತು). ಅದೇ ರೀತಿ ಲಂಕೇಶ್ ಮಾಡಿರುವ ಭಾಷಣಗಳ ಧ್ವನಿಮುದ್ರಿತ ಕ್ಯಾಸೆಟ್ ನಿಮ್ಮ ಬಳಿ ಇದ್ದರೆ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಡಿ. ಜೊತೆಗೆ ಲಂಕೇಶರು ಬರೆದಿರುವ ಪತ್ರಗಳಿದ್ದರೆ ಅದರ ಜೆರಾಕ್ಸ್ ಕಳುಹಿಸಿ.

ಬರುವ ಮಾರ್ಚ್ 8 ರಂದು ನಡೆಯಲಿರುವ 'ಲಂಕೇಶ್' ಜನ್ಮದಿನ ಹಾಗೂ ಲಂಕೇಶ್ ವಾರಪತ್ರಿಕೆಯ ವಾರ್ಷಿಕೋತ್ಸವ ಕಾರ್ಯಕ್ರಮ ದಂದು ಈ ಫೋಟೋ, ಕ್ಯಾಸೆಟ್ ಹಾಗೂ ಪತ್ರಗಳನ್ನು ಪ್ರದರ್ಶಿಸಲಾದೀತೇ ಎಂದು ಯೋಚಿಸುತ್ತಿದ್ದೇವೆ. ದಯವಿಟ್ಟು ಸಹಕರಿಸಿ.

ಫೋಟೋ, ಪತ್ರ ಹಾಗೂ ಭಾಷಣದ ಕ್ಯಾಸೆಟ್‌ಗಳನ್ನು [illegible] ಮೂಲಕ ಪತ್ರಿಕೆ ವಿಳಾಸಕ್ಕೆ ಕಳುಹಿಸಿ ಅಥವಾ ಈ-ಮೇಲ್ ಮೂಲಕವೂ ಕಳುಹಿಸಬಹುದು.

lankesh70@rediffmail.com



ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ನಂತರ ಇಡೀ ರಾಜ್ಯದ ಆಡಳಿತದ ಉಸ್ತುವಾರಿ ವಹಿಸಿಕೊಂಡ ಠಾಕೂರ್ ಬಗ್ಗೆ ಜನಸಾಮಾನ್ಯರಲ್ಲಿ ಆಗ ಗೌರವದ ಭಾವನೆಯಿತ್ತು. ಅದೇರೀತಿ ಕೆಲ ನಿರೀಕ್ಷೆಗಳೂ ಇದ್ದವು. ಆಡಳಿತದಲ್ಲಿ ದಕ್ಷತೆ ತಂದು ಭ್ರಷ್ಟಾಚಾರ ನಿಯಂತ್ರಿಸಿ ಒಂದು ಚುನಾಯಿತ ಸರ್ಕಾರ ಬರುವವರೆಗೂ ಠಾಕೂರ್ ಆಡಳಿತದ ಉಸ್ತುವಾರಿ ನಿರ್ವಹಿಸುತ್ತಾರೆಂಬ ನಂಬಿಕೆ ಇತ್ತು. ಆದರೆ ಠಾಕೂರ್ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದಾರೆ.

ಠಾಕೂರ್ ದಿ ಡಿಕ್ಟೇಟರ್

ರಾಜ್ಯಪಾಲ ರಾಮೇಶ್ವರ ಠಾಕೂರ್‌ಗೆ ಅಧಿಕಾರದ ಪಿತ್ತ ನೆತ್ತಿಗೇರಿರುವಂತೆ ಕಾಣುತ್ತಿದೆ. 2007ರ ನವೆಂಬರ್ 19ರಂದು ಬಿಜೆಪಿಯ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ನಂತರ ಇಡೀ ರಾಜ್ಯದ ಆಡಳಿತದ ಉಸ್ತುವಾರಿ ವಹಿಸಿಕೊಂಡ ಠಾಕೂರ್ ಬಗ್ಗೆ ಜನಸಾಮಾನ್ಯರಲ್ಲಿ ಆಗ ಗೌರವದ ಭಾವನೆಯಿತ್ತು, ಅದೇ ರೀತಿ ಕೆಲ ನಿರೀಕ್ಷೆಗಳೂ ಇದ್ದವು.



ಆಡಳಿತದಲ್ಲಿ ದಕ್ಷತೆ ತಂದು ಭ್ರಷ್ಟಾಚಾರ ನಿಯಂತ್ರಿಸಿ ಒಂದು ಚುನಾಯಿತ ಸರ್ಕಾರ ಬರುವವರೆಗೂ ಠಾಕೂರ್ ಆಡಳಿತದ ಉಸ್ತುವಾರಿ ನಿರ್ವಹಿಸುತ್ತಾರೆಂಬ ನಂಬಿಕೆ ಇತ್ತು, ಆದರೆ ಠಾಕೂರ್ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದಾರೆ. ಜೊತೆಗೆ ರಾಜ್ಯಪಾಲರ ಸಲಹೆಗಾರರಾಗಿ ಅವರ ಹತ್ತಿರ ಸೇರಿಕೊಂಡಿರುವ ಪಿ.ಸಿ. ಪ್ರಭು, ಕೃಷ್ಣ ಕುಮಾರ್ ಹಾಗೂ ತಾರಕನ್ ಎಂಬ ನಿವೃತ್ತ ಐಎಎಸ್ ಅಧಿಕಾರಿಗಳು ತಮ್ಮ ಠೇಂಕಾರ, ದರ್ಪಗಳಿಂದ ಕರ್ನಾಟಕವನ್ನು ಅಕ್ಷರಶಃ ಒಂದು ಸರ್ವಾಧಿಕಾರಿ ಆಡಳಿತ ವ್ಯವಸ್ಥೆಯಾಗಿ ಬದಲಾಯಿಸಿಬಿಟ್ಟಿದ್ದಾರೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಚುನಾಯಿತ ಜನಪ್ರತಿನಿಧಿಗಳ ಸರ್ಕಾರವೇ ಸಾರ್ವಭೌಮ ಅಧಿಕಾರ ಹೊಂದಿರಬೇಕೆಂಬುದು ಸರಿ. ಆ ಮಾನದಂಡಗಳ ಪ್ರಕಾರ ಈಗಿನ ರಾಜ್ಯಪಾಲ ರಾಮೇಶ್ವರ ಠಾಕೂರ್ ರಾಜ್ಯಮಟ್ಟದ ಮೊದಲ ದರ್ಜೆ ಗುಮಾಸ್ತನಂತಿರಬೇಕು. ಆದರೆ ಇವರು ಸಂವಿಧಾನದ ಆಶಯ, ಮೂಲಗಳನ್ನೇ ನಿರ್ಲಕ್ಷಿಸುತ್ತಾ ತುಘಲಕ್ ದರ್ಬಾರ್ ನಡೆಸಲು ಶುರು ಮಾಡಿದ್ದಾರೆ.

ಹಗರಣ-ವಿವಾದಗಳ ಸರಮಾಲೆ

ಅತ್ಯಂತ ಹಿರಿಯ, ಅನುಭವಿ ಹಾಗೂ ಮುತ್ಸದ್ದಿ ಎಂದೆಲ್ಲಾ ಬಿಂಬಿಸಲ್ಪಟ್ಟಿರುವ ಠಾಕೂರ್‌ರವರಿಗೆ ಈ ರಾಜ್ಯಪಾಲನ ಕೆಲಸ ಹೊಸದೇನಲ್ಲ. ಈ ಹಿಂದೆ ಒರಿಸ್ಸಾ ರಾಜ್ಯಪಾಲರಾಗಿದ್ದ ಈತ ಕರ್ನಾಟಕಕ್ಕೆ ಬಂದ ಮೇಲೆ ಚಿಗುರಿಕೊಂಡಿದ್ದಾರೆ ಎನ್ನಬೇಕು.

ಬಿಜಾಪುರ ಮಹಿಳಾ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರ ನೇಮಕಾತಿ ವಿವಾದವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ

ಠಾಕೂರ್ ನೇಮಿಸಿದ್ದ ಕೆ. ರಾಜ್ಯಲಕ್ಷ್ಮಿ ಆಂಧ್ರದ ಓರ್ವ ಕಾಂಗ್ರೆಸ್ ಶಾಸಕಿ. ಆಕೆ ಶಿಕ್ಷಣ ತಜ್ಞೆಯೂ ಅಲ್ಲ, ಅಸಲಿಗೆ ಕರ್ನಾಟಕದಲ್ಲಿನ ಶಿಕ್ಷಣ, ಮಹಿಳೆಯರ ಉನ್ನತಿ, ಸಂಶೋಧನೆ ಈ ಯಾವುದಕ್ಕೂ ಸಂಬಂಧಿಸಿದಾಕೆಯಲ್ಲ. ಈಕೆ ಹೆಸರನ್ನು ವಿ.ವಿ. ಸಿಂಡಿಕೇಟಿಗೆ ರೆಕಮೆಂಡ್ ಮಾಡುವಾಗ ಠಾಕೂರ್‌ಗೆ ಅದೆಲ್ಲಾ ಗೊತ್ತಿರಲಿಕ್ಕೂ ಸಾಕು. ಹೀಗಿದ್ದಾಗಲೂ ರಾಜ್ಯಲಕ್ಷ್ಮಿಯನ್ನು ಸಿಂಡಿಕೇಟ್ ಮೆಂಬರ್ ಆಗಿ ಕರ್ನಾಟಕದ ಮೇಲೆ ಹೇರಲು ಈತನಿಗೆಷ್ಟು ದಾರ್ಷ್ಟ್ಯವಿರಬೇಕು ಯೋಚಿಸಿ. ಕೊನೆಗೆ ಕನ್ನಡಪರ ಸಂಘಟನೆಗಳು, ಅಕಾಡಮಿಕ್ ವಲಯಗಳಿಂದ ಪ್ರತಿಭಟನೆ ಬಂದ ಮೇಲೆ ಠಾಕೂರ್ ಈ ನೇಮಕ ರದ್ದು ಮಾಡಿದರು.




ಕೃಷ್ಣಕುಮಾರ್

ಮತ್ತೊಂದೆಡೆ ಮೈಸೂರು, ಹಂಪೆ ಹಾಗೂ ಬಿಜಾಪುರ ವಿಶ್ವವಿದ್ಯಾಲಯಗಳ ಉಪಕುಲಪತಿ ನೇಮಕಾತಿಯಾಗುವಾಗ ಇದೇ ಠಾಕೂರ್ ಮತ್ತವರ ಅಧಿಕಾರಿಗಳ ಪಡೆ ಹೇಗೆ ನಡೆದುಕೊಂಡಿತು?

ಸರ್ಚ್ ಕಮಿಟಿ ಆರಿಸಿ ಶಿಫಾರಸ್ಸು ಮಾಡಿದ್ದ ತಲಾ ಮೂವರು ಅರ್ಹರ ಪಟ್ಟಿ ಇಟ್ಟುಕೊಂಡು ಅವರ ವೈಯಕ್ತಿಕ ಸಂದರ್ಶನ ನಡೆಸಲಾಯಿತು.

'ನೀವು ಉಪಕುಲಪತಿಯಾದರೆ ಏನು ಮಾಡುವಿರಿ? ನಿಮ್ಮ ಯೋಜನೆಗಳೇನು' ಇತ್ಯಾದಿ ಶಾಲಾ ಮಕ್ಕಳಲೆವೆಲ್‌ನ ಇಂಟರ್‌ವ್ಯೂ ಆದಾಗಿತ್ತು, ಇನ್ನೂ ಮೇಲಾಗಿ ಈ ಸಂದರ್ಶನ ನಡೆಸಿದ್ದು ಬರೀ ಠಾಕೂರ್ ಮಾತ್ರ ಅಲ್ಲ, ಸಲಹೆಗಾರರೆಂಬ ಮಿನಿ ಡಿಕ್ಟೇಟರ್‌ಗಳೂ ಅಲ್ಲಿದ್ದರು.



ತಾರಕನ್

ಈ ಠಾಕೂರ್ ಮುತ್ಸದ್ದಿಯೇ ಆಗಿರಬಹುದು. ಈ ಪ್ರಭು, ಕೃಷ್ಣಕುಮಾರ್, ತಾರಕನ್ ದೊಡ್ಡ ಆಫೀಸರ್‌ಗಳೇ ಆಗಿದ್ದಿರಬಹುದು. ಆದರೆ ಇಂಥ ಸಂದರ್ಶನ ನಡೆಸುವಷ್ಟು ಯೋಗ್ಯತೆ ಆ ಅಧಿಕಾರಿಗಳಿಗಿತ್ತಾ?

ಅದು ಬಿಡಿ. ಕರ್ನಾಟಕದ ವಿಶ್ವವಿದ್ಯಾಲಯ ಕಾಯ್ದೆ 2000ದಲ್ಲಿ ಇಂಥ ಸಂದರ್ಶನ ನಡೆಸಬೇಕೆಂಬ ಬಗ್ಗೆ ಯಾವುದೇ ನಿಯಮಗಳೂ ಇಲ್ಲ, ಇಡೀ ದೇಶದಲ್ಲಿ ಇಂಥ ಹಾಸ್ಯಾಸ್ಪದ ಸಂದರ್ಶನ ಎಂದೂ ಎಲ್ಲೂ ನಡೆದೇ ಇಲ್ಲ, ಹಾಗಿದ್ದಾಗಲೂ ಈ ಠಾಕೂರ್ ಗ್ಯಾಂಗ್ ಇಂಥ ಚೇಷ್ಟೆ ಮಾಡುತ್ತಾರೆಂದರೆ ಅದನ್ನು ದುರಹಂಕಾರ ಅನ್ನಬಹುದಾ?

ಇದಕ್ಕಿಂತ ಅಪಾಯಕಾರಿ ವಿದ್ಯಮಾನ ಏನೆಂದರೆ ಈ ಸರ್ವಾಧಿಕಾರಿಗಳ ಗ್ಯಾಂಗ್ ಚುನಾಯಿತ ಸರ್ಕಾರ ಇಲ್ಲದಿರುವಾಗಲೇ ಸಾವಿರಾರು ಕೋಟಿ ರೂ.ಗಳ ಹೊಸ ಯೋಜನೆಗಳಿಗೆ ಒಪ್ಪಿಗೆ ನೀಡುತ್ತಿರುವುದು. ಸಾವಿರಾರು ಎಕರೆ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ಫೈಲುಗಳನ್ನು ಕ್ಲಿಯರ್ ಮಾಡುತ್ತಿರುವುದು.

ಹಾಲಿ 18 ಸಾವಿರ ಕಿ.ಮೀ.ನಷ್ಟಿರುವ ರಾಜ್ಯ ಹೆದ್ದಾರಿಯಲ್ಲಿ 1790ಕಿ.ಮಿ.ನಷ್ಟು ರಸ್ತೆ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಿಕೊಡಲು ರಾಜ್ಯಪಾಲರ ಸಂಪುಟ ಒಪ್ಪಿಗೆ ಕೊಟ್ಟಿದೆ. 5 ವರ್ಷ ಕಾಲದ ಈ ಗುತ್ತಿಗೆ ಮೊತ್ತ 290 ಕೋಟಿ ರೂಪಾಯಿಗಳು.. ಇಲ್ಲಿ ರಸ್ತೆ ನಿರ್ವಹಣೆ ಅಂದರೆ ಹಳ್ಳ-ಗುಂಡಿ ಉಂಟಾದಾಗ ಅವನ್ನು ಮುಚ್ಚುವ ವ್ಯವಸ್ಥೆ. ಅದಕ್ಕೆಂದೇ ಲೋಕೋಪಯೋಗಿ ಇಲಾಖೆಯಲ್ಲಿ ಜನ ಇರುವಾಗ ಆ ಕೆಲಸವನ್ನು ಖಾಸಗಿಯವರಿಗೆ ಯಾಕೆ ವಹಿಸಬೇಕು??

ಇದು ಇಲ್ಲಿಗೂ ಮುಗಿಯುವುದಿಲ್ಲ, ರಾಜ್ಯ ಹೆದ್ದಾರಿಯಲ್ಲಿ ಓಡಾಡುವವರಿಂದ ಇನ್ನು ಮುಂದೆ ಶುಲ್ಕ ವಸೂಲಿ ಮಾಡುವ ಬಗ್ಗೆಯೂ ಈ ದುಷ್ಕರ ಗುಂಪು ಮಾತಾಡುತ್ತಿದೆ.

ಹೈವೇಗಳಿಗೆ ಸಂಬಂಧಿಸಿದಂತೆ ಠಾಕೂರ್ ಗ್ಯಾಂಗ್ ಇನ್ನೊಂದು ಅನಾಹುತಕಾರಿ ಹೆಜ್ಜೆ ಮುಂದಿಡುತ್ತಿದೆ. ಇದರ ಮೊದಲ ಹಂತವಾಗಿ 584 ಕಿ.ಮಿ.ನ ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಲು ಒಂದು ಸಾವಿರ ಕೋಟಿ ವಿದೇಶಿ ಸಾಲ ಎತ್ತಲು ಇವರು ಹೊರಟಿದ್ದಾರೆ. ಈ ಹಣ ಒಂದೋ ಜಪಾನಿನಿಂದ ಅಥವಾ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಬರುತ್ತಿದೆ. ಇದನ್ನು ಜನರೇ ತೀರಿಸಬೇಕು. ಆದರೆ ಈ ಸರ್ವಾಧಿಕಾರಿಗಳ ಗುಂಪು ಯಾವ ಷರತ್ತುಗಳಿಗೆ ಒಪ್ಪಿ ಇಷ್ಟೂ ಹಣ ತರಲು ಹೊರಟಿದ್ದಾರೆಂಬ ಬಗ್ಗೆ ರಾಜ್ಯದ ಜನತೆಗೇ ಮಾಹಿತಿ ಇಲ್ಲದಂತಾಗಿದೆ.

ತೀರಾ ಇತ್ತೀಚೆಗೆ ಇದೇ ರಾಜ್ಯಪಾಲರ ಕ್ಯಾಬಿನೆಟ್ ರಾಜ್ಯದ ವಿವಿಧ ಕಡೆ ಯಾವ್ಯಾವುದೋ ಯೋಜನೆಗಳಿಗಾಗಿ 1344 ಎಕರೆ ಕೃಷಿ ಭೂಮಿ ವಶಪಡಿಸಿಕೊಳ್ಳಲು ಅನುಮತಿ ಕೊಟ್ಟಿದೆ. ಅದರಲ್ಲಿ ಗುಲ್ಬರ್ಗಾದ ಚಿತ್ತಾಪುರ ತಾಲ್ಲೂಕಿನಲ್ಲಿ ಸಿಮೆಂಟ್ ಇಟ್ಟಿಗೆ ಕಾರ್ಖಾನೆ ಸ್ಥಾಪನೆಗೆ 975 ಎಕರೆ, ಬಾಗಲಕೋಟೆಯ ಸದಾಶಿವ ಶುಗರ್ಸ್‌ಗೆ 105 ಎಕರೆ, ಕೊಪ್ಪಳದ ಗವಿಸಿದ್ದೇಶ್ವರ ವಿದ್ಯಾವರ್ಧಕ ಟ್ರಸ್ಟಿಗೆ 102 ಎಕರೆ, ಕೊಳ್ಳೇಗಾಲದ ಹತ್ತಿರ ಗೋದ್ರೇಜ್ ಆಗ್ರೋ ವೆಟ...

ಗೀತಾ ಬಾಲಿ ಸಾರಥ್ಯದಲ್ಲಿ ಮಹಿಳಾ ವಿವಿ ಸುಧಾರಿಸುವುದೇ?

ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ ಬಿಜಾಪುರದಲ್ಲಿ ಆರಂಭವಾಗುತ್ತಿದ್ದಂತೆಯೇ ಕರ್ನಾಟಕದ ಮಹಿಳೆಯರಲ್ಲಿ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಮಹಿಳೆಯರಲ್ಲಿ ಭರವಸೆಯನ್ನು ಹುಟ್ಟುಹಾಕಿದ್ದಂತೂ ನಿಜ. ಆದರೆ, ಕರ್ನಾಟಕ ಜನತೆಯ ದುರಾದೃಷ್ಟವೋ ಏನೋ ಆ ಭರವಸೆಗಳನ್ನೆಲ್ಲಾ ವಿ.ವಿ.ಯ ಮೊದಲ ಕುಲಪತಿಯಾಗಿ ವಕ್ಕರಿಸಿದ ಸಯಿದಾ ಅಖ್ತರ್ ಮಣ್ಣುಪಾಲು ಮಾಡಿದಳು. ಈಕೆ ವಿ.ವಿಯನ್ನು ಎಷ್ಟರ ಮಟ್ಟಿಗೆ ಗೆಬರಲು ಸಾಧ್ಯವೋ ಅಷ್ಟರಮಟ್ಟಿಗೆ ಗೆಬರಿಕೊಬ್ಬಬಿಟ್ಟಳು. ಅವಳ ಹಗಲು ದರೋಡೆಗಳು, ಸ್ವಜನಪಕ್ಷಪಾತ, ಭ್ರಷ್ಟಾಚಾರಗಳು, ಅಕ್ರಮ ದಂಧೆಗಳು ಇಡೀ ರಾಜ್ಯದಾದ್ಯಂತ ಮಾರ್ಧನಿಸಿದ ಪರಿಣಾಮವಾಗಿ ಅವಳೇ ಜಾಗ ಖಾಲಿಮಾಡಬೇಕಾದ ಪರಿಸ್ಥಿತಿ ಬಂತು. ಈಗ ಆ ಸ್ಥಾನಕ್ಕೆ ಬೆಂಗಳೂರು ವಿ.ವಿ.ಯ ಗೀತಾ ಬಾಲಿ ಬಂದಿದ್ದಾರೆ. ಅಧ್ವಾನವೆದ್ದು ಹೋಗಿರುವ ವಿವಿಯನ್ನು ಸರಿದಾರಿಗೆ ತರಬೇಕಾದ ಮಹತ್ತರ ಜವಾಬ್ದಾರಿ ಅವರ ಮೇಲಿದೆ.

ಅಖ್ತರ್ ಅವಾಂತರಗಳು ಮತ್ತು ಚೆಡ್ಡಿಗಳ ಅರೆಬಾಟಗಳು

ಮಹಿಳಾ ವಿವಿಯ ಅಭಿವೃದ್ಧಿಗೆಂದು ಹರಿದುಬಂದ ಹಣ ವಿವಿ ಕಡೆ ಹೋಗದೇ ಅಖ್ತರಳ ಸ್ವಂತ ಖಜಾನೆ ಕಡೆಗೆ ಹರಿದಿದ್ದೇ ಜಾಸ್ತಿ. ಕುಳಿತದ್ದಕ್ಕೂ ಬಿಲ್, ನಿಂತದ್ದಕ್ಕೂ ಬಿಲ್ ಹಾಕಿದ ಈ ಬಿಲ್ ರಾಣಿಯ ಅವಧಿಯಲ್ಲಿ ವಿವಿ ಸೊರಗಿ ಸಣಕಲಾಗಿದ್ದಂತೂ ಸತ್ಯ. ತನ್ನ ಕುಲಪತಿ ಚೇಂಬರ್ ದುರಸ್ತಿಗೆಂದು ಈಕೆ ಹಾಕಿದ್ದು ನಾಲ್ಕು ಲಕ್ಷಗಳ ಬಿಲ್. ಆದರೂ ಚೇಂಬರಿನಲ್ಲಿ ಇದ್ದದ್ದು ಎರಡು ಟೇಬಲ್ಲು ಮತ್ತು ನಾಲ್ಕು ಕುರ್ಚಿಗಳು ಮಾತ್ರ. ಮಾಜಿ ಶಾಸಕನ ಮಗ ರಾಜು ಅಂಗೂರ್‌ನ ಮನೆಯನ್ನು ಬಾಡಿಗೆಗೆ ಪಡೆದಿದ್ದ ಅಖ್ತರ್ ಅದಕ್ಕೆ ಪ್ರತಿ ತಿಂಗಳು ವಾಸ್ತವದಲ್ಲಿ ಕಟ್ಟುತ್ತಿದ್ದ ಬಾಡಿಗೆ ಏಳು ಸಾವಿರವಾದರೂ ಬಿಲ್‌ನಲ್ಲಿ ನಮೂದಿಸುತ್ತಿದ್ದುದು 17 ಸಾವಿರ. ಅವಳ ವಿದ್ಯುತ್ ಶುಲ್ಕವಂತೂ ಪ್ರತೀ ತಿಂಗಳೂ ಸರಿಯಾಗಿ ಮೂರು ಸಾವಿರ. ಒಂಚೂರೂ ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ!



ವಿಶ್ವವಿದ್ಯಾಲಯದ ಹೆಸರಿನಲ್ಲಿ ಈಕೆ ಅನಗತ್ಯವಾಗಿ ಆರು ಕಾರು ಖರೀದಿಸಿದ್ದು ಅವು ವಿ.ವಿ.ಯ ಕೆಲಸಕ್ಕೆ ಉಪಯೋಗವಾಗುವುದಕ್ಕಿಂತ ಹೆಚ್ಚಾಗಿ ಗಂಡನೊಂದಿಗೆ ತಿರುಗಾಡಲು ಬಳಕೆಯಾಗಿದ್ದೇ ಜಾಸ್ತಿ, ಆ ಕಾರುಗಳು ತಿಂಗಳು ಗಟ್ಟಲೇ ನಿಂತ ಜಾಗದಲ್ಲಿಯೇ ನಿಂತಿದ್ದರೂ ಅವುಗಳಿಗೂ ಪೆಟ್ರೋಲ್ ಕುಡಿಸಿ ಬಿಲ್ ತೆಗೆದುಕೊಂಡ ಖ್ಯಾತಿ ಇವಳದು.

ಈಕೆಗೆ ಹೊಟ್ಟೆತುಂಬಾ ಬಿರಿಯಾನಿ ತಿನ್ನಿಸಿ ಅಷ್ಟೋ ಇಷ್ಟೋ ದಕ್ಷಿಣೆ ಕೊಟ್ಟಿದ್ದ 87 ಜನರನ್ನು ಬೇಕಾಬಿಟ್ಟಿಯಾಗಿ ನೇಮಕ ಮಾಡಿಕೊಂಡಿದ್ದಳು. ಅದೂ ದೊಡ್ಡ ರಾದ್ಧಾಂತವಾಗಿ ಕೊನೆಗೆ ರಾಜ್ಯಪಾಲರೇ ಎಲೆ-ಅಡಿಕೆ ಹಾಕಿಕೊಂಡು ಚೆನ್ನಾಗಿ ಉಗಿದು ಈ ನೇಮಕಾತಿಯನ್ನು ರದ್ದುಗೊಳಿಸಿದ್ದರು. ಈಗ ಅನುಕಂಪದ ಆಧಾರದಲ್ಲಿ ಅವರೆಲ್ಲಾ ಮುಂದುವರೆಯುತ್ತಿದ್ದಾರೆಂಬುದು ಬೇರೆ ಮಾತು.

ಅಖ್ತರ್‌ಳ ಅವಾಂತರಗಳಿಂದಾಗಿ ಚೆಡ್ಡಿಗಳಿಗೆ ಒಂದು ಹೊಸ ಇಶ್ಯೂ ಸಿಕ್ಕಂತಾಗಿಬಿಟ್ಟಿತು. ಯಾಕೆಂದರೆ, ಅಖ್ತರ್ ಒಬ್ಬ ಮುಸ್ಲಿಮ್ ಮಹಿಳೆ! ಅಖ್ತರ್ ವಿರೋಧಿ ದೊಂಬಿಯಲ್ಲಿ ಪ್ರಮುಖವಾಗಿ ಪ್ರಚಾರ ಗಿಟ್ಟಿಸಿಕೊಂಡ ರಿಜಿಸ್ಟ್ರಾರ್ ಸೂಗೂರ್ ಮೂಲತಃ ಚೆಡ್ಡಿಗಳ ತುಂಡು. ಈತ ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡಿದ್ದಕ್ಕಿಂತ ಚೆಡ್ಡಿ ಪಟ್ಟಣ ಶೆಟ್ಟಿಯೊಂದಿಗೆ ಸೇರಿ ರಾಜಕಾರಣ ಮಾಡಿದ್ದೇ ಜಾಸ್ತಿ. ಅಖ್ತರ್ ಮುಸ್ಲಿಮ್ ಎಂಬ ಕಾರಣಕ್ಕೆ ಅವಳ ವಿರುದ್ಧ ಗಲಾಟೆ ಮಾಡುತ್ತಲೇ ಬಿಜೆಪಿಗೆ ಹತ್ತಿರವಾದ. ಅಖ್ತರ್ ಇಲ್ಲಿಂದ ಕಾಲ್ತೆಗೆದ ಮೇಲೆ ವಿವಿಯನ್ನು ಕಂಟ್ರೋಲ್ ಮಾಡುತ್ತಾ ತನ್ನದೇ ಸಾಮ್ರಾಜ್ಯವನ್ನು ಕಟ್ಟಿಕೊಂಡಿದ್ದಾನೆ.

ವಿಶ್ವವಿದ್ಯಾಲಯ ಸುಧಾರಿಸುತ್ತದೆಯೇ

ಈ ಪ್ರಶ್ನೆಗೆ ರಾಜ್ಯಪಾಲರೇ ಉತ್ತರಿಸಬೇಕು. ಜನರ ಮೂಗಿಗೆ ತುಪ್ಪ ಸವರಿದಂತೆ ನಾಮಕಾವಸ್ತೆಗೆ ಒಂದು ಮಹಿಳಾ ವಿಶ್ವವಿದ್ಯಾಲಯ ಅಂತ ಸ್ಥಾಪಿಸಿಬಿಟ್ಟರೆ ಆಗುವುದಿಲ್ಲ, ಅದಕ್ಕೆ ಬೇಕಾದ ಎಲ್ಲ ಅಗತ್ಯಗಳನ್ನು ಪೂರೈಸಬೇಕಾಗುತ್ತದೆ. ರಾಜ್ಯದಲ್ಲಿ ಇರುವುದು ಇದೊಂದೇ ಮಹಿಳಾ ವಿಶ್ವವಿದ್ಯಾಲಯವಾದರೂ ರಾಜ್ಯದ ಎಲ್ಲಾ ಮಹಿಳಾ ಕಾಲೇಜುಗಳೂ ಇದರ ವ್ಯಾಪ್ತಿಗೆ ಬರುವುದಿಲ್ಲ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳ ಅಡಿಯಲ್ಲಿರುವ ಮಹಿಳಾ ಕಾಲೇಜುಗಳು ಮಾತ್ರವೇ ಇದರ ವ್ಯಾಪ್ತಿಗೆ ಬರುತ್ತವೆಯೇ ವಿನಃ ದಕ್ಷಿಣ ಅಥವಾ ಕರಾವಳಿ ಕರ್ನಾಟಕದ ಯಾವೊಂದು ಮಹಿಳಾ ಕಾಲೇಜುಗಳೂ ಇದಕ್ಕೆ ಅಫಿಲಿಯೇಟ್ ಆಗಿಲ್ಲ, ಅಲ್ಲದೇ, ಈ ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಒಂದು ಸ್ವಂತ ಕಾಲೇಜು ಕೂಡ ಇಲ್ಲ, ಪದವಿ ಹಂತದಲ್ಲಿ ಹಲವಾರು ಕೋರ್ಸ್‌ಗಳಿದ್ದರೂ ಪಿಜಿ ಹಂತದಲ್ಲಿ...

ಫ್ಯಾಕ್ಟರೀಸ್‌ಗೆ 60 ಎಕರೆ, ಹಿರಿಯೂರಿನಲ್ಲಿ ಸೆಂಚುರಿ ಸೀಡ್ಸ್ ಎಂಬುವವರಿಗೆ 28 ಎಕರೆ ಕೊಡಲು ಒಪ್ಪಿಗೆ ನೀಡಲಾಗಿದೆ.

ಇವೆಲ್ಲಾ ಖಾಸಗಿ ಕಂಪನಿಗಳು. ಇವುಗಳ ಮಾಲೀಕರ್ಯಾರು, ಕಂಪನಿಗಳ ಹಿನ್ನೆಲೆ ಏನೆಂಬುದೇ ಯಾವನಿಗೂ ಗೊತ್ತಿಲ್ಲ. ಈ ವಿವರಗಳು ರಾಜ್ಯಪಾಲರಿಗೆ ಮತ್ತವರ ಪುಂಡ ಪಟಾಲಂಗೆ ತಿಳಿದಿದ್ದರೆ ಸಾಕೆನ್ನುವ ನಿಲುವು ಇವರದು.

ಚಿತ್ತಾಪುರದ ಸಿಮೆಂಟ್ ಇಟ್ಟಿಗೆ ಕಾರ್ಖಾನೆ (ಹಾಲೋ ಬ್ಲಾಕ್) ವಿಚಾರವನ್ನೇ ನೋಡಿ. ಬೆಂಗಳೂರು ಸುತ್ತಮುತ್ತ 100x200 ಅಡಿ ಜಾಗವಿದ್ದರೆ ಅಲ್ಲೇ ಇಂಥ ಮಿನಿ ಘಟಕಗಳು ಕೆಲಸ ಮಾಡುತ್ತಿವೆ. ಹೀಗಿರುವಾಗ ಜುಜುಬಿ ಸಿಮೆಂಟ್ ಇಟ್ಟಿಗೆ ಕಾರ್ಖಾನೆಗೆ 975 ಎಕರೆ ಯಾಕೆ ಬೇಕು. ಇದು ಭೂ ಕಬಳಿಕೆಯಲ್ಲವೇ?

ಠಾಕೂರ್ ಬಳಿ ಇದಕ್ಕೆ ಉತ್ತರ ಇದೆಯಾ?

ಈ ಸರ್ವಾಧಿಕಾರಿಗಳ ಹುಚ್ಚಾಟಕ್ಕೆ ಕೊನೆ ಮೊದಲೊಂದೂ ಇರುವಂತಿಲ್ಲ.

ಕಳೆದ ತಿಂಗಳು ಇದ್ದಕ್ಕಿದ್ದಂತೆ ರಾಜ್ಯ ಸರ್ಕಾರಿ ಕಚೇರಿಗಳಲ್ಲಿ ವಾರಕ್ಕೆ 5 ದಿನದ ಕೆಲಸದ ಪದ್ಧತಿ ತರುವುದಾಗಿ ಹೇಳಿದ್ದಾರೆ. ಇದೊಂದು ಚಿಲ್ಲರೆ ಚಿಂತನೆ. ಈ ಹಿಂದೆ ಧರ್ಮವೀರ ರಾಜ್ಯಪಾಲರಾಗಿದ್ದಾಗಲೂ ಇಂತದ್ದೇ ಚೇಷ್ಟೆ ನಡೆದಿತ್ತು. ನಂತರ 1983ರಲ್ಲಿ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗಲೂ ಈ ಪ್ರಯೋಗ ನಡೆಸಿ ವಿಫಲವಾಗಿತ್ತು.

ಈಗ ಮತ್ತದೇ ಅವಿವೇಕದ ವರ್ತನೆಯನ್ನು ಠಾಕೂರ್ ಗ್ಯಾಂಗ್ ತೋರಿಸುತ್ತಿದೆ. ಸರ್ಕಾರಿ ನೌಕರರು ವಾರಕ್ಕೆ 6 ದಿನ ಕೆಲಸ ಮಾಡಿದರೂ ಜನರ ಕೆಲಸಗಳು ಬೇಗನೆ ಆಗುತ್ತಿಲ್ಲ. ಇನ್ನು 5 ದಿನದ ನಿಯಮ ಬಂದರೆ ಏನು ಗತಿ?

ಠಾಕೂರ್ ಬಂದ ಹೊಸದರಲ್ಲಿ ಕೆಲ ದಿನ ಜನತಾ ದರ್ಶನವೆಂಬ ನಾಟಕ ನಡೆಸಿದರು. ಆಮೇಲೆ ಇದು ಕಾಟಾಚಾರಕ್ಕೆಂದು ನಡೆಯುತ್ತಿದೆ. ನಂತರ IAS_IPS ಸೇರಿದಂತೆ ನೂರಾರು ಅಧಿಕಾರಿಗಳ ವರ್ಗಾವಣೆ ನಡೆಸಿದರು. ಇವರಲ್ಲಿ ಕಾಂಗ್ರೆಸ್‌ನವರ ಚಿತಾವಣೆ ಇದ್ದಿದ್ದು ನಿಜ. ಆದರೆ ಬಹುತೇಕ ಟ್ರಾನ್ಸ್‌ಫರ್‌ಗಳು ಲಂಚದ ಹಣಕ್ಕಾಗಿ ನಡೆದಿವೆ. ಠಾಕೂರ್ ಗ್ಯಾಂಗ್‌ನಲ್ಲಿರುವ ಎಲ್ಲರೂ ಶುದ್ಧ ಹಸ್ತರೇನಲ್ಲ. ಚುನಾಯಿತ ಸರ್ಕಾರ ಇಲ್ಲದ ಸಮಯದಲ್ಲಿ ಕೇವಲ ನಿತ್ಯ ಆಡಳಿತದ ವ್ಯವಹಾರಗಳನ್ನು ಸುಗಮವಾಗಿ ನಿರ್ವಹಿಸಬೇಕಿದ್ದ ಈ ಠಾಕೂರ್ ಮತ್ತವರ ಸರ್ವಾಧಿಕಾರಿಗಳ ಗ್ಯಾಂಗ್‌ನ ಆಟಾಟೋಪ ಮಿತಿಮೀರುತ್ತಿದೆ.

ಇವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳಾಗಲಿ, ಅಧಿಕಾರಿ ವರ್ಗಕ್ಕಿರಬೇಕಾದ ಮಿತಿಗಳಾಗಲಿ ಗೊತ್ತಿದ್ದಂತಿಲ್ಲ.

ಇವರಿಗೆ ಕಡಿವಾಣ ಹಾಕುವವರ್‍ಯಾರು?

■ ಈಶ


ಬೆರಳೆಣಿಕೆಯಷ್ಟು ಕೋರ್ಸುಗಳು ಮಾತ್ರವೇ ಇವೆ. ಅಂದರೆ, ಡಿಗ್ರಿ ಮುಗಿಸಿದವರಿಗೆ ಈ ವಿಶ್ವವಿದ್ಯಾಲಯದಲ್ಲಿ ಪಿಜಿ ಕೋರ್ಸುಗಳನ್ನು ಮಾಡಲು ಆಗುವುದೇ ಇಲ್ಲ. ಅವರೆಲ್ಲಾ ಬೇರೆ ಬೇರೆ ವಿವಿಗಳ ಮೊರೆ ಹೋಗಬೇಕಾಗುತ್ತದಷ್ಟೆ.

ಈ ಮಹಿಳಾ ವಿಶ್ವವಿದ್ಯಾಲಯ ಪ್ರಾರಂಭವಾಗಿ ಹಲವಾರು ವರ್ಷಗಳು ಕಳೆದಿದ್ದರೂ ಇದಕ್ಕೆ ಇಂದಿಗೂ ಒಂದು ಸ್ವಂತ ಕಟ್ಟಡ ಇಲ್ಲ. ಇತ್ತೀಚೆಗೆ ತೊರವಿ ಕ್ಯಾಂಪ್ ಸಿಕ್ಕಿದೆಯಾದರೂ ಸಂಪೂರ್ಣ ವಿ.ವಿ. ಸ್ಥಳಾಂತರಗೊಂಡಿಲ್ಲ. ಹೊರಗಡೆಯಿಂದ ಇಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಬರುವ ಮಹಿಳೆಯರಿಗೆ ಸರಿಯಾದ ಒಂದು ಹಾಸ್ಟೆಲ್ ಸೌಲಭ್ಯ ಕೂಡ ಇಲ್ಲ. ತೊರವಿ ಕ್ಯಾಂಪಸ್ ಹಳೆಯ ಕಟ್ಟಡದಿಂದ ಹತ್ತಾರು ಕಿ.ಮೀ. ದೂರವಿದೆ. ಅಲ್ಲಿಗೆ ಸರಿಯಾದ ಸಾರಿಗೆ ವ್ಯವಸ್ಥೆ ಕೂಡ ಇಲ್ಲ.

ಒಟ್ಟಾರೆಯಾಗಿ ಮಹಿಳಾ ವಿಶ್ವವಿದ್ಯಾಲಯವನ್ನು ಸುಧಾರಿಸುವ ಮೂಲಕ ಅದು ಯಾವ ಉದ್ದೇಶಕ್ಕಾಗಿ ಸ್ಥಾಪನೆಯಾಯಿತೋ ಅದನ್ನು ಈಡೇರಿಸಬೇಕಿದೆ. ವಿವಿಗೆ ಅಗತ್ಯ ಸೌಲಭ್ಯಗಳೆಲ್ಲವನ್ನೂ ಒದಗಿಸುವ ಜೋಣೆಗಾರಿಕೆ ಸರ್ಕಾರದ ಮೇಲಿದ್ದರೆ, ಆಬ್ಬರ್ ಅವಾಂತರದಿಂದ ಅಧ್ವಾನಗೊಂಡಿರುವ ವಿ.ವಿಯನ್ನು ಆಡಳಿತಾತ್ಮಕವಾಗಿ ಸರಿದಾರಿಗೆ ತರುವ ಮಹತ್ತರ ಜವಾಬ್ದಾರಿ ಗೀತಾ ಬಾಲಿಯ ಮೇಲಿದೆ. ಅವರವರ ಜೋಣೆಗಾರಿಕೆಯನ್ನು ಅವರು ನಿಭಾಯಿಸುತ್ತಾರೆಯೋ ಎಂಬ ಪ್ರಶ್ನೆಗೆ ಭವಿಷ್ಯವೇ ಉತ್ತರಿಸಲಿದೆ.

■ ಹುರುಳಿಕುಪ್ಪೆ ವಿನಯ್

ಮಂಡ್ಯ: ಮಾದೇಗೌಡರ ಕಳ್ಳಾಟಕ್ಕೆ ಒದೆ ಬಿತ್ತು



ಇದುವರೆಗೂ ಮಂಡ್ಯ ಜಿಲ್ಲೆಯ ಜನಕ್ಕೆ, ಅಷ್ಟೇ ಏಕೆ ದಕ್ಷಿಣ ಕರ್ನಾಟಕದ ಬಹುತೇಕ ಜನರಿಗೆ ಜಿ. ಮಾದೇಗೌಡರ ಬಗ್ಗೆ ಒಂದಷ್ಟು ವಿಶ್ವಾಸವಿತ್ತು. ಇಂದು ನೂರಾರು, ಸಾವಿರಾರು ಎಕರೆಗಳನ್ನು ಒಂದೇ ಏಟಿಗೆ ಗುಳುಂ ಎಂದು ನುಂಗಿಬಿಡುತ್ತಿರುವ, ಸಾವಿರಾರು ಕೋಟಿ ಸಾರ್ವಜನಿಕ ಹಣವನ್ನು ಹಾಡುಹಗಲೇ ಕೊಳ್ಳೆ ಹೊಡೆಯುತ್ತಿರುವ ಮಂತ್ರಿಮಹೋದಯರು ನಮ್ಮ ನಡುವಿರುವಾಗ ಜಿ. ಮಾದೇಗೌಡರಂಥ ರಾಜಕಾರಣಿಗಳು ಶುದ್ಧಹಸ್ತರಾಗಿದ್ದುಕೊಂಡೇ ರಾಜಕಾರಣ ಮಾಡಿದವರು. ಕೊಳೆತು ನಾರುತ್ತಿರುವ ಈ ರಾಜಕೀಯ ವ್ಯವಸ್ಥೆಯಲ್ಲಿ ಒಬ್ಬನಾದರೂ ಸಾಚಾ ಇದ್ದಾರಲ್ಲ ಅಂತ ಅವರನ್ನು ಮೆಚ್ಚಿಕೊಂಡು ಮಾತನಾಡುವವರು ನಿಮಗೆ ಹಾದಿಬೀದಿಯಲ್ಲಿ ಸಿಗುತ್ತಿದ್ದರು. ಅವರೊಬ್ಬ ನಿಷ್ಠುರವಾದಿ ಎಂಬ ಅಭಿಪ್ರಾಯ ಜನಜನಿತವಾಗಿತ್ತು. ಕಾವೇರಿ ಚಳವಳಿಯ ಅಗ್ರಗಣ್ಯ ನಾಯಕನೆಂದೇ ಅವರು ಪ್ರಸಿದ್ಧರಾಗಿದ್ದರು.

ವಾಸ್ತವದಲ್ಲಿ ಕಾವೇರಿ ಚಳವಳಿ ಜಿ.ಮಾದೇಗೌಡರೊಬ್ಬರ ಸಾಧನೆಯೇನಲ್ಲ. ಹತ್ತಾರು ಶಕ್ತಿಗಳು, ಸಮಸ್ಯೆಗೆ ಬಲಿಪಶುಗಳಾದ ರೈತರು ಒಗ್ಗೂಡಿ ಕಟ್ಟಿದ ಸಾಮೂಹಿಕ ಚಳವಳಿಗೆ ಹಲವಾರು ಬಾರಿ ಶಾಸಕರೂ, ರಾಜ್ಯ ಸರ್ಕಾರದ ಮಂತ್ರಿಗಳೂ, ಮಂಡ್ಯ ಜಿಲ್ಲೆಯ ಸಂಸದರೂ ಆಗಿದ್ದ ಜಿ. ಮಾದೇಗೌಡರು ದಿಢೀರ್ ನಾಯಕರಾಗಿದ್ದರು. ಹೀಗಿದ್ದರೂ ಮಂಡ್ಯದ ಜನತೆ ಮಾತ್ರ ಅವರ ಮೇಲೆ ಇತ್ತೀಚಿನವರೆಗೂ ಗೌರವವನ್ನಿಟ್ಟುಕೊಂಡೇ ಬಂದಿದ್ದರು.

ಆದರೆ, ಇವರು ಇತ್ತೀಚೆಗೆ ಮಾಡಿರುವ ಜನದ್ರೋಹಿ ಕೆಲಸಗಳು ಯಾವಾಗ ಒಂದೊಂದೇ ಬಯಲಾಗತೊಡಗಿದವೋ ಅವರ ಮೇಲಿದ್ದ ಜನರ ವಿಶ್ವಾಸವೂ ಕಳಚಿಬೀಳಲಾರಂಭಿಸಿತು. ಈಗ ಮಂಡ್ಯದಲ್ಲಿ ಅವರ ಪರಿಸ್ಥಿತಿ ಅದ್ಯಾವ ಮಟ್ಟಕ್ಕೆ ಇಳಿದಿದೆಯೆಂದರೆ ಮೊನ್ನೆ ಫೆಬ್ರವರಿ 15ರಂದು ಅವರೇ ಕಟ್ಟಿಸಿದ ಆತ್ಮಲಿಂಗೇಶ್ವರನ ಸನ್ನಿಧಿಯಲ್ಲಿ ಮೂವರು ಸ್ಥಳೀಯರು ಅವರ ಮೇಲೆರಗಿ ಅಂಗಿ ಹರಿದು ಹಾಕಿದಾಗ "ಮಾದೇಗೌಡರ ಮೇಲೆ ಹಲ್ಲೆ" ಎಂದು ದೊಡ್ಡ ಸುದ್ದಿಯಾಯಿತಾದರೂ ಅದಕ್ಕೆ ಜನ ಮಾತ್ರ ಕ್ಯಾರೆ ಎನ್ನಲಿಲ್ಲ. ಇದು ಗುರುದೇವರಹಳ್ಳಿಯ ಮಾದೇಗೌಡರಿಗೆ ತಮ್ಮ ಸ್ವಂತ ಊರಿನಲ್ಲಿಯೇ ಬಂದಿರುವ ಪರಿಸ್ಥಿತಿ. ಅದಕ್ಕೆ ಕಾರಣವೂ ಇಲ್ಲದಿಲ್ಲ.

ಕಾವೇರಿ ವಿವಾದದ ಅಂತಿಮ ತೀರ್ಪು ಬಂದ ಸಂದರ್ಭದಲ್ಲಿಯೇ ಚಳವಳಿಗಿಳಿದಿದ್ದವರು ಜಿ. ಮಾದೇಗೌಡರಿಗೆ ಕ್ಯಾರೇ ಅನ್ನುತ್ತಿರಲಿಲ್ಲ. 2003ರಲ್ಲಿ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಸುಪುತ್ರ ಮಧು ಮಾದೇಗೌಡನನ್ನು ಎಂಎಲ್‌ಎ ಮಾಡುವುದಕ್ಕಾಗಿ ಪಡಬಾರದ ಶ್ರಮ ಪಟ್ಟಿದ್ದರು. ಆತನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವುದಕ್ಕಾಗಿ ಇಡೀ ಚಳವಳಿಯನ್ನೇ ಅವರು ಬಲಿಕೊಟ್ಟರು ಎಂದು ಜನ ಮಾತನಾಡಿಕೊಳ್ಳುತ್ತಿರುವುದು ಸಂಪೂರ್ಣ ಸುಳ್ಳೇನಲ್ಲ. ಇದೆಲ್ಲಾ ಬಯಲಿಗೆ ಬಂದಿದ್ದರೂ ಅವರು ತಮ್ಮ ಗೌಡಿಕೆಯ ಗತ್ತನ್ನು ಮಾತ್ರ ಬಿಟ್ಟಿಲ್ಲ. ಈಗ್ಗೆ ಮೂರು ತಿಂಗಳ ಹಿಂದೆಯಷ್ಟೇ ಆಟೋ ಚಾಲಕನೊಬ್ಬನೊಂದಿಗೆ ಅನಗತ್ಯ ಕ್ಯಾತೆ ತೆಗೆದು ಜಗಳವಾಡಿದ್ದರು. ಇವರು ಮಾದೇಗೌಡ ಎಂದು ತಿಳಿಯದಿದ್ದ ಡ್ರೈವರ್ ಕೂಡ ತಿರುಗಿ ಹಿಗ್ಗಾಮುಗ್ಗಾ ಬಯ್ದು ಅವರ ಮುಖದಲ್ಲಿ ನೀರಿಳಿಸಿ ನಡುಬೀದಿಯಲ್ಲೇ ಅವರನ್ನು ಬಿಟ್ಟುಹೋಗಿದ್ದ.

ಮೊನ್ನೆ ನಡೆದ ಘಟನೆಯನ್ನೇ ತೆಗೆದುಕೊಳ್ಳಿ. ಕೆ.ಎಂ. ದೊಡ್ಡಿಯ ಹತ್ತಿರ ಹನುಮಂತನಗರದಲ್ಲಿ ಆತ್ಮಲಿಂಗೇಶ್ವರನ ದೇವಸ್ಥಾನ ಕಟ್ಟಿಸಲು ಮುಂದಾದ ಮಾದೇಗೌಡರು ತಾವು ಏನು ಮಾಡಿದರೂ ನಡೆಯುತ್ತೆ ಎಂಬ ಹುಂಬು ಗತ್ತಿನಿಂದ ಕಂಡವರ ಜಾಗಕ್ಕೆ ಬೇಲಿ ಹಾಕಿಬಿಟ್ಟರು. ಕೇಳಲು ಹೋದವರಿಗೆಲ್ಲಾ 'ದೇವರ ಕಾರ್ಯಕ್ಕೆ ಅಡ್ಡಿ ಮಾಡಬಾರದು' ಎಂಬ ಭಯವನ್ನು ತುಂಬ ಕಳಿಸಿದ್ದರು. ಇವತ್ತು ದೇವಸ್ಥಾನದ ಜೊತೆಗೆ ಪ್ರಕೃತಿ ಚಿಕಿತ್ಸಾ ಧಾಮ ಮತ್ತು ಕಾಲೇಜನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ, ಇದಕ್ಕಾಗಿ ಮಾದೇಗೌಡರು ಬಲವಂತದಿಂದ ಭೂಮಿ ಕಳೆದುಕೊಂಡ ರೈತರ ಪರಿಸ್ಥಿತಿಯೇನು? ಅದೇ ಮೊನ್ನೆಯ ಜಗಳಕ್ಕೆ ಕಾರಣವಾಗಿದ್ದು.

84-85ರ ಸಮಯದಲ್ಲೂ ಕಬಡಕೆರೆ ಸರ್ಕಾರಿ ಗೋಮಾಳವನ್ನು ಪತ್ತೆ ಹಚ್ಚಿದ ಗೌಡರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಅದರಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿದ್ದ ಅನೇಕ ರೈತರನ್ನು ಹಾಗೂ ಗರೀಬೀ ಸೈಟ್‌ಗಳಲ್ಲಿ ವಾಸವಿದ್ದವರನ್ನು ಓಡಿಸಿದರು. ಆದರೆ ಅವರ್‍ಯಾರಿಗೂ ಸೂಕ್ತ ಪರಿಹಾರವೇ ಸಿಗಲಿಲ್ಲ. ದಬ್ಬಿಡಿಕೆ ಜವರಾಯ ಎಂಬುವವರ ಎರಡೆಕರೆ ಜಮೀನಿಗೆ ಸಮನಾಗಿ ಸಂಗಯ್ಯನ ದೊಡ್ಡಿ ಎಂಬಲ್ಲಿ ಒಂದೆಕರೆ ಕೊಟ್ಟರೆ, ಸೊರೆಕೆ, ಬಿಂಗೇಗೌಡ, ದೊಳ್ಳ ಹನುಮೇಗೌಡ ಮುಂತಾದ ರೈತರಿಗಲ್ಲಿರಿಗೂ ತಿರುಪತಿ ನಾಮವೇ ಗತಿಯಾಯ್ತು. ಇನ್ನೊಂದಿಷ್ಟು ಜನಕ್ಕೆ ಪಾತ್ರೆಗುಂಡಿ ಎಂಬಲ್ಲಿ ಒಂದಿಷ್ಟು ಭೂಮಿ ಕೊಟ್ಟು ನಾಟಕವಾಡಿ ಕೈತೊಳೆದುಕೊಳ್ಳಲಾಯ್ತು. ಇವರೆಲ್ಲರಿಗಿಂತ ದೊಡ್ಡ ಮಟ್ಟದ ಮೋಸ ನಡೆದದ್ದು ಮಾತ್ರ ಕೆ.ಎಚ್ ನಿಂಗಯ್ಯ ಎಂಬ ರೈತನ ವಿಚಾರದಲ್ಲಿ. ನಿಂಗಯ್ಯ, ಹನುಮೇಗೌಡ ಮತ್ತು ಬೊಮ್ಮೇಗೌಡ ಎಂಬ ಮೂವರು ಅಣ್ಣತಮ್ಮಂದಿರ ಪಕ್ಕಾ ಖಾತೆ ಜಮೀನಿನಲ್ಲಿ 16 ಗುಂಟೆ ಭೂಮಿ ನಾಲಾಕೋಡಿಗೆಂದು ಸ್ವಾಧೀನವಾಗಿತ್ತು. ಹತ್ತು ಗುಂಟೆ ಜಮೀನನ್ನು ಇಂದಿನ ಆತ್ಮಲಿಂಗೇಶ್ವರ ದೇವಸ್ಥಾನದ ಗೇಟಿನ ಎಡಭಾಗದಲ್ಲಿರುವ ಕೊಳದ ನಿರ್ಮಾಣಕ್ಕೆ ಬರೆದುಕೊಟ್ಟಿದ್ದರು. ಆದರೆ, ಮಾದೇಗೌಡರು ಎಂಥ ಚಾಣಾಕ್ಷ ಎಂದರೆ ಅವರ ಇಡೀ ಎಂಟು ಎಕರೆ ಭೂಮಿಗೇ ಬೇಲಿಹಾಕಿಕೊಂಡರು!

ಆದರೆ, ನಿಂಗಯ್ಯ ಸುಮ್ಮನಿರುವ ಜಾಯಮಾನದವನಲ್ಲ. ಆತ ಮಾದೇಗೌಡರ ವಿರುದ್ಧ ತಿರುಗಿಬಿದ್ದ. ಅದಕ್ಕೆ ಅವನಿಗೆ ಸಿಕ್ಕ ಪ್ರತಿಫಲವೆಂದರೆ, ಮಾದೇಗೌಡರ ಅಧ್ಯಕ್ಷತೆಯ ಭಾರತೀ ಎಜುಕೇಶನ್ ಟ್ರಸ್ಟ್ ಅಟೆಂಡರ್ ಪುಟ್ಟಸ್ವಾಮಿಯ ಕೊಲೆಯತ್ನದ ಸುಳ್ಳು ಕೇಸು. 94-95ರ ಹೊತ್ತಿಗೆ ಅಂದಿನ ಮಂಡ್ಯ ಜಿಲ್ಲಾಧಿಕಾರಿಯಾಗಿದ್ದ ವೀರಭದ್ರಾಚಾರಿಯ ಮುಖಾಂತರ ಆ ಜಮೀನನ್ನು ಭಾರತೀ ಟ್ರಸ್ಟ್‌ಗೆ ವರ್ಗಾಯಿಸಿಕೊಂಡುಬಿಟ್ಟರು. ಆದರೆ, ನಿಂಗಯ್ಯ ಸುಮ್ಮನಿರಬೇಕಲ್ಲ. ಆತ ಕೋರ್ಟ್ ಮೆಟ್ಟಲೇರಿದ. ಜನವರಿ 9ರಂದು ತೀರ್ಪು ನೀಡಿದ ಹೈಕೋರ್ಟ್ ಆ ಜಮೀನು ನಿಂಗಯ್ಯನಿಗೇ ಸೇರಬೇಕೆಂದು ಹೇಳಿತು. ಆದರೆ, ಮಾದೇಗೌಡರ ತುಘಲಕ್ ದರ್ಬಾರ್‌ಎದುರು ಹೈಕೋರ್ಟ್ ತೀರ್ಪು ಯಾವ ಲೆಕ್ಕ. ಆ ಆದೇಶ ಇಂದಿಗೂ ಕಾಗದದಲ್ಲಿಯೇ ಉಳಿದಿದೆ.

ಇಷ್ಟೆಲ್ಲಾ ಯಾತನೆ ಅನುಭವಿಸಿದ ನಿಂಗಯ್ಯ ಮಾದೇಗೌಡರ ವಿರುದ್ಧ ಕಿಡಿಕಾರಲು ಸಮಯ ಕಾಯುತ್ತಲೇ ಇದ್ದ. ಮೊನ್ನೆ ದೇವಸ್ಥಾನದ ಕೊಳವನ್ನು ಸ್ವಚ್ಛಗೊಳಿಸಲು ನೀರನ್ನು ಹೊರಗೆ ಹರಿಬಿಟ್ಟಾಗ ಅದು ನಿಂಗಯ್ಯನ ಇಟ್ಟಿಗೆಗೂಡಿನತ್ತ ಹರಿದಿದೆ. ಅವರು ಸಿಟ್ಟಿಗೆದ್ದು ಟ್ರಸ್ಟಿನವರ ಬಳಿ, ನಂತರ ಅಲ್ಲಿಗೆ ಬಂದ ಮಾದೇಗೌಡರ ಬಳಿ ರೇಗಾಡಿದ್ದಾರೆ. ಸಹಜವಾಗಿಯೇ ಮಾದೇಗೌಡರ ದಬ್ಬಾಳಿಕೆಯೇ ಮೇಲುಗೈ ಸಾಧಿಸಿತು. ನಿಂಗಯ್ಯನನ್ನು ಅಲ್ಲಿಂದ ಹೊರದಬ್ಬಲಾಯಿತು. ತನ್ನ ನೆಲವನ್ನೂ ಬಲಾತ್ಕಾರದಿಂದ ವಶಪಡಿಸಿಕೊಂಡಿದ್ದಲ್ಲದೆ, ಈಗ ತನ್ನ ನೆಲದಿಂದಲೇ ತನ್ನನ್ನು ಹೊರದಬ್ಬಿದ್ದರಿಂದ ಕುದ್ದು ಹೋದ ಆತ ಮಾದೇಗೌಡರ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗಿದ್ದಾನೆ. ಮಾದೇಗೌಡರು ಮಂಡ್ಯಕ್ಕೆ ವಾಪಾಸ್ಸು ಹೋಗುವುದನ್ನೇ ಕಾಯ್ದುಕೊಂಡಿದ್ದು ಇನ್ನಿಬ್ಬರ ಜೊತೆ ಸೇರಿಕೊಂಡು ಮಾದೇಗೌಡರ ಕಾರನ್ನು ತಡೆಹಿಡಿದು 'ಇನ್ನೆಷ್ಟು ದಿನ ಈ ಅನ್ಯಾಯವನ್ನು ಮುಂದುವರೆಸುತ್ತೀರಿ' ಎಂದು ಪ್ರಶ್ನಿಸಿದ್ದಾರೆ. ಮುಂಗೋಪಿ ಮಾದೇಗೌಡರೂ ತಮ್ಮದೇ ದಬ್ಬಾಳಿಕೆಯ ಗತ್ತಿನಲ್ಲಿ ಉತ್ತರಿಸಿದ್ದು ವಿಕೋಪಕ್ಕೆ ತಿರುಗಿ ತಳ್ಳಾಟ-ನೂಕಾಟವೂ ನಡೆದಿದೆ.

ಆದರೆ ದುರಂತ ಎಂದರೆ, ಮಾದೇಗೌಡರು ಹೈಕೋರ್ಟ್ ಆದೇಶವನ್ನೇ ಧಿಕ್ಕರಿಸಿದ್ದರೂ ಅವರನ್ನು ಯಾವ ಪೊಲೀಸರೂ ಈ ತನಕ ಪ್ರಶ್ನಿಸಿಲ್ಲ. ಆದರೆ, ಅನ್ಯಾಯವನ್ನು ಪ್ರತಿಭಟಿಸಿದ ದುಸ್ಸಾಹಸರಾಧಕ್ಕಾಗಿ ಈಗ ನಿಂಗಯ್ಯನನ್ನು ಬಂಧಿಸಲಾಗಿದೆ. ಬಡರೈತರ ಭೂಮಿ ಕಿತ್ತುಕೊಂಡು ಆತ್ಮಲಿಂಗೇಶ್ವರನಿಗೊಂದು ದೇವಸ್ಥಾನ ಕಟ್ಟಿ, ಪುಣ್ಯ ಸಂಪಾದಿಸಿರುವ ಮಾದೇಗೌಡರು ಮಂಡ್ಯದಲ್ಲಿ ಕಟ್ಟಿಸಿರುವ ಗಾಂಧಿಭವನದಲ್ಲೀಗ ಧ್ಯಾನ ಮಾಡುತ್ತಿದ್ದಾರೆ.

■ ವರದಿಗಾರ





ನಿಂಗಯ್ಯನ ಜಮೀನಿನಲ್ಲಿ ಅಕ್ರಮವಾಗಿ ಕಟ್ಟಿರುವ ಕ್ಯಾಂಟಿನ್ ಮತ್ತು ಸಮುದಾಯ ಭವನ



ಹನುಮಂತನಗರದ ಆತ್ಮಲಿಂಗ ದೇವಸ್ಥಾನ



ನಿಂಗಯ್ಯ

ಲಂಕೇಶ್


ನಗರಸಭೆ ಅಧ್ಯಕ್ಷಗಿರಿ ಅದೃಷ್ಟ ಯಾರಿಗೆ?

ಕೊಪ್ಪಳ ಪುರಸಭೆ, ನಗರಸಭೆಯಾಗಿ ಪರಿವರ್ತನೆಗೊಂಡ ನಂತರ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಮೊಟ್ಟಮೊದಲ ಚುನಾವಣೆ ಇದೇ ಫೆ. 23ರಂದು ನಡೆಯಲಿದೆ. ಸಹಜವಾಗಿಯೇ 31 ಸದಸ್ಯರಲ್ಲಿ 16 ಸದಸ್ಯರನ್ನು ಹೊಂದಿರುವ ಜೆಡಿಎಸ್ ಪೀಠ ಏರಬೇಕು. ಆದರೆ ಬರೀ 11 ಸದಸ್ಯರನ್ನು ಹೊಂದಿರುವ ಕಾಂಗ್ರೆಸ್, ಬಿಜೆಪಿಯ 3, ಓರ್ವ ಪಕ್ಷೇತರ, ಎಂಪಿ, ಎಂಎಲ್‌ಸಿ ಮತಗಳಿಂದ ಅಧಿಕಾರ ಹಿಡಿಯಲು 'ಸಾಹಸ' ಮಾಡುತ್ತಿದೆ.

ಸಿಂಪಲ್ ಮೆಜಾರಿಟಿ ಹೊಂದಿರುವ ಜೆಡಿಎಸ್‌ನಿಂದ ಚಂದ್ರು ಕವಲೂರು ಪ್ರಬಲ ಆಕಾಂಕ್ಷಿ. ಆದರೆ ಸದಾ ತನಗೆ ತಿಳಿದದ್ದೇ ಮಾಡುವ ಜೆಡಿಎಸ್ ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ ಅಧ್ಯಕ್ಷ ಸ್ಥಾನಕ್ಕೆ ಒಂದು ಕಡೆ ಮಹಬೂಲಗ ನಾಲಬಂದ್‌ನ ಹೆಸರು ತೇಲಿ ಬಿಟ್ಟು, ಇನ್ನೊಂದು ಕಡೆ ಡಾ. ಉಪೇಂದ್ರ ಹೆಸರನ್ನು ರೇಸ್‌ಗೆ ಬಿಟ್ಟು ಯಾವುದಕ್ಕೆ ಏನು ಪ್ರತಿಕ್ರಿಯೆ ಬರುತ್ತದೆ ಎಂಬುದನ್ನು ನೋಡುತ್ತಿದ್ದಾರೆ.

ಸಂಗಣ್ಣ ಕರಡಿ 2004ರ ಚುನಾವಣೆಯಲ್ಲಿ ಬಿಜೆಪಿಗೆ ಹೋಗಿದ್ದರಿಂದ ಮುಸ್ಲಿಂರೆಲ್ಲ ಸಾರಾಸಗಟಾಗಿ ಆತನನ್ನು ತಿರಸ್ಕರಿಸಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರು. ಈಗ ಮಾಜಿಯಾಗಿರುವ ಕರಡಿಗೆ ಹತ್ತಿರದಲ್ಲೇ ಇರುವ ಚುನಾವಣೆಯ ಬಗ್ಗೆ ಆಸಕ್ತಿ, ಆದ್ದರಿಂದ ಈಗಲೇ ಮುಸ್ಲಿಂ ಮತಗಳ ಮೇಲೆ ಕಣ್ಣಿಟ್ಟು ನಾಲಬಂದ್ ಹೆಸರನ್ನು ಆತ ಪ್ರಸ್ತಾಪಿಸುತ್ತಿದ್ದರೂ ಮುಸ್ಲಿಮರ ಓಟುಗಳು ಗಣನೀಯ ಪ್ರಮಾಣದಲ್ಲಿ ಬರುವುದಿಲ್ಲ ಎಂಬ ಸತ್ಯವೂ ಆತನಿಗೆ ಗೊತ್ತಿದೆ. ಆದರೂ ನಾಲಬಂದ್ ಹೆಸರನ್ನು ಪ್ರಸ್ತಾಪಿಸುತ್ತಿರುವುದರ ಹಿಂದೆ ಚಂದ್ರು ಕವಲೂರು ಅಧಿಕಾರಕ್ಕೆ ಬಾರದಂತೆ ತಡೆಯುವ ಲೆಕ್ಕಾಚಾರವಿದೆ ಎಂಬುದು ಸ್ಪಷ್ಟವಾಗುತ್ತದೆ.

ಜೆಡಿಎಸ್‌ನಲ್ಲಿರುವ ಬಿಸಿಎಂ(ಎ) ವರ್ಗದ ಚಂದ್ರು ಕವಲೂರು ಅಧ್ಯಕ್ಷ ಸ್ಥಾನಕ್ಕೆ ಸೂಕ್ತ ವ್ಯಕ್ತಿಯಂತೂ ಹೌದು. ಆದರೆ ಅಧ್ಯಕ್ಷರಾದವರು ನಿತ್ಯ ತನ್ನ ಮನೆ ಬಾಗಿಲು ಕಾಯಬೇಕು ಎನ್ನುವ ಕರಡಿ ಜಾಯಮಾನಕ್ಕೆ ಒಗ್ಗುವವರಲ್ಲ, ಏಕೆಂದರೆ ಚಂದ್ರು ಕವಲೂರು ತಂದೆ ಮುದಿಯಪ್ಪ ಕವಲೂರು ಕಾಲು ಶತಮಾನ ಕಾಲ ಕೊಪ್ಪಳ ಪುರಸಭೆಗೆ ಸದಸ್ಯರಾಗಿ, ಅಧ್ಯಕ್ಷರಾದವರು. ಕೊಪ್ಪಳದ ಹಿರಿಯ ರಾಜಕಾರಣಿ ಮಗ ಚಂದ್ರುಗೆ ಅನುಭವ ಇಲ್ಲ ಎನ್ನುವವರಿಗೆ, ಅವರ ತಂದೆಯ ಅನುಭವ ಮಾರ್ಗದರ್ಶನವಾಗದಿರುತ್ತಾ ಎಂದು ಕೇಳಬಹುದು.


ಅಂಜದ್ ಪಟೇಲ್


ಅಷ್ಟಕ್ಕೂ ಈ ಬಾರಿ ಗೆದ್ದಿರುವ ಸದಸ್ಯರಲ್ಲಿ ಪುನರಾಯ್ಕೆಯಾದ ಕಾಂಗ್ರೆಸ್‌ನ ಅಂಜದ್ ಪಟೇಲ್ ಬಿಟ್ಟರೆ ಎಲ್ಲರೂ ಹೊಸಬರೆ. ಒಂದು ವೇಳೆ ಚಂದ್ರು ಅಧ್ಯಕ್ಷರಾದರೆ, ಮುಂದರಗಿ ಗವಿಸಿದ್ದಪ್ಪ ಪಕ್ಷದಿಂದ ಹೊರಬರುತ್ತಾರೆ ಎಂಬ ಮಾತಿದೆ. ಇದನ್ನು ಜೆಡಿಎಸ್ ಪಕ್ಷದ ಅಧ್ಯಕ್ಷರು ನಿಭಾಯಿಸುತ್ತಾರಾ?

ಜೆಡಿಎಸ್‌ನ ಪರಿಸ್ಥಿತಿ ಹೇಗಿದೆಯೆಂದರೆ ಸದಸ್ಯರ ಮೇಲೆ ಸಂಗಣ್ಣ ಕರಡಿಗೆ ವಿಶ್ವಾಸವಿಲ್ಲ. ಕರಡಿ ಬಗ್ಗೆ ಸದಸ್ಯರಿಗೆ ವಿಶ್ವಾಸವಿಲ್ಲ. ಅದಕ್ಕೆಂದೇ 16 ಸದಸ್ಯರನ್ನು ಮೂರು ತಂಡಗಳಾಗಿ ಒಡೆದು ಬೇರೆಡೆ ಪ್ರವಾಸ ಕಳಿಸಿರುವ ಕರಡಿ, ಕೊನೆ ಕ್ಷಣದವರೆಗೂ ಎಲ್ಲ ಸದಸ್ಯರನ್ನು ಅತಂತ್ರವಾಗಿಟ್ಟು, 23ರ ಮುಂಜಾನೆ ಅಧ್ಯಕ್ಷರ ಆಯ್ಕೆಗೆ ಅರ್ಧಗಂಟೆ ಇದೆ ಎನ್ನುವಾಗ ತಾನು ಪ್ರಕಟಿಸುವ ಅಭ್ಯರ್ಥಿಗೆ ಎಲ್ಲರೂ ಬೆಂಬಲಿಸಬೇಕೆಂಬ ಪ್ಲಾನ್ ಹೆಣೆದಿದ್ದಾನೆ. ಆದರೆ ಇದಕ್ಕೆ ಜೆಡಿಎಸ್‌ನ ಬಹುತೇಕ ಸದಸ್ಯರ ವಿರೋಧವಿದೆ. ಸದಸ್ಯರ ಮೇಲೆ ವಿಶ್ವಾಸವಿಲ್ಲದಿದ್ದರೆ ರಾಜಕೀಯ ಮಾಡುವುದು ಹೇಗೆ ಎಂಬುದು ಅವರ ಅಳಲು.

ಇನ್ನಾರು ತಿಂಗಳಲ್ಲಿ ಕೊಪ್ಪಳಕ್ಕೆ ಎಡಿಬಿಯಿಂದ 40 ಕೋಟಿಯಷ್ಟು ಹಣ ಬರಲಿದೆ. ಅದರ ಉಪಯೋಗ ಸ್ವಲ್ಪವಾದರೂ ಆಗಬೇಕೆಂದರೆ, ಕೊಪ್ಪಳದಲ್ಲಿ ಒಂದಿಷ್ಟು ಅಭಿವೃದ್ಧಿ ಕೆಲಸವಾಗಬೇಕೆಂದರೆ ಅಧ್ಯಕ್ಷಗಾದಿಗೆ ಯುವಕರು ನೇಮಕ ಆದರೆ ಸಾಧ್ಯವಾಗುತ್ತದೆ.

ಬಹುಮತ ಇಟ್ಟುಕೊಂಡಿದ್ದರೂ ತನ್ನ ಅಭ್ಯರ್ಥಿ ಯಾರೆಂಬುದನ್ನು ಜೆಡಿಎಸ್ ಪ್ರಕಟಿಸದೇ ಇರುವಾಗ, ಬರೀ 11 ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ಈಗಾಗಲೇ ಅಂಜದ್ ಪಟೇಲ್ ತನ್ನ ಅಭ್ಯರ್ಥಿಯೆಂದು ಘಂಟಾಘೋಷವಾಗಿ ಸಾರಿದೆ. ಕ್ಷೇತ್ರ ಪುನರ್ ವಿಂಗಡನೆಯಿಂದ ಹಿಟ್ನಾಳ್ ಹೋಬಳಿ ಕೊಪ್ಪಳಕ್ಕೆ ಸೇರಿದೆ. ಆ ಭಾಗದ 10 ಸಾವಿರಕ್ಕೂ ಹೆಚ್ಚು ಮುಸ್ಲಿಂ ಮತಗಳು ಈ ಕ್ಷೇತ್ರಕ್ಕೆ ಸೇರ್ಪಡೆಯಾಗಿ 30-32 ಸಾವಿರದಷ್ಟು ಮುಸ್ಲಿಂ ಮತಗಳು ಆಗಲಿವೆ. ಇದರ ಮೇಲೆ ಕಣ್ಣಿಟ್ಟಿರುವ ಮಾಜಿ ಶಾಸಕ ಬಸವರಾಜ ಹಿಟ್ನಾಳ್ ಅಂಜದ್ ಪಟೇಲರ ಹೆಸರನ್ನು ಬೆಂಬಲಿಸುತ್ತಿದ್ದಾರೆ.

ಮೂರು ಸದಸ್ಯರನ್ನು ಹೊಂದಿರುವ ಬಿಜೆಪಿಯ ಬೆಂಬಲ ಪಡೆದು, ಪುಷ್ಪಾಪತಿ ನಿಲೂಗಲ್‌ಗೆ ಉಪಾಧ್ಯಕ್ಷ ಪಟ್ಟ, ಪಕ್ಷೇತರ ಸುರೇಶ ಗಿರಣಿಗೆ ಯಾವುದಾದರೂ ಸ್ಥಾಯಿ ಸಮಿತಿ ಅಧ್ಯಕ್ಷಗಿರಿ... ಇಂತಹ ಆಮಿಷಗಳೊಂದಿಗೆ ಕಾಂಗ್ರೆಸ್ ಎಂಪಿ ಮತ್ತು ಬಿಜೆಪಿಯ ಎಂಎಲ್‌ಸಿಯೊಬ್ಬರ ಮತಗಳನ್ನು 'ಪಡೆದು' ಅಂಜದ್‌ನನ್ನು ಅಧ್ಯಕ್ಷಗಾದಿಗೆ ತರುವ ಯೋಚನೆ ಕಾಂಗ್ರೆಸ್ಸಿನದು. ಕಾಂಗ್ರೆಸ್‌ನ ಇನ್ನೋರ್ವ ಅಭ್ಯರ್ಥಿ ಜಾಕೀರ್ ಹುಸೇನ್ ಕಿಲ್ಲೆದಾರ್ ಕೂಡ ಪ್ರಬಲ ಆಕಾಂಕ್ಷಿಯೇ. ಅವರು ಕೂಡ ಹೈಲೆವೆಲ್‌ನಲ್ಲಿ ಪ್ರಯತ್ನ ನಡೆಸಿದ್ದಾರೆ.


ಚಂದ್ರ ಕವಲೂರು

ಹೌದು, ಕಾಂಗ್ರೆಸ್‌ಅನ್ನು ಬಿಜೆಪಿ ಬೆಂಬಲಿಸುತ್ತಾ ಎಂಬ ಪ್ರಶ್ನೆ ಯಾರನ್ನಾದರೂ ಕಾಡಬಹುದು. ಆದರೆ ತನ್ನನ್ನು ನಂಬಿಸಿ ಕೈಕೊಟ್ಟಿರುವ ಜೆಡಿಎಸ್‌ನವರನ್ನು ಅಧಿಕಾರದಿಂದ ಹೊರಗಿಡಲು ಬಿಜೆಪಿ ನಿರ್ಧರಿಸಿದೆ. ಬಾಯಿಂದ ಬೆಂಬಲ ಇಲ್ಲ ಎನ್ನುತ್ತಿದ್ದರೂ, ಮನಸ್ಸು ಮಾತ್ರ ಇದೆ ಎಂಬುದನ್ನು ಈ ಭಾಗದ ಬಿಜೆಪಿ ಕಂಟ್ರೋಲ್ ರೂಂ ಬಳ್ಳಾರಿಯೇ ಹೇಳುತ್ತಿದೆ. ವಿಚಿತ್ರವೆಂದರೆ ಬಿಜೆಪಿಯ ಜಿಲ್ಲಾಧ್ಯಕ್ಷ ಸಂಗಪ್ಪ ವಕ್ಕಳದ ಕಾಶ್ಮೀರದಲ್ಲಿರುವ ವೈಷ್ಣೋದೇವಿ ದರ್ಶನಕ್ಕೆ ಹೋದಾಗ ಹಿಮಪಾತವಾಗಿ ಅಲ್ಲಿನ ಯಾವುದೋ ನಗರದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಈಗ ವೈಷ್ಣೋದೇವಿ ಕಣ್ತೆರೆದು ಹಿಮವೆಲ್ಲ ಕರಗಿ ಅವರು ಕೊಪ್ಪಳಕ್ಕೆ ಬರಲು ಟೈಂ ಬೇಕು.

ಆದ್ದರಿಂದ ಸದ್ಯಕ್ಕೆ ಬಿಜೆಪಿಯ ಇನ್ನೋರ್ವ ಮುಖಂಡ ಅಂದಣ್ಣ ಅಗಡಿಯ ನಿರ್ಧಾರದ ಮೇಲೆ ಕಾಂಗ್ರೆಸ್ ಭವಿಷ್ಯ ನಿಂತಿದೆ. ಆದರೆ ಕೊನೆ ಘಳಿಗೆಯಲ್ಲಿ ತಾನು ಬೆಂಬಲ ನೀಡುವುದಾದರೆ ಅದು ಕಾಂಗ್ರೆಸ್‌ನ ಕಾಟನ್ ಪಾಷಾಗೆ ಮಾತ್ರ ಅಂತ ರೊಳ್ಳೆ ತೆಗೆದರೂ ಆಶ್ಚರ್ಯವಿಲ್ಲ. ಆದರೆ ಕಾಂಗ್ರೆಸ್ ತನ್ನ 11, ಬಿಜೆಪಿಯ 3, ಓರ್ವ ಪಕ್ಷೇತರ, ಕಾಂಗ್ರೆಸ್ ಸಂಸದರ ಮತ ಜೊತೆಗೆ ತನ್ನದೇ ಪಕ್ಷದ ಎಂಎಲ್‌ಸಿ ಶ್ರೀನಾಥ ಮತ ಪಡೆಯುವುದು ಬಿಟ್ಟು, ಬಿಜೆಪಿಯ ಎಂಎಲ್‌ಸಿಯೊಬ್ಬರ ಮತಕ್ಕಾಗಿ ಅಂಗಲಾಚುತ್ತಿರುವುದು ಹಾಸ್ಯಾಸ್ಪದವಾಗಿದೆ.

ಒಟ್ಟಿನಲ್ಲಿ ಕಾಂಗ್ರೆಸ್ ಅಧಿಕಾರಕ್ಕೇರಲು ಸರ್ಕಸ್ ನಡೆಸುತ್ತಿದೆ. ಅದಕ್ಕೆ ಬಿಜೆಪಿ ಕೃಪೆ ಬೇಕು. ಹಗ್ಗದ ಮೇಲಿನ ನಡಿಗೆ ಆರಂಭಿಸಿರುವ ಕಾಂಗ್ರೆಸ್ ಅದರಲ್ಲಿ ವಿಫಲವಾದರೆ ಅದಕ್ಕೇನು ನಷ್ಟವಿಲ್ಲ. ಕಾಂಗ್ರೆಸ್ ನಂಬಿ ಹೋದ ಬಿಜೆಪಿ ಅಪಹಾಸ್ಯಕ್ಕೀಡಾಗುತ್ತದೆ. ಮೆಜಾರಿಟಿ ಇದ್ದವರು, ಇಲ್ಲದವರ ಈ ಪೇಚಾಟ ಕೊಪ್ಪಳದ ಜನಕ್ಕೆ ಪುಗಸಟ್ಟೆಯಾಗಿ ಮನರಂಜನೆ ಒದಗಿಸುತ್ತಿದೆ. ಕೊನೆ ಘಳಿಗೆಯಲ್ಲಿ ಜೆಡಿಎಸ್ ಅಧ್ಯಕ್ಷ ಸ್ಥಾನವನ್ನು ಹಿಡಿಯುವುದು ಅಸಾಧ್ಯ ಎಂದಾದರೆ, ಅನಿವಾರ್ಯವಾಗಿ ಸಂಗಣ್ಣ ಕರಡಿ 23 ರಂದು ಡಾ. ಉಪೇಂದ್ರನ ಹೆಸರು ಸೂಚಿಸಿದರೂ ಆಶ್ಚರ್ಯವಿಲ್ಲ. ಜೆಡಿಎಸ್ ಕೈಯಲ್ಲಿರುವ ತುತ್ತು ಬಾಯಿಗೆ ಬರದೇ ಹೋದರೆ ಅದಕ್ಕೆ ಸಂಗಣ್ಣ ಕರಡಿಯ ಅನಾಹುತ ರಾಜಕೀಯ ತಂತ್ರಗಳೇ ಕಾರಣವಾಗುವುದು ಖಚಿತ.

ಸೋಜಿಗದ ವಿಷಯವೆಂದರೆ ಅಧ್ಯಕ್ಷಗಿರಿಯ ಗದ್ದಲದಲ್ಲಿ ಉಪಾಧ್ಯಕ್ಷ ಸೀಟು ಕೇಳುವವರೇ ಇಲ್ಲದಂತಾಗಿರುವುದು!

■ ವರದಿಗಾರ

ಭಿನ್ನಮತ ಭುಗಿಲು, ಬಿಜೆಪಿ ದಿಗಿಲು

■ ಕೊಪ್ಪಳ


ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಲಲಿತಾರಾಣಿ, ಪಕ್ಷವನ್ನು ಅಡ್ಡ-ಉದ್ದ ಸಿಗಿದು, ಸಮಾಧಿ ಕಟ್ಟಿ, "ತಿಥಿ ನೀವೇ ಮಾಡಿ" ಅಂತ ಹೋಗಿ ಸೀದಾ ಬಿಜೆಪಿ ಸೇರಿಬಿಟ್ಟದ್ದಾರೆ. ಅಷ್ಟೇ ಅಲ್ಲದೆ, ವೆಂಕಯ್ಯ ನಾಯ್ಡು ಮತ್ತು ಜನಾರ್ದನ ರೆಡ್ಡಿಯವರ ಲಾಬಿಯ ಮೂಲಕ ಆಂಧ್ರ ವಿಂಗ್ ಅನ್ನು ರಚಿಸಿ ಗಂಗಾವತಿ ಬಿಜೆಪಿಯಲ್ಲಿದ್ದ ಮೂಲ ನಿವಾಸಿಗಳ ಆಕ್ರೋಶಕ್ಕೂ ಗುರಿಯಾಗಿದ್ದಾರೆ.



ಈ ರೆಡ್ಡಿ, ನಾಯ್ಡುಗಳ ಆಂಧ್ರ ಕೊಬ್ಬು ಎಷ್ಟಿದೆಯೆಂದರೆ ಕರ್ನಾಟಕದ ಗಂಗಾವತಿಯಲ್ಲಿ ನಡೆದ ಮೊನ್ನಿನ ಸಮಾವೇಶದ ಭಾಷಣದ ಕೊನೆಯಲ್ಲಿ ವೆಂಕಯ್ಯ ನಾಯ್ಡು 'ಜೈ ಆಂಧ್ರ' ಎಂದು ಘೋಷಿಸಿಬಿಟ್ಟ! ಹೀಗೆ "ಜೈ ಆಂಧ್ರ" ಎನ್ನುತ್ತ ಆಂಧ್ರ ಮೂಲದ ಲಲಿತಾರಾಣಿಗೆ ಗಂಗಾವತಿಯಲ್ಲಿ ಬಿಜೆಪಿ ಟಿಕೆಟ್‌ಅನ್ನು ನೀಡುವುದಾಗಿ ಫಿಕ್ಸ್ ಮಾಡಿದ್ದಾರಂತೆ ಈ ನಾಯ್ಡು ಮತ್ತು ರೆಡ್ಡಿ. ಇಲ್ಲಿನ ತೆಲುಗು ನಾಯ್ಡುಗಳ 8-10 ಪರ್ಸೆಂಟ್ ಮತಗಳನ್ನು ಸೆಳೆಯುವ ಪ್ಲಾನ್ ಇದಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ.

ಕಳೆದ ಚುನಾವಣೆಯಲ್ಲಿ ಇದೇ ಲಲಿತಾರಾಣಿ ಆಂಧ್ರದ ಚಂದ್ರಬಾಬು ನಾಯ್ಡುನಿಂದ ಗಂಗಾವತಿಯ ತೆಲುಗರಿಗೆ ಪತ್ರ ಹಾಕಿಸಿ ತನ್ನ ಪತಿಗೆ ಓಟು ಕೊಡುವಂತೆ ಅವರ ಮೇಲೆ ಒತ್ತಡ ತಂದಿದ್ದಳು. ಕಾಂಗ್ರೆಸ್‌ನಲ್ಲಿದ್ದರೂ ಆಗಾಗ ಚಡ್ಡಿ ಬಳಗದ ಉಮಾಭಾರತಿಯಂತಾಡುವ ಲಲಿತಾರಾಣಿಗೆ ಚುನಾವಣೆಯಲ್ಲಿ ತನ್ನ ಪತಿ ಸೋಲುವುದು ಗ್ಯಾರಂಟಿ ಎಂದು ಗೊತ್ತಾದಾಗ "ಬಿಜೆಪಿಗೆ ಓಟು ಹಾಕಿ" ಎಂದೇ ಪ್ರಚಾರ ಮಾಡಿದ್ದರು.

ಈಗ ಸ್ವತಃ ಲಲಿತಾರಾಣಿಯೇ ಬಿಜೆಪಿಯನ್ನು ಹೊಕ್ಕಿರುವಾಗ ಅಲ್ಲಿನ ಮೂಲನಿವಾಸಿಗಳಿಗೆ ಆಕೆ ದುರ್ಗಿಯಂತೆ ಕಾಣುತ್ತಿದ್ದಾರೆ. ಮೊದಲೇ ಸೋತ ಅನುಕಂಪದ ಅಲೆಯಲ್ಲಿದ್ದ, ಅಧಿಕಾರ ನೀಡಿದ ಜೆಡಿಎಸ್ ವರ್ತನೆಯಿಂದಾಗಿ ಬಿಜೆಪಿ ಪರವಿದ್ದ ಅನುಕಂಪದ ಅಲೆ - ಹೀಗೆ ಎರಡೆರಡು ಅನುಕಂಪದ ಅಲೆಗಳಲ್ಲಿ ತಾನು ಬರುವ ಚುನಾವಣೆಯಲ್ಲಿ ಗೆಲ್ಲುವುದು ಖಂಡಿತಾ ಎಂಬ ಹುಮ್ಮಸ್ಸಿನಲ್ಲಿ ಗಿರಿಗೌಡ ಬಸ್ಸಿ ಹೊಡೆಯುತ್ತಿದ್ದ. ಆದರೆ ಈಗ ಲಲಿತಾರಾಣಿಯ ಆಗಮನದಿಂದ ಆತನೂ ಥಂಡಾ ಹೊಡೆದಿದ್ದಾನೆ.



ಹಿಂದೊಮ್ಮೆ ಬಿಜೆಪಿಯಲ್ಲಿದ್ದು, ಆಮೇಲೆ ಕಾಂಗ್ರೆಸ್ಸಿಗೆ ಹೋಗಿ ಈಗ ಮತ್ತೆ ಬಿಜೆಪಿಗೆ ಹಿಂದಿರುಗಿರುವ ಪರಣ್ಣ ಮುನವಳ್ಳಿಯ ಆಗಮನವೂ ಇಲ್ಲಿಯ ಬಿಜೆಪಿಗಳಿಗೆ ಇಷ್ಟವಿಲ್ಲ. ಕನಕಗಿರಿಯ ಮಾಜಿ ಶಾಸಕ ಜಿ. ವೀರಪ್ಪ ಮತ್ತು ತಿಪ್ಪೇರುದ್ರಸ್ವಾಮಿ ಸೇರಿದಂತೆ ಅನೇಕರು ಪರಣ್ಣ ಹಾಗೂ ಲಲಿತಾ ಆಗಮನಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರೂ ಬಿಜೆಪಿಯ ವ(ಅ)ರಿಷ್ಠರು ಅವರನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. "ಅವರೆಲ್ಲ ಲೀಡರ್‌ಗಳೇ ಅಲ್ಲ, ಎಲೆಕ್ಷನ್ ಟೈಂ ನ್ಯಾಗ ಬಂದು ಲಾಭ ಹೊಡೀತಾರೆ. ಲಾಭ ಸಿಗದಿದ್ದರೆ ಬೇರೆ ಪಕ್ಷಕ್ಕೆ ಹೋಗ್ತಾರೆ. ಅಡುಗೆ ಮಾಡುವವರು ನಾವು, ಅನ್ನ ಉಣ್ಣುವವರು ಅವರು. 30 ವರ್ಷದಿಂದ ಇದ್ದ ಕಾಂಗ್ರೆಸ್ಸಿಗೇ ಚೂರಿ ಹಾಕಿ ಬಂದಿರುವ ಲಲಿತಾರಾಣಿ, ನಾಳೆ ಬಿಜೆಪಿಗೂ ದ್ರೋಹ ಬಗೆಯುವುದಿಲ್ಲ ಅಂತ ಏನು ಗ್ಯಾರಂಟಿ?" ಅಂತ ವಾದಿಸಿದವರಿಗೆಲ್ಲ ಪಕ್ಷದ ನಾಯಕರು ನೀಡಿದ್ದು ಒಂದೇ ಉತ್ತರ: "ಬಾಯಿಮುಚ್ಚು"

ಇದರ ಪರಿಣಾಮವೆಂದರೆ ಶೇಷಗಿರಿರಾವ್‌ನನ್ನು ಕನಕಗಿರಿ ಬ್ಲಾಕ್ ಬಿಜೆಪಿಯಿಂದ ಕಿತ್ತು ಹಾಕಿ ಆ ಜಾಗಕ್ಕೆ ಹೊಸದಾಗಿ ಬಂದಿರುವ ಬೂದಿರಡ್ಡಿಪ್ಪನನ್ನು ಪಕ್ಷ ಪೀಠಕ್ಕೆ ತರುತ್ತಿದೆ. ಇದೇ ತುಂಗಭದ್ರಾ ನದಿ ನೀರು ಕುಡಿದು, ಅದೇ ನೀರಿನಿಂದ ಬೆಳೆದ ಅನ್ನ ತಿಂದು, ಈಗ "ಆಂಧ್ರ.... ಆಂಧ್ರ...." ಅಂತ ಸನ್ನಿ ಹಿಡಿದಂತೆ ಬಡಬಡಿಸುತ್ತಿರುವ ಲಲಿತಾರಾಣಿಯ ಅವಾಂತರವನ್ನು ನೋಡಿಯೇ ರೋಸಿಹೋಗಿರುವ ಬಿಜೆಪಿಯ ತಿಪ್ಪೇರುದ್ರಸ್ವಾಮಿ ಮತ್ತು ಗಿರಿಗೌಡ ಜೆಡಿಎಸ್‌ನತ್ತ ಆಸೆಯಿಂದ ನೋಡುತ್ತಿದ್ದಾರೆ. ಇನ್ನೊಂದು ಕಣ್ಣು ಕಾಂಗ್ರೆಸ್ ಕಡೆಯೂ ಇದೆ.

ಕಾಂಗ್ರೆಸ್‌ನಲ್ಲಿದ್ದು, ಪಕ್ಷಕ್ಕೆ ಚೂರಿ ಹಾಕಿದ, ಪಕ್ಷದ ಕಾರ್ಯಕರ್ತೆಯರನ್ನು "ಬರ್‍ತಿಯಾ?" ಅಂತ ಕರೆದು ರಾದ್ಧಾಂತ ಮಾಡಿಕೊಂಡು ಆನಂತರ ಸಾರಿ ಕೇಳಿದ್ದ ಸಿದ್ರಾಮಸ್ವಾಮಿ ಎಂಬ ಅವಿವೇಕಿ. ಈಗ ಈತನೂ ಬಿಜೆಪಿಗೆ ಬರಲು ಯತ್ನಿಸುತ್ತಿದ್ದು, ಆತ ಬಾರದಂತೆ ನೋಡಿಕೊಳ್ಳುವುದೇ ಬಿಜೆಪಿ ಮೂಲ ನಿವಾಸಿಗಳ ಕೆಲಸವಾಗಿ ಬಿಟ್ಟಿದೆ. ಫೆ. 10 ರಂದು ನಡೆದ ಬಿಜೆ[...] ಸಮಾವೇಶದಲ್ಲಿ ಅರಳೇರಿ[...] ಗೋವಿಂದರಾಜ್ ಪಂತ[...] ಶಿವರಾಮಗೌಡರಂತಹ ಹಳಬರನ್ನು ಮೂಲೆಯಲ್ಲಿಟ್ಟು, ಬ್ಯಾನರ್‌ಗಳಲ್ಲೂ ಹೊಸಬರದೇ ಹಾವಳಿ ನಡೆದಿತ್ತು. ತಾವೇ ಕಟ್ಟಿ ಬೆಳೆಸಿದ ಪಕ್ಷದಲ್ಲಿ ತಾವೇ ಅನಾಥರಾದ ಪ್ರಶ್ನೆ ಈಗ ಮೂಲ ಚೆಡ್ಡಿಗಳನ್ನು ಕಾಡುತ್ತಿದೆ.

ಇನ್ನು ಬಿ.ಎಚ್. ಗುತ್ತಿ ಎಂಬಾತ ಜೆಡಿಎಸ್‌ನ ಗೂಢಚಾರ ಎಂದು ಬಿಜೆಪಿಗಳು ಎಷ್ಟೇ ಬಾಯಿಬಡಿದು ಕೊಂಡರೂ ಆತನನ್ನೂ ಪಕ್ಷದೊಳಗೆ ಬಿಟ್ಟುಕೊಂಡಿರುವುದು ಮತ್ತೊಂದು ಗುಂಪಿನ ವೈಮನಸ್ಸಿಗೆ ಕಾರಣವಾಗುತ್ತಿದೆ. ಇತ್ತೀಚೆಗೆ ಬಿಜೆಪಿಯ ರಹಸ್ಯ ಸಭೆಯಲ್ಲಿ ನಡೆಸಿದ ಲೆಕ್ಕಾಚಾರದ ಪ್ರಕಾರ ಇಲ್ಲಿ ಬಿಜೆಪಿಗೆ ಸೋಲಾಗುವುದು ಖಚಿತ ಎಂಬ ತೀರ್ಮಾನಕ್ಕೆ ಆ ಪಕ್ಷವೇ ಬಂದಿದೆ. ಒಂದೆಡೆ ಹೊಸಬರ ಆಗಮನದಿಂದ ಹುಟ್ಟಿರುವ ಭಿನ್ನಮತ, ಇನ್ನೊಂದೆಡೆ ಅವರಿಂದಾ[...] ಅನ್ಯಪಕ್ಷಗಳತ್ತ ನೋಡುತ್ತಿರುವ ಪ್ರಭಾವಿ ಮುಖಂಡರು, ಮತ್ತೊಂದೆಡೆ ಒಂದಿಷ್ಟು ಕೆಲಸಗಳ ಮೂಲಕ ಗಮ[...] ಸೆಳೆದಿರುವ ಇಕ್ಬಾಲ್ ಅನ್ಸಾರಿಯ ವರ್ಚಸ್ಸು - ಈ ಮೂರು ಅಂಶಗಳು ಮತ್ತು ಜಾತಿ ಓಟುಗಳ ಲೆಕ್ಕಾಚಾ[...] ಎಲ್ಲ ಅಳೆದು ತೂಗಿದರೂ ಬಿಜೆಪಿಗೆ ಯಾವುದು ಆಶಾದಾಯಕವಾಗಿ ಕಾಣುತ್ತಿಲ್ಲ ಎಂಬ ತೀರ್ಮಾನಕ್ಕೆ ಬಂದಾಗಿದೆ.

ಸದ್ಯದ ಸ್ಥಿತಿಯಲ್ಲಿ ರಾಜ್ಯದಲ್ಲಿ ಯಾವುದೇ ಬಹುಮತದ ಸರ್ಕಾರ ಬರದೇ, ಮತ್ತದೇ ಅತಂತ್ರ ಸ್ಥಿತಿಯಾಗಿ, ಮ[...] ಕಾಂಗ್ರೆಸ್-ಜೆಡಿಎಸ್ ಸರ್ಕಾರದ ಸಂಭ್ರಮವನ್ನು ತೆಗೆದು ಹಾಕುವಂತಿಲ್ಲ ಎಂಬ ನಿರ್ಣಯಕ್ಕೆ ಬರುತ್ತಿರುವ ನಾಯಕರು ಜೆಡಿಎಸ್‌ನತ್ತ ನೋಡುತ್ತಿರುವುದು ಸುಳ್ಳಲ್ಲ.

ಇದಕ್ಕೆ ಇತರೆ ಕಾರಣಗಳೂ ಇವೆ. ಜೆಡಿಎಸ್-ಬಿಜೆ[...] ಮೈತ್ರಿ ಸರ್ಕಾರ ಏರ್ಪಟ್ಟಾಗ ಗಂಗಾವತಿ ಬಿಜೆ[...] ಹಳಬರಾದ ಗಿರಿಗೌಡರಂತಹವರಿಗೆ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನಿರೀಕ್ಷಿಸಲಾಗಿತ್ತು. ಆದರೆ ನಿಯತ್ತಿಗಿಂತ ಬಾಲ ಬಡಿಯುವವರ[...] ಮಣೆ ಹಾಕಿ ಜಿಲ್ಲೆಯ ಇಬ್ಬರು ಶಾಸಕರ[...] ನಿಗಮ ಮಂಡಳಿ ನೀಡಲಾಗಿತ್ತು. ಇ[...] ಕೂಡ ಹಲವರ ಅಸಮಾಧಾನ[...] ಕಾರಣವಾಗಿದೆ.

ಇದೆಲ್ಲದರ ಮಧ್ಯೆ, ಭಿನ್ನಮತದಿಂ[...] ನಗೆಪಾಟಲಿಗೆ ಈಡಾಗುತ್ತಿರುವ ಬಿಜೆಪಿ[...] ಇನ್ನೊಂದು ಗುಂಪು ಸಮಾವೇಶದ ಹೆಸ[...] ಸರ್ಕಾರಿ ಕಚೇರಿಗಳಲ್ಲಿ ಎತ್ತಿರುವ ಚಂ[...] ವಿವರ ಬಯಲಿಗೆಳೆದು, ಗಬ್ಬೆಬ್ಬಿಸಲು ತಯಾರಾಗಿ ನಿಂತಿ[...]


ಹಾಗೆಯೇ ಬಿಜೆಪಿ ಪಕ್ಷ ಅಲ್ಪಸಂಖ್ಯಾತರ ವಿರೋ[...] ಯಲ್ಲ ಎಂಬ ಅಭಿಪ್ರಾಯವನ್ನೂ ಮೂಡಿಸ[...] ಪ್ರಯತ್ನಗಳು ನಡೆದಿವೆ. ಆ ನಿಟ್ಟನಲ್ಲೇ ಎರಡು ತಿಂ[...] ಹಿಂದೆ ಕೊಪ್ಪಳಕ್ಕೆ ಬಂದಿದ್ದ ಶ್ರೀರಾಮುಲು 'ಮುಸ್ಲಿಮ[...] ಬಿಜೆಪಿ ರಕ್ಷಣೆ ಕೊಡುತ್ತದೆ. ಬೇಕಿದ್ದರೆ ರಕ್ತದ[...] ಬರೆದುಕೊಡುತ್ತೇನೆ' ಎಂದು ಹೇಳಿದ್ದ.

ಈಗ ಕೊಪ್ಪಳ ನಗರಸಭೆ ಅಧ್ಯಕ್ಷರ-ಉಪಾಧ್ಯ[...] ಆಯ್ಕೆಗೆ 11 ಸ್ಥಾನಗಳನ್ನು ಹೊಂದಿರುವ ಕಾಂಗ್ರೆ[...] ಬಿಜೆಪಿಯ ಮೂರು ಸ್ಥಾನ ಬೆಂಬಲ ಬೇಕು. ಬೆಂಬಲವನ್ನು ಬಾಹ್ಯವಾಗಿ ನೀಡಲೂ ಬಿಜೆಪಿ ಒಪ್ಪಿ[...] ಆದರೆ ಮತ್ತೆ ಕೊಪ್ಪಳಕ್ಕೆ ಬಂದಿದ್ದ ಶ್ರೀರಾಮು[...] ಕಾಂಗ್ರೆಸ್‌ಗೆ ಬೆಂಬಲ ಇಲ್ಲ ಎಂದಿದ್ದ. ಇಷ್ಟು ಹೇ[...] ಶ್ರೀರಾಮುಲು ಮುಂದಕ್ಕೆ ಹೋದದ್ದೇ ತಡ "ಕಾಂಗ್ರೆಸ್ಸಿ[...] ಮುಸ್ಲಿಮರು ನಗರಸಭೆಗೆ ಅಧ್ಯಕ್ಷರಾಗುವುದಾದರೆ ಬೆಂ[...] ಕೊಡುವುದಿಲ್ಲ" ಎಂದು ಶ್ರೀರಾಮುಲು ಹೇಳಿ[...] ಎಂಬ ರೂಮರ್‌ನ್ನು ಅದೇ ಬಿಜೆಪಿ ಹಬ್ಬಿಸುತ್ತಿದೆ. [...] ಮೂಲಕ ಮುಸ್ಲಿಮರನ್ನು ಸೆಳೆಯುವ ಶ್ರೀರಾಮು[...] ಮುಸ್ಲಿಮರಿಂದ ನಕಾರಾತ್ಮಕ ಪ್ರತಿಕ್ರಿಯೆ ಬರುವಂತೆ ಆಗಬೇಕು, ಶ್ರೀರಾಮುಲು ಉಸ್ತುವಾರಿ ತಮಗೆ ಇಷ್ಟ[...] ಎಂಬುದನ್ನೂ ತೋರಿಸಬೇಕು ಎಂದು ಬಿಜೆಪಿಯ ನಾಯಕರು ಪ್ರಯತ್ನಿಸುತ್ತಿದ್ದಾರೆ.

ಸದ್ಯಕ್ಕೆ ಗಂಗಾವತಿ-ಕೊಪ್ಪಳದಲ್ಲಿ ಬಿಜೆಪಿಗೆ [...] ಯಿಂದಲೇ ಕುತ್ತು ಇರುವುದಂತೂ ಸತ್ಯ.

■ ವರದಿಗ[...]

ಮಾಧ್ಯಮಗಳ ಹಿಸ್ಟೀರಿಯಾ:
ಹುಬ್ಬಳ್ಳಿ ವಕೀಲರ ನ್ಯಾಯ ವಿರೋಧಿ ನಿಲುವು
ಇದು ನರಮೇಧಕ್ಕೆ ತಯಾರಿ



"ಭಯೋತ್ಪಾದಕರ ಪರವಾಗಿ ವಕಾಲತು ವಹಿಸದೆ ಇರಲು ಹುಬ್ಬಳ್ಳಿ ವಕೀಲರ ಸಂಘ ನಿರ್ಣಯಿಸಿದೆ"-ಹೀಗೆಂದು ಫೆ. 13ರ ಪತ್ರಿಕಾ ವರದಿಗಳು ತಿಳಿಸುತ್ತವೆ. ಇದು ಹುಬ್ಬಳ್ಳಿ, ಹೊನ್ನಾಳಿ ಮತ್ತು ದಾವಣಗೆರೆಗಳಲ್ಲಿ ಬಂಧಿತರಾದ ಶಂಕಿತ ಭಯೋತ್ಪಾದಕರ ಕುರಿತು ಹುಬ್ಬಳ್ಳಿ ವಕೀಲರು ತೆಗೆದುಕೊಂಡಿರುವ ನಿರ್ಣಯ. ಈ ಬಂಧಿತರ ಬಗ್ಗೆ ಪೊಲೀಸರ ತನಿಖೆಯೇ ಇನ್ನೂ ಪೂರ್ಣಗೊಂಡಿಲ್ಲ; ಮಾಧ್ಯಮಗಳು ಹೇಳಿದ ಯಾವ ಮಾರಕಾಸ್ತ್ರವೂ ಬಂಧಿತರಲ್ಲಿ ದೊರೆತಿಲ್ಲ; ಬಂಧಿತರ ಕುರಿತು ಮಾಹಿತಿ ಕಲೆ ಹಾಕುವ ಪ್ರಕ್ರಿಯೆಯೂ ಪೂರ್ಣಗೊಂಡಿಲ್ಲ, ಇದನ್ನು ಕರ್ನಾಟಕದ ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳು -ಇಬ್ಬರೂ ತಮ್ಮ ದಕ್ಷತೆ ಮತ್ತು ಪ್ರಾಮಾಣಿಕತೆಗಳಿಗೆ ಹೆಸರು ಮಾಡಿದವರು-ಶ್ರೀನಿವಾಸನ್ ಮತ್ತು ಅಜಯ ಕುಮಾರ್ ಸಿಂಗ್ ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಮಧ್ಯೆ ಬಂಧಿತರೆಲ್ಲರೂ ನಿಸ್ಸಂದೇಹವಾಗಿ ಭಯೋತ್ಪಾದಕರು ಎಂದು ಹುಬ್ಬಳ್ಳಿಯ ವಕೀಲರು ತೀರ್ಮಾನ ತೆಗೆದುಕೊಂಡುಬಿಟ್ಟಿದ್ದಾರೆ. ಬಂಧಿತರಲ್ಲಿ ಒಬ್ಬನಾದ ಮೆಡಿಕಲ್ ವಿದ್ಯಾರ್ಥಿ ಮೊಹಮ್ಮದ್ ಆಸಿಫ್‌ನ ಬಂಧನ ಕುರಿತ ತಕರಾರು ಹುಬ್ಬಳ್ಳಿ ನ್ಯಾಯಾಲಯದ ಮುಂದೆ ಇದ್ದು ಆತನ ಪರವಾಗಿ ವಾದಿಸುತ್ತಿರುವ ಇಸ್ಮಾಯಿಲ್ ಜಾಲಗಾರ್ ಅವರನ್ನು ಹುಬ್ಬಳ್ಳಿಯ ವಕೀಲರು ತಮ್ಮ ಸಂಘಟನೆಯಿಂದ ಹೊರಹಾಕಿದ್ದಾರೆ. ಹುಬ್ಬಳ್ಳಿಯ ಕರಿಕೋಟಿನ ಗೌರವಾನ್ವಿತರು ಈ ಪ್ರಕಾರವಾಗಿ ಆಸಿಫ್‌ನ ಮೊಕದ್ದಮೆ ಕುರಿತು ತಮ್ಮ ತೀರ್ಪು ಪ್ರಕಟಿಸಿದ್ದರೆ, ಅವರಷ್ಟು ಗೌರವಾನ್ವಿತರಲ್ಲದ ಕೆಲವರು ಇಸ್ಮಾಯಿಲ್ ಜಾಲಗಾರರ ಕಚೇರಿಗೆ ಬೆಂಕಿ ಕೊಟ್ಟು ತಮ್ಮ ನ್ಯಾಯಪರತೆಯನ್ನು ಮೆರೆದಿದ್ದಾರೆ.

ನ್ಯಾಯಾಲಯದ ಮುಂದೆ ಆರೋಪಿಯ ವಿಚಾರಣೆ ನಡೆಯದೆ, ಆರೋಪಿಗೆ ತನ್ನ ಅಹವಾಲು ಹೇಳಿಕೊಳ್ಳುವ ಅವಕಾಶ ನೀಡದೆ, ಸಾಕ್ಷಿಗಳನ್ನು ಪರಿಶೀಲಿಸದೆ ಏಕಾಏಕಿಯಾಗಿ ಆರೋಪಿಯನ್ನು ಅಪರಾಧಿ ಎಂದು ತೀರ್ಮಾನಿಸಿ, ಆತನ ಪರ ಯಾರೂ ವಾದಿಸಕೂಡದು ಎಂದು ವಕೀಲರೆ ತೀರ್ಮಾನಿಸುವುದಾದರೆ ಕಾನೂನು ಯಾಕಿರಬೇಕು? ನ್ಯಾಯಾಲಯ ಯಾಕೆ ಬೇಕು? ವಕೀಲರಾದರೂ ದಂಡಪಿಂಡಗಳಾಗಿ ಯಾಕೆ ಜೀವ ಹಿಡಿದುಕೊಂಡಿರಬೇಕು? ಹುಬ್ಬಳ್ಳಿ ವಕೀಲರು ವಕಾಲತ್ತು ಬಿಟ್ಟು, ಬೇರೆ ಏನಾದರೂ ಉದ್ಯೋಗ ಮಾಡಿಕೊಂಡು ಮರ್ಯಾದೆಯಲ್ಲಿ ಬಾಳುವುದು ಒಳ್ಳೆಯದು. ಈಗಂತೂ ಅವರು ತಮ್ಮ ವೃತ್ತಿಗೆ ಕಳಂಕಪ್ರಾಯರಾಗಿದ್ದಾರೆ.

ಹುಬ್ಬಳ್ಳಿ ವಕೀಲರ ಸಂಘದ ಈ ನಿರ್ಧಾರ, ಸಂವಿಧಾನದ ಸ್ಪಷ್ಟ ಉಲ್ಲಂಘನೆಯಾಗಿದೆ. ಅತ್ಯಂತ ಗಂಭೀರ ಅಪರಾಧಗಳ ಆರೋಪವನ್ನು ಎದುರಿಸುತ್ತಿರುವವನಿಗೂ ಪೊಲೀಸರ ಸಮ್ಮುಖದಲ್ಲಿ ಮತ್ತು ನ್ಯಾಯಾಲಯದ ಎದುರು ಕೆಲವು ಹಕ್ಕುಗಳಿವೆ. ಬಂಧನವಾದ ನಂತರ ನ್ಯಾಯಾಧೀಶರ ಎದುರು ಆರೋಪಿಯನ್ನು ಹಾಜರುಪಡಿಸುವುದು, ಜಾಮೀನಿನ ಮೇಲೆ ಬಿಡುಗಡೆಯಾಗಲು ಆರೋಪಿಗೆ ಅರ್ಜಿ ಸಲ್ಲಿಸುವ ಅವಕಾಶ, ನ್ಯಾಯಾಲಯದ ಎದುರು ತನ್ನ ಅಹವಾಲು ಹೇಳಿಕೊಳ್ಳುವ ಹಕ್ಕು, ತನ್ನ ವಿರುದ್ಧ ತಾನೇ ಒಂದು ಸಾಕ್ಷ್ಯವಾಗುವಂತೆ ಯಾರೂ ಒತ್ತಡ ಹೇರದಂತೆ ರಕ್ಷಣೆ, ಅಪರಾಧ ರುಜುವಾತಾಗುವವರೆಗೆ ನಿರಪರಾಧ ಎಂದೇ ಪರಿಗಣಿಸಲ್ಪಡುವ ಹಕ್ಕು- ಇವುಗಳನ್ನೊಳಗೊಂಡಿರುವ ನ್ಯಾಯ ಪ್ರಕ್ರಿಯೆ ಈ ಎಲ್ಲ ಮೂಲಭೂತ ಅಂಶಗಳನ್ನೂ ಆಸಿಫ್ ಪ್ರಕರಣದಲ್ಲಿ ಸ್ವತಃ ವಕೀಲರೇ ಕೈಬಿಟ್ಟಿದ್ದಾರೆ. ಕಾನೂನಿನ ಕ್ರಮವನ್ನು ಕೈಬಿಟ್ಟ ಈ ಬಗೆಯ ನ್ಯಾಯ ಅರಣ್ಯ ನ್ಯಾಯವಲ್ಲದೆ ಇನ್ನೇನು?

ಭಯೋತ್ಪಾದಕರ ಕುರಿತು ಕರ್ನಾಟಕದ ಮಾಧ್ಯಮಗಳು ಕಳೆದ ಎರಡು ವಾರಗಳಿಂದ ಸತತವಾಗಿ ನಡೆಸಿಕೊಂಡು ಬಂದಿರುವ ಹುಸಿ ಸುಳ್ಳು ಮತ್ತು ಅರೆಸತ್ಯಗಳ ಅಪಪ್ರಚಾರದ ಅಭಿಯಾನದ ಪರಿಣಾಮವೋ ಎಂಬಂತೆ ಹುಬ್ಬಳ್ಳಿ ವಕೀಲರ ಸಂಘದ ಈ ನಿರ್ಣಯ ಪ್ರಕಟವಾಗಿದೆ. ಕರ್ನಾಟಕದ ಮುಸ್ಲಿಮರಲ್ಲಿ ಈ ಶಂಕಿತ ಭಯೋತ್ಪಾದಕರಿಗಾಗಿ ಕಣ್ಣೀರು ಸುರಿಸುವವರು ಯಾರೂ ಇಲ್ಲ, ಎಲ್ಲಿಯೂ ಇವರ ಪರವಾಗಿ ಮತ ಪ್ರದರ್ಶನ ನಡೆದಿಲ್ಲ, ಆದಾಗ್ಯೂ ಮಾಧ್ಯಮಗಳು ಭಯೋತ್ಪಾದನೆಯ ನೆವದಲ್ಲಿ ರಾಜ್ಯದ ಮುಸ್ಲಿಮ್ ಸಮುದಾಯವನ್ನು ಕಟಕಟೆಯಲ್ಲಿ ನಿಲ್ಲಿಸಿವೆ. ಮೊಹಮ್ಮದ್ ಆಸಿಫ್‌ನ ತಾಯಿ, ಇನ್ನೊಬ್ಬ ಶಂಕಿತ, ಹೌಸ್‌ಸರ್ಜನ್ ಮಿರ್ಜಾನ ತಂದೆ ಹಾಗೂ ಹುಬ್ಬಳ್ಳಿಯ ಅಲ್ಲಾ ಭಕ್ಷ್‌ನ ಹೆತ್ತವರು ಪತ್ರಕರ್ತರ ಎದುರೇ, ತಮ್ಮ ಮಕ್ಕಳು ಅಪರಾಧಿಗಳೇ ಹೌದಾದರೆ ಅವರಿಗೆ ಕಠಿಣ ಶಿಕ್ಷೆಯೇ ಆಗಲಿ ಎಂದು ಹೇಳಿದ್ದಾರೆ. ಆದರೆ ಪತ್ರಿಕೆಗಳು ಮಾತ್ರ ಮುಸ್ಲಿಮರು ಸಾರಾಸಗಟಾಗಿ, ಈ ಶಂಕಿತರ ಜೊತೆ ಶಾಮೀಲಾಗಿರು ವಂತೆ ಚಿತ್ರಿಸುತ್ತಿವೆ.

ಕರ್ನಾಟಕದಲ್ಲಿ ಮುಸ್ಲಿಮ್ ಭಯೋತ್ಪಾದಕರ ಬಂಧನವಾಗಿರುವುದು ಇದೇನೂ ಮೊದಲ ಬಾರಿ ಅಲ್ಲ, ಈ ಹಿಂದೆ ಮೈಸೂರು, ಹಂಪಿ, ಬೆಂಗಳೂರು ಮತ್ತಿತರ ಕಡೆಗಳಲ್ಲಿ ಶಂಕಿತ ಉಗ್ರಗಾಮಿಗಳ ಬಂಧನವಾಗಿದೆ. ಅವರಿಗೆ ರಾಜ್ಯದ ಮುಸ್ಲಿಮರ ಸಹಕಾರವಿತ್ತು, ಕಡೆಯ ಪಕ್ಷ ಪರೋಕ್ಷ ಬೆಂಬಲ ಪ್ರೋತ್ಸಾಹಗಳಾದರೂ ಇತ್ತು ಎನ್ನುವುದಕ್ಕೆ ಇದುವರೆಗೂ ಯಾವುದೇ ಪುರಾವೆ ಇಲ್ಲ, ಸಂಘ ಪರಿವಾರದವರು ನಡೆಸುವ ಅಕೃತ್ಯಗಳಿಗೆ ಸಾಮಾನ್ಯ ಹಿಂದೂಗಳು ಕೊಡುವಷ್ಟು ಪ್ರೋತ್ಸಾಹ, ಮೌನಸಮ್ಮತಿ



ಹಾಗೂ ಮಾಧ್ಯಮಗಳ ಕುಮ್ಮಕ್ಕು, ಮುಸ್ಲಿಮ್ ಉಗ್ರಗಾಮಿಗಳಿಗೆ ಅವರ ಸಮುದಾಯದಿಂದ ದೊರೆಯುವುದಿಲ್ಲ, ಆ ಕಾರಣದಿಂದಲೇ ಸಂಘ ಪರಿವಾರದವರು ತಮ್ಮ ದಾಂಧಲೆಗಳನ್ನು ಹಾದುಹಗಲೇ ರಾಜಾರೋಷವಾಗಿ ನಡೆಸುತ್ತಾರೆ; ಅದರ ಫೋಟೋ ಹೊಡೆಸಿಕೊಳ್ಳುತ್ತಾರೆ; ಕೆಲವೊಮ್ಮೆ ಮಾಧ್ಯಮದವರ ಎದುರು ಆ ಬಗ್ಗೆ ಕೊಚ್ಚಿಕೊಳ್ಳುತ್ತಾರೆ ಕೂಡ. (ಉದಾ: ತೆಹೆಲ್ಕಾ ಪತ್ರಿಕೆಯ ಪತ್ರಕರ್ತನ ಎದುರು ಅವರು ಗುಜರಾತ್‌ನ ನರಮೇಧದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡದ್ದು).

ಮುಸ್ಲಿಮ್ ಭಯೋತ್ಪಾದಕರಿಗೆ ಮುಸ್ಲಿಮ್ ಸಮುದಾಯದ ಜೊತೆ ಈ ಬಗೆಯ ಸಂಬಂಧವಿಲ್ಲ; ಅವರ ಅಕೃತ್ಯಗಳಿಗೆ ಸಮುದಾಯದ ಬೆಂಬಲವೂ ಇಲ್ಲ, ಆದರೂ ಮಾಧ್ಯಮಗಳು ಇಂದು ಇಡೀ ಸಮುದಾಯವನ್ನೇ "ಶಂಕಿತ ಭಯೋತ್ಪಾದಕರು" ಎಂಬಂತೆ ಪರಿಗಣಿಸುತ್ತಿವೆ. ಇದು ಫ್ಯಾಸಿಸ್ಟರು, ತಾವು ಒಲ್ಲದ ಜನಸಮುದಾಯಗಳ ದಮನ ಮಾಡುವುದಕ್ಕೆ ಅನುಸರಿಸುವ ವಿಧಾನ.

ಮೊನ್ನೆ ಬಂಧಿತರಾದ ಭಯೋತ್ಪಾದಕರಿಗೆ ವಿಚಾರಣೆಯ ಅಗತ್ಯವೇ ಇಲ್ಲ ಅವರ ಅಪರಾಧಕ್ಕೆ ಅವರು ಮುಸ್ಲಿಮರು ಮತ್ತು ಶಂಕಿತರು ಎಂಬುದಕ್ಕಿಂತ ಹೆಚ್ಚಿನ ಸಾಕ್ಷ್ಯಾಧಾರವೂ ಅಗತ್ಯವಿಲ್ಲ ಎಂದು ಕರ್ನಾಟಕದ ಮಾಧ್ಯಮಗಳೂ, ಹುಬ್ಬಳ್ಳಿಯ ವಕೀಲರ ಸಂಘವೂ ಭಾವಿಸಿವೆ. ಇದೇ ವೇಳೆಗೆ ದೇಶದ ಇನ್ನೊಂದು ಮೂಲೆಯ ರಾಯ್ ಬರೇಲಿಯ ನ್ಯಾಯಾಲಯದಲ್ಲಿ ಬಾಬ್ರಿ ಮಸೀದಿ ಧ್ವಂಸದ ಆರೋಪದ ಮೇಲೆ ಸನ್ಮಾನ್ಯ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರಜೋಷಿ, ಉಮಾಭಾರತಿ, ಸಾಧ್ವಿಋತುಂಬರಾ, ಸಿಂಘಾಲ್ ಮತ್ತಿತರರ ಮೇಲೆ ವಿಚಾರಣೆ ಮುಂದುವರಿದಿದೆ. ಬಾಬ್ರಿ ಮಸೀದಿಯನ್ನು ನಾಶಪಡಿಸಿದ್ದು 1992 ರಲ್ಲಿ, ಆ ಕುರಿತು ನ್ಯಾಯಾಂಗ ತನಿಖೆ ನಡೆಸಲು ನೇಮಕವಾದ ಲೀಬರ್‌ಹಾನ್ಸ್ ಸಮಿತಿ ಇದುವರೆಗೂ ತನ್ನ ವರದಿಯನ್ನು ಪೂರ್ಣ ಗೊಳಿಸಿಲ್ಲ, ಹಾಡುಹಗಲೇ ಲಕ್ಷಾಂತರ ಜನರು ಮತ್ತು ನೂರಾರು ಪತ್ರಕರ್ತರ ಎದುರು ನಡೆದ ಅಪರಾಧದ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳು ಇನ್ನೂ ದೊರೆತಿಲ್ಲವಂತೆ! ಅವು ದೊರೆಯುವವರೆಗೂ ಅದ್ವಾನಿ ಮತ್ತು ಅವರ ಗ್ಯಾಂಗ್ ನಿರ್ದೋಷಿಗಳು ಎಂದೇ ಭಾವಿಸೋಣ. ಆದರೆ ಅದೇ ನ್ಯಾಯ ಹುಬ್ಬಳ್ಳಿಯ ಅಸಿಫ್ ಮತ್ತು ಇತರರಿಗೂ ಅನ್ವಯವಾಗಬೇಕು ಅಲ್ಲವೆ? ಅಥವಾ ಈ ದೇಶದಲ್ಲಿ ಹಿಂದೂಗಳಿಗೆ ಒಂದು ಕಾನೂನು, "ಅನ್ಯಮತೀಯರಿಗೆ" ಇನ್ನೊಂದು ಕಾನೂನು ಎಂಬ ನಿಯಮ ಅಗೋಚರವಾಗಿ ಚಾಲ್ತಿಗೆ ಬಂದಿದೆಯೇ?

ಇತ್ತೀಚೆಗೆ 1993ರ ಮುಂಬಯಿ ಸರಣಿ ಬಾಂಬ್ ಸ್ಫೋಟದ ಆರೋಪಿಗಳ ತನಿಖೆ ನಡೆದು, ನ್ಯಾಯ ವಿಚಾರಣೆಯೂ ನಡೆದು, ಅಪರಾಧ ರುಜುವಾತು ಆಗಿರುವವರಿಗೆ ಶಿಕ್ಷೆಯನ್ನೂ ಘೋಷಿಸಲಾಗಿದೆ. ಹಾಗೆಯೇ ಕೊಯಮತ್ತೂರು ಬಾಂಬ್ ಸ್ಫೋಟದ ಪ್ರಕರಣದ ತನಿಖೆಯೂ ಮುಗಿದಿದ್ದು ಅದರಲ್ಲಿ ಭಾಗಿಯಾಗಿದ್ದ ಹಲವರಿಗೆ ಶಿಕ್ಷೆ ವಿಧಿಸಲಾಗಿದೆ. ಈ ಎರಡೂ ಪ್ರಕರಣಗಳಲ್ಲಿ ಅಪರಾಧಿಗಳು ಎಂದು ತೀರ್ಮಾನಿಸಲ್ಪಟ್ಟ ಎಲ್ಲರೂ ಮುಸ್ಲಿಮರು. ದೇಶದಲ್ಲಿ ಎಲ್ಲಿಯೂ ಮುಸ್ಲಿಮ್ ಸಮುದಾಯದವರು ಇದನ್ನು ಪ್ರತಿಭಟಿಸಲಿಲ್ಲ.

ಆದರೆ ದೇಶದ ಹಲವೆಡೆ ಮುಸ್ಲಿಮ್ ಸಂಘಟನೆಗಳು 1992-93ರ ಮುಂಬಯಿ ಗಲಭೆಗಳ ಕುರಿತು ಶ್ರೀಕೃಷ್ಣ ಆಯೋಗದ ವರದಿಯ ಶಿಫಾರಸ್ಸುಗಳನ್ನೂ ಜಾರಿಗೆ ತಂದು, ಅಪರಾಧಿಗಳಿಗೆ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿವೆ. ಶ್ರೀಕೃಷ್ಣ ಆಯೋಗ ತನ್ನ ವರದಿಯಲ್ಲಿ 1992-93ರ ಮುಂಬಯಿಯ ಕೋಮುಹಿಂಸೆಗೆ ಕಾರಣರಾದ ಹಲವು ಬಿಜೆಪಿ, ಶಿವಸೇನೆ ಮತ್ತು ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರನ್ನು ಹೆಸರಿಸಿದೆ; ಹಿಂಸೆಗೆ ಶಾಮೀಲಾದ ಮಹಾರಾಷ್ಟ್ರದ ಹಲವು ಪೊಲೀಸ್ ಅಧಿಕಾರಿಗಳನ್ನೂ ಅದು ಹೆಸರಿಸಿದೆ. ಆದರೆ ಅವರಲ್ಲಿ ಯಾರಿಗೂ ಇದುವರೆಗೆ ಶಿಕ್ಷೆ ಆಗಿಲ್ಲ, ಅಷ್ಟೇ ಯಾಕೆ, ಆಯೋಗ ಹೆಸರಿಸಿದ ಹಲವು ಪೊಲೀಸ್ ಅಧಿಕಾರಿಗಳಿಗೆ ಪ್ರಮೋಷನ್ ಕೂಡ ದೊರೆತಿದೆ. ಅದೇ ವೇಳೆಗೆ ಈ ಗಲಭೆಯ ಸಂದರ್ಭದಲ್ಲಿ ಹಿಂಸೆಗೆ ಒಳಗಾದ ಮುಸ್ಲಿಮರ ಮೇಲೆಯೇ ಪೊಲೀಸರು ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡಿದ್ದು ಅವು ಈಗಲೂ ನ್ಯಾಯಾ ಲಗಳಲ್ಲಿ ನಡೆಯುತ್ತಿವೆ!

ಗುಜರಾತ್ ನರಮೇಧಕ್ಕೆ ಸಂಬಂಧಿಸಿದ ಬಹುತೇಕ ಕೇಸುಗಳನ್ನು, ಪೊಲೀಸರು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಚಿತಾವಣೆಯೊಂದಿಗೆ, "ಸಾಕ್ಷ್ಯಾಧಾರಗಳು ಇಲ್ಲ" ಎಂಬ ಕಾರಣಕ್ಕೆ ಮುಚ್ಚಿ ಹಾಕ ಲಾಗಿದೆ. ಗುಜರಾತ್‌ನಲ್ಲಿ ಅಪರಾಧಿಗಳು ಯಾವ ಭಯವೂ ಇಲ್ಲದೆ ಮುಕ್ತವಾಗಿದ್ದಾರೆ. ಅವರಲ್ಲಿ ಒಬ್ಬ ಮುಖ್ಯ ಮಂತ್ರಿಯೂ ಆಗಿ ಆಯ್ಕೆಗೊಂಡಿದ್ದಾನೆ. ಆದರೆ ಆ ನರಮೇಧದ ವೇಳೆಗೆ ತಮ್ಮ ಮನೆ ಮಾರು ತೊರೆದ ಸುಮಾರು 1,50,000 ಮುಸ್ಲಿಮರು ಈಗಲೂ ನಿರಾಶ್ರಿತರಾಗಿದ್ದಾರೆ. ಇದು ಎಂತಹ ನ್ಯಾಯಪದ್ಧತಿ? ಇದು ಎಂತಹ ಪ್ರಜಾಪ್ರಭುತ್ವ? ಈ ದೇಶ ಯಾರಿಗೆ ಸೇರಿದ್ದು?

ಮುಸ್ಲಿಮರನ್ನು ಕಾಡುತ್ತಿರುವ ಈ ಪ್ರಶ್ನೆಗಳನ್ನು ಈಗ ದೇಶದ ಇತರ ಪ್ರಜೆಗಳೂ ಕೇಳಿಕೊಳ್ಳಲೇಬೇಕಾಗಿಬಂದಿದೆ. ಗುಜರಾತ್‌ನಲ್ಲಿ ಮುಸ್ಲಿಮರು ಪ್ರಜೆಗಳು ಎಂಬುದನ್ನು ಮೊದಲು ನಿರಾಕರಿಸಲಾಯಿತು; ನಂತರ ಅವರು ಮನುಷ್ಯರಾಗಿಯೂ ಉಳಿಯಲಿಲ್ಲ, ಈ ಅಮಾನುಷ ಪ್ರಕ್ರಿಯೆ ಕರ್ನಾಟಕದಲ್ಲೂ ಈಗ ಪ್ರಾರಂಭವಾಗಿದೆ.

■ ಜಿ.ರಾಜಶೇಖರ



ಜಾಲಗಾರ್ ಏನಂತಾರೆ?

ಮೊಹ್ಮದ್ ಆಸಿಫ್‌ಗೆ ಜಾಮೀನು ಅರ್ಜಿ ಸಲ್ಲಿಸಿದ್ದಕ್ಕೆ ನನ್ನ ಕಚೇರಿಗೆ ಬೆಂಕಿ ಹಚ್ಚಲಾಯಿತು. ಈ ದುಷ್ಕೃತ್ಯವನ್ನು ಮಾಡಿದವರು ಸಂಘಪರಿವಾರದವರೇ ಎಂಬುದರಲ್ಲಿ ನನಗೇನೂ ಅನುಮಾನವಿಲ್ಲ, ನಾನು ಈ ಕೇಸನ್ನು ತೆಗೆದುಕೊಂಡ ತಕ್ಷಣವೇ ಅವರು ಇದನ್ನು ವಿರೋಧಿಸಿದ್ದರು. ಈಗ ಇಂಥ ಹೀನಕೃತ್ಯಕ್ಕಿಳಿಯುವ ಮೂಲಕ ಅವರು ತಮ್ಮ ವಿಕೃತಿಯನ್ನು ಹೊರಗೆಡವಿದ್ದಾರೆ. ಅಲ್ಲದೇ, ಈ ಮೂಲಕ ಅವರು ಈ ದೇಶದ ಕಾನೂನಿಗೆ ಎಷ್ಟರಮಟ್ಟಿಗೆ ಗೌರವ ಸಲ್ಲಿಸುತ್ತಾರೆ, ಪ್ರಜಾತಾಂತ್ರಿಕ ವ್ಯವಸ್ಥೆಯ ಬಗೆಗಿನ ಅವರ ಧೋರಣೆ ಏನು ಎಂಬುದನ್ನು ಮತ್ತೊಮ್ಮೆ ಜಗಜ್ಜಾಹೀರು ಮಾಡಿದ್ದಾರೆ.

ಹುಬ್ಬಳ್ಳಿ ವಕೀಲರ ಸಂಘದವರು 'ಬಂಧಿತ ಉಗ್ರರ' ಪರವಾಗಿ ಯಾವ ವಕೀಲರೂ ವಾದ ಮಾಡಬಾರದು ಎಂದು ಫರ್ಮಾನು ಹೊರಡಿಸಿದ್ದಾರೆ. ಕಾನೂನನ್ನು ಅರಿತವರೇ ಅದನ್ನು ಉಲ್ಲಂಘಿಸುತ್ತಿರುವುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ. ಈ ರೀತಿ ನಿರ್ಧಾರಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 303 ಹಾಗೂ 304ಕ್ಕೆ ವಿರೋಧಿಯಾದದ್ದು. ಹುಬ್ಬಳ್ಳಿಯ ವಕೀಲರ ಸಂಘಕ್ಕೆ ಇಂಥ ಫರ್ಮಾನು ಹೊರಡಿಸುವುದಕ್ಕೆ ಯಾವುದೇ ರೀತಿಯ ಕಾನೂನುಬದ್ಧ ಹಕ್ಕಾಗಲೀ, ನೈತಿಕ ಹಕ್ಕಾಗಲೀ ಇಲ್ಲ, ವಾಸ್ತವದಲ್ಲಿ ಇದು ಸಂಘದ ಮೂಲ ಉದ್ದೇಶಕ್ಕೆ ಮಾತ್ರವಲ್ಲ, ಈ ದೇಶದ ಪವಿತ್ರ ಸಂವಿಧಾನಕ್ಕೂ ವಿರೋಧವಾದದ್ದು. ಹುಬ್ಬಳ್ಳಿಯ ವಕೀಲರು ತೆಗೆದುಕೊಂಡಿರುವ ಈ ನಿರ್ಧಾರದಿಂದ ವಾಸ್ತವದಲ್ಲಿ ವಕೀಲರ ಸಮೂಹವೇ ನಾಚಿಕೆಪಟ್ಟುಕೊಳ್ಳಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ವಕೀಲರು ಯಾವುದೇ ಜಾತಿ, ಬಣ್ಣ, ಧರ್ಮ ಅಥವಾ ಸಂಬಂಧಗಳ ಕಟ್ಟುಪಾಡುಗಳಿಗೆ ಒಳಪಡದೇ ತಮ್ಮ ವೃತ್ತಿನೀತಿಗಳನ್ನು ಅನುಸರಿಸಬೇಕು. ಈ ವಿಚಾರದಲ್ಲಿ ಹುಬ್ಬಳ್ಳಿ ವಕೀಲರು ಎಡವಿದ್ದಾರೆ.

ಬಂಧಿತರು ಅಪರಾಧಿಗಳೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಬೇಕಾದದ್ದು ನ್ಯಾಯಾಲಯ. ಅವರನ್ನು ಬಂಧಿಸಿರುವ ಪೊಲೀಸರೇ ಅವರು ಭಯೋತ್ಪಾದಕರು ಎಂದು ಹೇಳಿಲ್ಲ, ನ್ಯಾಯಾಲಯದಲ್ಲಿ ವಿಚಾರಣೆಯೂ ಆಗಿಲ್ಲ, ಅಷ್ಟರಲ್ಲಾಗಲೇ ಮಾಧ್ಯಮಗಳು ಮತ್ತು ಹುಬ್ಬಳ್ಳಿಯ ವಕೀಲರು ಬಂಧಿತರು ಅಪರಾಧಿಗಳು ಎಂದು ತೀರ್ಪು ನೀಡಿದ್ದಾರೆ. ಇದು ಕೂಡ ಆರೋಪಿಯೊಬ್ಬರ ಮೇಲಿನ ಆರೋಪ ನ್ಯಾಯಾಲಯದಲ್ಲಿ ಸಾಬೀತಾಗುವವರೆಗೆ ಅವರು ಆರೋಪಿಗಳೇ ಹೊರತು ಅಪರಾಧಿಗಳಲ್ಲ ಎನ್ನುವ ತತ್ವಕ್ಕೆ ಬದ್ಧವಾಗಿರುವ ನಮ್ಮ ದೇಶದ ನ್ಯಾಯವ್ಯವಸ್ಥೆಗೆ ಇವರೆಲ್ಲ ಮಾಡಿದ ಅಪಚಾರವೇ ಆಗಿದೆ. ಈ ವಿಚಾರದಲ್ಲಿ ಮೀಡಿಯಾ ಮುಗ್ಧಜನರನ್ನು ದಾರಿತಪ್ಪಿಸಿ ಅವರಲ್ಲಿ ಒಂದು ಕಾಲ್ಪನಿಕ ಭೀತಿಯನ್ನು ಮೂಡಿಸಿ ಒಂದು ಸಮುದಾಯದ ಮೇಲೆ ತಪ್ಪು ಅಭಿಪ್ರಾಯ ಸೃಷ್ಟಿಯಾಗುವಂತೆ ಮಾಡಿದೆ.

ಇಲ್ಲಿ ಇನ್ನೊಂದು ವಿಚಾರವನ್ನು ಹೇಳಬೇಕು. ನಾನು ನನ್ನ ವೃತ್ತಿಯನ್ನು ಕಾನೂನಿನ ಚೌಕಟ್ಟಿನಲ್ಲಿ ವೃತ್ತಿನೀತಿಗಳಿಗನುಗುಣವಾಗಿಯೇ ಮಾಡುತ್ತಿದ್ದೇನೆ. ಇಷ್ಟೆಲ್ಲಾ ಆದ ಮೇಲೂ ಈ ಕೇಸನ್ನು ನಾನೇ ನಡೆಸುತ್ತೇನೆ. ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ, ಅಷ್ಟಕ್ಕೂ ನಾನು ಒಂಟಿಯಲ್ಲ, ಸದ್ಯಕ್ಕಿರುವ ಪರಿಸ್ಥಿತಿಯಲ್ಲಿ ಸಂಘಪರಿವಾರದ ಕಟ್ಟಾ ಬೆಂಬಲಿಗರನ್ನು ಹೊರತುಪಡಿಸಿ ನಗರದ ಒಳಗೂ, ಹೊರಗೂ ಒಟ್ಟಾರೆ ರಾಜ್ಯಾದ್ಯಂತ ಹಲವಾರು ಹಿರಿಯ ನ್ಯಾಯವಾದಿಗಳು, ಪ್ರಜಾತಂತ್ರಪ್ರೇಮಿಗಳು, ನಾಗರಿಕರು ನನ್ನೊಂದಿಗಿದ್ದಾರೆ. ಈ ದೇಶದ ಸಂವಿಧಾನಕ್ಕೆ, ಕಾನೂನುಗಳಿಗೆ, ನ್ಯಾಯವ್ಯವಸ್ಥೆಗೆ ಜಯ ಸಿಕ್ಕೇಸಿಗುತ್ತೆ ಎಂಬ ಭರವಸೆ ನನಗಿದೆ.

■ ಇಸ್ಮಾಯಿಲ್ ಡಿ ಜಾಲಗಾರ್,
ವಕೀಲರು, ಹುಬ್ಬಳ್ಳಿ

ಡಾನ್ ರವಿ ಪೂಜಾರಿಯ ಪೌರೋಹಿತ್ಯ?

ಗಣೇಶನ ಮದುವೆಗೆ ನೂರೆಂಟು ವಿಘ್ನ ಎಂಬ ಮಾತೊಂದಿದೆ. ತಪ್ಪೋನೆಪ್ಪೋ: ಅದು ಕಾಮಿಡಿ ಗಣೇಶನ ಮದುವೆಯಲ್ಲೂ ಸಾಬೀತಾಗಿದೆ. ಮೊದಲು 'ಚಿತ್ರಾ'ದ ರೇಖಾಳನ್ನೇ ಗಣೇಶ್ ಮದುವೆಯಾಗ್ತಾನೆ ಎಂದು ಇಡೀ ಗಾಂಧಿನಗರ ಮಾತಾಡಿಕೊಂಡಿತ್ತು. ಆನಂತರ ಈಟೀವಿಯ ಆ್ಯಂಕರ್ ರೀನಾಳನ್ನು ಪ್ರೀತಿಸ್ತಿದ್ದಾನೆ ಎಂದು ಗುಲ್ಲೆದ್ದಿತ್ತು. ತದನಂತರ ಚೆಲುವಿನ ಚಿತ್ತಾರದ ನಾಯಕಿ ಅರ್ಥಾತ್ ಬಾಲನಟಿ ಅಮೂಲ್ಯಳನ್ನೇ ಗಣೇಶ್ ಮದುವೆಯಾಗ್ತಾನೆ ಎಂದು ಕೆಲವೆಡೆ ಹುಯಿಲೆದ್ದಿತ್ತು. ಆದರೆ ಈ ಎಲ್ಲಾ ನಿರೀಕ್ಷೆ ವದಂತಿಗಳ ನೆತ್ತಿಗೆ ಹೊಡೆದಂತೆ ಶಿಲ್ಪಾ ಶೆಟ್ಟಿಗಾರ್ ಎಂಬ ಕೋಟ್ಯಾಧಿಪತಿಯ ಮಗಳ ಕೈಹಿಡಿದಿದ್ದಾನೆ ಗೋಲ್ಡನ್ ಸ್ಟಾರ್ ಗಣೇಶ್.

ಶಿಲ್ಪಾ ಸಿನಿಮಾ ನಟಿಯಲ್ಲ, ಕನ್ನಡ ಚಿತ್ರರಂಗದ ಜೊತೆ ನಂಟಿದ್ದವಳೂ ಅಲ್ಲ. ಈಕೆಯ ತಂದೆ ಶಿವರಾಮ್ ಶೆಟ್ಟಿಗಾರ್‌ಗೆ ದುಬೈನಲ್ಲಿ ಡೈಮಂಡ್ ವ್ಯಾಪಾರವಿದೆ. ತಾಯಿ ಶಕುಂತಲಾ ಶೆಟ್ಟಿ ಕೂಡ ದುಬೈ ವಾಸಿಯೆ. ಮೂಲತಃ ಉಡುಪಿ ಜಿಲ್ಲೆ ಬ್ರಹ್ಮಾವರ ಸಮೀಪದ ಬಾರಕೂರಿನವರಾದ ಶಿವರಾಮ್ ಶೆಟ್ಟಿಗಾರ್ ಪ್ರಾರಂಭದಲ್ಲಿ ಮುಂಬಯಿಯಲ್ಲಿ ಡೈಮಂಡ್ ವ್ಯಾಪಾರ ಮಾಡಿಕೊಂಡಿದ್ದು ಕ್ರಮೇಣ ದುಬೈನಲ್ಲಿ ನೆಲೆಗೊಂಡವರು. ಶಿಲ್ಪಾ ಅವರ ಏಕಮಾತ್ರ ಪುತ್ರಿ. ಶರೂನ್ ಅವರ ಒಬ್ಬನೇ ಮಗ. ಶಿಲ್ಪಾಗೆ ದುಬೈನಲ್ಲಿದ್ದಾಗಲೇ ಒಂದು ಮದುವೆಯಾಗಿತ್ತು. ಅದು ಬರಕತ್ತಾಗದೇ ಆನಂತರ ಮೈಸೂರಿನ ಹೋಟೆಲಿಯರ್ ಧರ್ಮಪ್ರಕಾಶ್ ಗುಪ್ತಾನ ಮಗ ವಿಕ್ರಮ್ ಗುಪ್ತಾನ ಜೊತೆ ಮದುವೆಯಾಗಿ ಆತನಿಂದ ಶಿಲ್ಪಾಗೆ ಮಗುವೊಂದಿತ್ತು. ಈಗ ಕಾಮಿಡಿ ಗಣೇಶ್ ಜೊತೆಗೆ ಆಕೆಯದು ಮೂರನೇ ಮದುವೆ. ಅದೂ ಬಲವಂತದ ಮದುವೆ. ಮೊದಲು ಗಣೇಶನನ್ನು ಬುಟ್ಟಿಗೆ ಹಾಕಿಕೊಂಡು ಶಿಲ್ಪಾ ಆತನ ಜೊತೆ ಒಂದಷ್ಟು ಫೋಟೋ ತೆಗೆಸಿಕೊಂಡಳೆಂದೂ, ಆನಂತರ ಅದನ್ನೇ ಮುಂದಿಟ್ಟು ಬ್ಲಾಕ್‌ಮೇಲ್ ಮಾಡಿ ಮದುವೆಯಾದಳೆಂದೂ, ಹಾಗೇ ಶಿಲ್ಪಾಳನ್ನೇ ಮದುವೆಯಾಗುವಂತೆ ಗಣೇಶ್‌ಗೆ ದುಬೈ ಘಾತಕಿ ಕಿಲ್ಲರ್ ರವಿ ಪೂಜಾರಿ ಧಮಕಿ ಹಾಕಿದ್ದರಿಂದಲೇ ಗಣೇಶ್ ಗಾಬರಿಗೆ ಬಿದ್ದು ಆತುರಾತುರವಾಗಿ 2008 ರ ಫೆಬ್ರವರಿ ಹನ್ನೊಂದರ ರಾತ್ರಿ ಜೆ.ಪಿ. ನಗರದ ಶಿಲ್ಪಾಳ ಮನೆಯಲ್ಲಿ ವಿಧಿಯಿಲ್ಲದೇ ಮದುವೆಯಾದನೆಂಬುದು ಹಬ್ಬಿರುವ ಸುದ್ದಿ!

ಗಾಸಿಪ್ ಹಬ್ಬಿಸುವವರಿಗೆ ಗಾಂಧಿನಗರದಲ್ಲೇನು ಕಮ್ಮಿಯೆ?

ಕಾಮಿಡಿ ಗಣೇಶ್ ಸದ್ಯ ಗಾಂಧಿನಗರದ ಗೋಲ್ಡನ್ ಸ್ಟಾರ್. ಆತ ಮುಟ್ಟಿದ್ದೆಲ್ಲ ಚಿನ್ನ. ಮದುವೆಗಿನ್ನೂ ಟೈಮಿತ್ತು, ನಾಲ್ಕೈದು ವರ್ಷ ಬಿಟ್ಟು ಮದುವೆಯಾಗಬಹುದಿತ್ತು. ಹೀಗೆ ಅನಿರೀಕ್ಷಿತವಾಗಿ, ತೀರ ಅಪರೂಪಕ್ಕೆಂಬಂತೆ ವಿಭಿನ್ನ ರೀತಿಯಲ್ಲಿ ಮದುವೆಯಾಗಿದ್ದೇ ಗಣೇಶ ಮದುವೆಯ ಸುತ್ತ ಅನುಮಾನದ ಹೊಗೆಯೆಬ್ಬಿಸಿತೆ?



ಗಣೇಶನೊಂದಿಗೆ ಶಿಲ್ಪಾ

ಶಿಲ್ಪಾ ಶೆಟ್ಟಿಗಾರ್ ಪಿಯುಸಿ ಓದಿದ್ದು ಜೆ.ಪಿ. ನಗರದ ಆಕ್ಸ್‌ಫರ್ಡ್ ಶಾಲೆಯಲ್ಲಿ, ಆನಂತರ ಬಸವನಗುಡಿಯ ಮಹಾವೀರ್ ಜೈನ್ ಕಾಲೇಜಿಗೆ ಇಂಟೀರಿಯರ್ ಡಿಜೈನಿಗೆಂದು ದಾಖಲಾಗುತ್ತಾಳೆ. ಮಗಳ ಓದಿಗೆಂದು ತಂದೆತಾಯಿ ಜೆಪಿನಗರದಲ್ಲಿ ನಟ ಸುದೀಪ್ ಮನೆ ಹಿಂಭಾಗಕ್ಕೆ ಬಂಗಲೆಯೊಂದನ್ನು ಖರೀದಿಸಿ ಕೊಡುತ್ತಾರೆ. ಈ ಮಧ್ಯೆ ತಮ್ಮ ಶರೂನ್ ಅಲಿಯಾಸ್ ಬಬ್ಲೂ ಇಂಜಿನಿಯರಿಂಗ್ ಓದಿಗೆಂದು ಆಸ್ಟ್ರೇಲಿಯಾಕ್ಕೆ ಹೋಗುತ್ತಾನೆ.


ತಮ್ಮನ ಭೇಟಿಗೆಂದು ಆಸ್ಟ್ರೇಲಿಯಾಕ್ಕೆ ಹೋಗಿದ್ದ ಶಿಲ್ಪಾಳಿಗೆ ಅಲ್ಲಿ ಪರಿಚಿತನಾದವನು ವಿಕ್ರಮ್ ಗುಪ್ತಾ. ಅದು ಪ್ರೇಮಕ್ಕೆ ತಿರುಗಿ 2004ರ ಡಿಸೆಂಬರ್ 16ರಂದು ವಿಕ್ರಮ್-ಶಿಲ್ಪಾ ಮದುವೆ ಬೆಂಗಳೂರು ದಕ್ಷಿಣದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾವಣೆಗೊಳ್ಳುತ್ತದೆ. ಆದರೆ ವಿಕ್ರಮ್‌ನ ತಂದೆ ಮತ್ತು ಮೈಸೂರಿನ ದರ್ಶನ್ ಪ್ಯಾಲೇಸ್ ಹೋಟೆಲಿನ ಮಾಲೀಕ ಧರ್ಮಪ್ರಕಾಶ್‌ಗೆ ಇದು ಒಪ್ಪದ ಮದುವೆ. ಏನೇ ಮಾಡಿದರೂ ಆತ ಶಿಲ್ಪಾಳನ್ನು ಒಪ್ಪುವುದೇ ಇಲ್ಲ. ಇತ್ತ ವಿಕ್ರಮ್ ಮತ್ತು ಶಿಲ್ಪಾ ಜೆ.ಪಿ. ನಗರದ ಬಂಗಲೆಯಲ್ಲಿ ಒಂದು ತಿಂಗಳು ಸಂಸಾರ ನಡೆಸುತ್ತಾರೆ.

ಬಿಜೆಪಿ ಭೂಕಂಟಕರಿಗೆ ಮುಹೂರ್ತ?

ಅಶೋಕ್ ಕೊರಳಿಗೆ ಸಿಬಿಐ ಕುಣಿಕೆ!

ಬಿಜೆಪಿಯ ಕೇಡುಗಾಲ ಮತ್ತು ಅದರ ನಾಯಕ ಆರ್. ಅಶೋಕ್ ಪಾಪದ ಕೊಡ ಒಟ್ಟೊಟ್ಟಿಗೇ ತುಂಬಿ ಬಂದಿದೆ!

ಪತ್ರಿಕೆ ಬಯಲಿಗೆಳೆದ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ವಿರುದ್ಧ ಜನಪರ ಸಂಘಟನೆಗಳೆಲ್ಲ ಒಂದೊಂದಾಗಿ ಬೀದಿಗಿಳಿಯುತ್ತಿವೆ. ಮತ್ತೊಂದೆಡೆ ಕಾಂಗ್ರೆಸ್ ನಾಯಕ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ ಇದೇ ಸೋಮವಾರಕ್ಕೆ ಬೃಹತ್ ರ‍್ಯಾಲಿಯೂ ನಡೆಯಿತೆಂದರೆ ಒಂದು ಡಜನ್ ಕಂದಾಯ ಅಧಿಕಾರಿಗಳ ಜೊತೆ ಮಾಜಿ ಮಂತ್ರಿ ಆರ್. ಅಶೋಕ್ ಕೂಡ ಕಂಬಿ ಎಣಿಸಲೇಬೇಕು. ರಾಜ್ಯಪಾಲ ರಾಮೇಶ್ವರ್ ಠಾಕೂರ್ ಇಡೀ ಉತ್ತರಹಳ್ಳಿ ಭೂಮಂಜೂರಾತಿ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲಿದ್ದಾರಂತೆ. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡೇ ರಾಜ್ಯಪಾಲರಿಗೆ ಗ್ರೀನ್ ಸಿಗ್ನಲ್ ಕಳಿಸಿದೆಯಂತೆ.



ಪ್ರಶ್ನೆಯಿಷ್ಟೇ, ಕಂಬಿ ಎಣಿಸುವುದು ಆರ್. ಅಶೋಕ್ ಮಾತ್ರವೇ? ಅಥವಾ ಬೆಂಗಳೂರು ಮಹಾನಗರ ಪಾಲಿಕೆಯ ಅರ್ಧ ಡಜನ್ ಬಿಜೆಪಿ ಕೌನ್ಸಿಲರ್‌ಗಳು ಮತ್ತು ಎರಡು ಡಜನ್ ಬಿಜೆಪಿ ಕಾರ್ಯಕರ್ತರೂ ಸೇರುತ್ತಾರಾ?

ಬೇರೆ ಯಾವುದೇ ಭೂಹಗರಣಕ್ಕೂ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಗೂ ಇರುವ ಅಂತರವೇ ಅಂಥಾದ್ದು. ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದ ಬಹುತೇಕ ಗ್ರಾಮಗಳ ಭೂಮಿ ಬೆಲೆ ಹೇಗೆ ಆಕಾಶಕ್ಕೇರಿದೆಯೋ ಹಾಗೆಯೇ ಭೂಸಂಬಂಧಿ ಮಾರಾಮಾರಿಗಳೂ ಯಥೇಚ್ಛವಾಗಿವೆ. ಮುಂದೊಮ್ಮೆ ಬೆಂಗಳೂರು ಪಾಲಿಕೆಯ ಗಡಿದಾಟಿ ಬೆಳೆದಾಗ ಪಾರ್ಕು, ಆಟದ ಮೈದಾನ, ಪೊಲೀಸ್ ಸ್ಟೇಷನ್, ಬಸ್ ಸ್ಟ್ಯಾಂಡ್, ಪಬ್ಲಿಕ್ ಶೌಚಾಲಯ, ಸ್ಮಶಾನ, ಸರ್ಕಾರಿ ಕಚೇರಿ, ಪಾಲಿಕೆಯ ವಾರ್ಡ್ ಆಫೀಸ್ ಇತ್ಯಾದಿಗಳಿಗೆಂದು ಸರ್ಕಾರ ಯಾವ ಭೂಮಿಯನ್ನು ರಕ್ಷಿಸಿ ಕಾಪಾಡಬೇಕಾಗಿತ್ತೋ ಅಶೋಕ್ ಪಟಾಲಂ ನುಂಗಿರುವುದು ಅದೇ ಭೂಮಿಯನ್ನು.

ಇದರರ್ಥ ಬೆಂಗಳೂರಿನ ಭವಿಷ್ಯದ ಸಮಾಧಿಯ ಮೇಲೆ ಕೂತೇ ಬಿಜೆಪಿ ಭೂಕಂಟಕರು ಲೂಟಿ ಹೊಡೆದಿದ್ದಾರೆ. ಯಾವಾಗ ಬಿಜೆಪಿ-ಜೆಡಿಎಸ್ ಸರ್ಕಾರ ಬಿದ್ದು ರಾಜ್ಯಪಾಲರ ಆಳ್ವಿಕೆ ಬಂತೋ ಈ ಬಗ್ಗೆ ಜನಪರ ಸಂಘಟನೆಗಳು ಬೀದಿಗಿಳಿದಿವೆ. ಈ ಪೈಕಿ ಅಂಬೇಡ್ಕರ್ ಯುವ ಸೇನೆಯ ನಾಯಕ ಕೋದಂಡರಾಮ್ ಫೆಬ್ರವರಿ 8 ರಂದು ವಿರೋಧಿ ಕಾಂಗ್ರೆಸ್ಸನ್ನೇ ಕೆಣಕುವಂತೆ ಗಾಂಧಿ ಪ್ರತಿಮೆಯ ಮುಂದೆ ಭಾರೀ ಪ್ರತಿಭಟನೆ ನಡೆಸಿದ್ದಾರೆ. ಇಷ್ಟಾಗಿದ್ದೇ ನಡುಗಿದ ಅಶೋಕ್ ತೇಪೆ ಕಾರ್ಯಕ್ಕೆ ಮುಂದಾಗಿ 'ಇದರಲ್ಲಿ ನಂದೇನೂ ತಪ್ಪಿಲ್ಲ, ಭೂಮಂಜೂರಾತಿ ಸಮಿತಿಯಲ್ಲಿದ್ದವರೆಲ್ಲ ಕಾಂಗ್ರೆಸ್ ನಾಯಕರೆ. ಅವರೆಲ್ಲ ಸೇರಿ ಮಾಡಿದ ನಿರ್ಣಯಕ್ಕೆ ತಾನೇ ನಾನು ಸಹಿ ಮಾಡಿದ್ದು? ತಪ್ಪು ಕಾಂಗ್ರೆಸ್ಸಿಗರದ್ದೇ ಹೊರತು ನಂದೇನಲ್ಲ....' ಎಂದು ಎಲ್ಲೆಂದರಲ್ಲಿ ಭಾಷಣ ಬಿಗಿಯುತ್ತಿದ್ದಾನೆ.

ನಿಜ, ಅಶೋಕ್ ಎಮ್ಮೆಲ್ಲೇಗಿರಿಯಲ್ಲಿ ಕೊನೆಯ ಎಂಟು ತಿಂಗಳ ಮಟ್ಟಿಗೆ ಅವರ ಪರಮಾಪ್ತ ಕಗ್ಗಲಿಪುರದ ಶಿವಕುಮಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ಭೂಮಂಜೂರಾತಿ ಸಮಿತಿಗೆ ಅಧ್ಯಕ್ಷರಾಗಿದ್ದದ್ದು ಬಿಟ್ಟರೆ 2006ರ ತನಕ ಅಶೋಕ್ ಒಬ್ಬನೇ ಇಡೀ ಭೂಮಂಜೂರಾತಿಯನ್ನು ಸಂಭಾಳಿಸಿದ್ದಾನೆ. 1991ರ ತನಕ ಇದ್ದ ಜೆ.ಎಚ್. ಪಟೇಲ್ ಸರ್ಕಾರ ಜನತಾದಳದ ಮರಿಪುಡಾರಿ ತಟ್ಟಗುಪ್ಪೆ ಅಂತೋಣಿ ಸ್ವಾಮಿಯನ್ನು ದರಖಾಸ್ತು ಸಮಿತಿಗೆ ನೇಮಿಸಿತ್ತು. ಈ ಅಂತೋಣಿಸ್ವಾಮಿ ಕೂಡ ಹುಟ್ಟಾ ನೆಲಗಳ್ಳನೆ ಆದರೂ ಅಶೋಕ್ ಈತನ ಕಡೆಯ ಬಹುತೇಕ ಅರ್ಜಿಗಳನ್ನೆಲ್ಲ ಕಸದತೊಟ್ಟಿಗೆ ಎಸೆದ. ಆನಂತರ ಬಂದ ಕೃಷ್ಣನ ಸರ್ಕಾರ ಗೋಣಿಪುರದ ಪುಟ್ಟದೇವಮ್ಮ, ನೆಟ್ಟಿಗೆರೆ ವೆಂಕಟೇಶ್ ಮತ್ತು ಶಾಂತಾರಾಂ ರೆಡ್ಡಿ ಎಂಬ ಮೂವರು ಕಾಂಗ್ರೆಸ್ ಆಸಾಮಿಗಳನ್ನು ನೇಮಿಸಿತು. ದುರದೃಷ್ಟವಶಾತ್ ಈ ಮೂವರೂ ಲ್ಯಾಂಡ್ ಬ್ರೋಕರುಗಳೇ!

ತಮಾಷೆಯೆಂದರೆ ಅಧ್ಯಕ್ಷ ಅಶೋಕ್ ಕಾಂಗ್ರೆಸ್ಸಿನ ಈ ಮೂವರೂ ಸದಸ್ಯರನ್ನು ಯಾಪಾಟಿ ಗೋಳಿಟ್ಟನೆಂದರೆ ಕಾಂಗ್ರೆಸ್ ಪೈಕಿ ಒಂದು ಅರ್ಜಿಗೆ ರುಜು ಹಾಕಬೇಕೆಂದರೆ ಅದಕ್ಕೆ ಪ್ರತಿಯಾಗಿ ಬಿಜೆಪಿಯ ಹತ್ತು ಅರ್ಜಿಗಳನ್ನಿಡುತ್ತಿದ್ದರು!

ಈಗ ಅಶೋಕ್ ತಪ್ಪನ್ನೆಲ್ಲ ಕಾಂಗ್ರೆಸ್ ತಲೆಗೆ ಕಟ್ಟುತ್ತಿದ್ದಾನೆ. ಹಾಗಾದರೆ ಬೆಂಗಳೂರು ಮಹಾನಗರ ಪಾಲಿಕೆಯ ಅರ್ಧ ಡಜನ್ ಬಿಜೆಪಿ ಕೌನ್ಸಿಲರ್‌ಗಳ ಹೆಸರಿಗೆ ಜಮೀನು ಮಂಜೂರು ಮಾಡುವಂತೆ ಕಾಂಗ್ರೆಸ್ ಸದಸ್ಯರೇ ಒತ್ತಡ ತಂದರೆ? ಬಿಜೆಪಿಯ ಕಾರ್ಯಕರ್ತರು, ವೆಂಕಯ್ಯನಾಯ್ಡು ಬಂಟ ಆಂಧ್ರದ ಬಿಲ್ಡರ್ ಚಂಗಮರಾಜು ಮತ್ತು ಆತನ ಮಗ ಗುರುರಾಜ್, ಕನ್ನಡ ಕಲಿ ಎಂ. ಚಿದಾನಂದಮೂರ್ತಿ, ಅರ್ಧ ಡಜನ್ ಆರೆಸ್ಸೆಸ್ ಕಾರ್ಯಕರ್ತರು ಮುಂತಾದವರಿಗೆಲ್ಲ ಸಾವಿರಾರು ಎಕರೆ ಸರ್ಕಾರಿ ಜಮೀನು ಮಂಜೂರು ಮಾಡುವಂತೆ ನಿರ್ಣಯ ಪಾಸು ಮಾಡಿದ್ದು ಕೇವಲ ಕಾಂಗ್ರೆಸ್ ನಾಯಕರು ಮಾತ್ರವೆ? ಅಥವಾ ಅದು ಬಿಜೆಪಿ ನಾಯಕ ಆರ್. ಅಶೋಕ್ ಒತ್ತಾಸೆಯೆ?

ಪಾಪ, ಅಶೋಕ್‌ಗೆ ಸುಳ್ಳನ್ನೂ ಸರಿಯಾಗಿ ಹೇಳುವುದು ಗೊತ್ತಿದ್ದಂತಿಲ್ಲ. ಬಿಜೆಪಿ ನಾಯಕರಿಗೆ ಸರ್ಕಾರಿ ಜಮೀನು ನುಂಗಲು ಕಾಂಗ್ರೆಸ್ ನಾಯಕರೇಕೆ ನೆರವಾಗುತ್ತಾರೆ? ತುಂಡು ಭೂಮಿ ಸಿಕ್ಕರೂ ಹಿಂಡಾಗಿ ನುಂಗುವ ಕಾಂಗ್ರೆಸ್ ನಾಯಕರೇ ತುಂಬಿರುವಾಗ ಅವರು ಬಿಜೆಪಿ ಭೂಕೊಳ್ಳೆಗೆ ನೆರವಾಗುತ್ತಾರೆಂದರೆ ಯಾರು ತಾನೇ ನಗೊಲ್ಲ?

ಇಲ್ಲಿನ ಸೂಕ್ಷ್ಮವೆಂದರೆ ಮೊದಮೊದಲು ಈ ಬಗ್ಗೆ ಬೀದಿಗಿಳಿಯಲು ಹಿಂಜರಿದ ಕಾಂಗ್ರೆಸ್ ನಾಯಕರು ಯಾವತ್ತು ಜನಪರ ಸಂಘಟನೆಗಳು ಬೀದಿಗಿಳಿದವೋ ಮುಖ ಮುಚ್ಚಿಕೊಳ್ಳಲು ಹೋರಾಟಕ್ಕಿಳಿದಿದ್ದಾರೆ. ಬಿಜೆಪಿ ಕಾರ್ಯಕರ್ತರು ಮತ್ತು ಕೌನ್ಸಿಲರ್‌ಗಳ ಸರ್ಕಾರಿ ಭೂಮಿ ದೋಚಲು ಹೆಚ್ಚು ನೆರವಾಗುವುದು ಅಧ್ಯಕ್ಷ ಅಶೋಕ್‌ಗೆ ಮಾತ್ರ ಸಾಧ್ಯವಿತ್ತೇ ಹೊರತು ಸಮಿತಿಯಲ್ಲಿ ನಾಮಕಾವಸ್ತೆಗಿದ್ದ ಕಾಂಗ್ರೆಸ್ ಪುಡಾರಿಗಳಿಗಲ್ಲ. ಹಾಗೊಮ್ಮೆ ಕಾಂಗ್ರೆಸ್ ಸದಸ್ಯರೇ ತಪ್ಪು ಮಾಡಿದ್ದರೆ ಅದಕ್ಕೆ ಪ್ರತಿಯಾಗಿ ತಾನೂ ತಪ್ಪೆಸಗುವುದು ಪರಿಹಾರವೆ?



ಅಶೋಕ್ ವಿರುದ್ಧ ಪ್ರತಿಭಟಿಸುತ್ತಿರುವುದು

ಅಶೋಕ್ ಸೋಗಲಾಡಿ ಬುದ್ಧಿಗೆ ಇದಕ್ಕಿಂತ ಬೇಕೆ? ಒಂದು ಎರಡಲ್ಲ ಸಾವಿರಕ್ಕೂ ಅಧಿಕ ಎಕರೆ ಸರ್ಕಾರಿ ಭೂಮಿ ಕಳ್ಳರ ಪಾಲಾಗಿ ದಿನಕ್ರಮೇಣ ಜೆಡಿಎಸ್ ನಾಯಕ ಕುಮಾರಸ್ವಾಮಿ ಕೂಡ ಅಶೋಕ್ ವಿರುದ್ಧ ದನಿಗೂಡಿಸುತ್ತಿದ್ದಾರೆ. ಅಶೋಕ್ ಜೊತೆಗೆ ಬಿಜೆಪಿಯ ಕೌನ್ಸಿಲರ್‌ಗಳಷ್ಟೇ ಅಲ್ಲ; ತಹಶೀಲ್ದಾರ್‌ಗಳಾದ ವೆಂಕಟೇಶಯ್ಯ, ನಾರಾಯಣಸ್ವಾಮಿ, ಗಂಗಾಧರಯ್ಯ, ಚಿ... ಬೆಟ್ಟಯ್ಯ, ಹಾಲಿ ಆನೇಕಲ್‌ನಲ್ಲಿ ತಹಶೀಲ್ದಾರ್ ಆಗಿರು... ಸದಾನಂದಪ್ಪರಂಥ ಖದೀಮ ಕಂದಾಯ ಅಧಿಕಾರಿಗಳಿಗೂ ಶಿಕ್ಷೆಯಾಗಬೇಕು.

ಏಕೆಂದರೆ ಬಿಜೆಪಿ ಧೂರ್ತರು ಕೊಟ್ಟು ನಕಲಿ ದಾಖಲೆಗಳನ್ನು ಪರಿಶೀಲಿಸದೇ ಜಮೀನು ಕೊಳ್ಳೆಗೆ ಸಹಕರಿಸಿದ್ದೇ ಇಂಥ ಹರಾಮಿ ಅಧಿಕಾರಿಗಳು.

-ರಾ. ಸೋಮನಾಥ್

ಎಚ್ಚೆತ್ತ ಕಾಂಗ್ರೆಸ್, ಹುಚ್ಚೆದ್ದ ಖರ್ಗೆ!

ಇಲ್ಲಿಗೆ ತಿಂಗಳ ಹಿಂದೆ ಕೆಪಿಸಿಸಿ ಅಧ್ಯಕ್ಷ ಖರ್ಗೆ ಜೆಡಿಎಸ್-ಬಿಜೆಪಿ ದುರಾಡಳಿತದ ವಿರುದ್ಧ ರಾಜ್ಯವ್ಯಾಪಿ ಜನಾಂದೋಲನ ಮಾಡುತ್ತೇನೆಂದು ಹೂಂಕರಿಸಿದ್ದು ಯಾರಿಗೆ ತಾನೇ ನೆನಪಿಲ್ಲ?

ಓರ್ವ ವಿರೋಧ ಪಕ್ಷದ ನಾಯಕರಾಗಿ ಬಹುಶಃ ಬೇರೆ ಯಾರೇ ಪತ್ರಕರ್ತ ಅಥವಾ ಹೋರಾಟಗಾರನಿಗೂ ಗೊತ್ತಿಲ್ಲದಷ್ಟು ಬಿಜೆಪಿ-ಜೆಡಿಎಸ್ ಹಗರಣಗಳನ್ನು ಖರ್ಗೆ ತನ್ನ ಜನಾಂದೋಲನದಲ್ಲಿ ಬಯಲಿಗೆಳೆಯುತ್ತಾರೆಂದೇ ನಿರೀಕ್ಷಿಸಿದ್ದ ಲಕ್ಷಾಂತರ ಪ್ರಜ್ಞಾವಂತರಿಗೆ ಎಂಥಾ ನಿರಾಶೆಯಾಗಿತ್ತೆಂದರೆ ಖರ್ಗೆ ದೊಡ್ಡ ಹಗರಣಗಳನ್ನು ಬಯಲಿಗೆಳೆಯುವುದಿರಲಿ, ಕನಿಷ್ಠ ಪತ್ರಿಕೆ ಬಯಲಿಗೆಳೆದ ಯಕಶ್ಚಿತ್ ಕರ್ಮಕಾಂಡಗಳನ್ನೂ ತನ್ನ ಭಾಷಣದಲ್ಲಿ ಪ್ರಸ್ತಾಪಿಸಲಿಲ್ಲ. ಅದರಲ್ಲೂ ವೀರಪ್ಪ ಮೊಯ್ಲಿ ಬಿಜೆಪಿಗೆ ಬಿಸಿ ಮುಟ್ಟಿಸಿದ್ದು ಬಿಟ್ಟರೆ ಖರ್ಗೆ-ಧರ್ಮ್ಸಿ, ಆಸ್ಕರ್, ದೇಶಪಾಂಡೆ ಯಾರೂ ಒಂದೇ ಒಂದು ಹಗರಣದ ಕುರಿತು ಬಾಯಿಬಿಟ್ಟವರಲ್ಲ.

ಯಾವತ್ತು ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ವಿರುದ್ಧ ಅಂಬೇಡ್ಕರ್ ಯುವಸೇನೆ, ಕನ್ನಡ ಸೇನೆಯಂಥ ಸಂಘಟನೆಗಳು ಬೀದಿಗಿಳಿದವೋ ಮುಖ ಮುಚ್ಚಿಕೊಳ್ಳಬೇಕಲ್ಲ; ಅದಕ್ಕೆ ಖರ್ಗೆ ಮತ್ತು ಕಾಂಗ್ರೆಸ್ ಎರಡಕ್ಕೂ ಒಟ್ಟೊಟ್ಟಿಗೇ ಜ್ಞಾನೋದಯವಾಗಿದೆ. ಇಡೀ ಉತ್ತರಹಳ್ಳಿ ಭೂಕೊಳ್ಳೆಯನ್ನು ಸಿಬಿಐ ತನಿಖೆಗೆ ವಹಿಸುವಂತೆ ಈಗ ಖರ್ಗೆ ರಾಜ್ಯಪಾಲರಿಗೆ ಪತ್ರ ಬರೆಯುತ್ತಾರಂತೆ. ಹಾಗಂತ ಉಗ್ರಪ್ಪ, ರಮೇಶ್‌ಕುಮಾರ್ ಮತ್ತು ಕಾಗೋಡರನ್ನು ಕರೆದು ಚರ್ಚಿಸಿದ್ದಾರಂತೆ. ಇದು ಕಾಂಗ್ರೆಸ್ ಪಾಳಯದಲ್ಲಿ ಹಬ್ಬಿದ ಸುದ್ದಿ. ಕನಿಷ್ಠ ಈಗಲಾದರೂ ಖರ್ಗೆಗೆ ತನ್ನ ಜವಾಬ್ದಾರಿ ಅರ್ಥವಾದರೆ ಕನ್ನಡಿಗರ ಪಾಲಿಗದು ಸೌಭಾಗ್ಯವಲ್ಲವೇ ಮತ್ತೇನು?

ವಿಕ್ರಮ್ ತಂದೆ ಮಗನ ಮದುವೆಯನ್ನು ಮುರಿಯಲು ಮುಂದಾಗುತ್ತಿದ್ದಂತೆ ಶಿಲ್ಪಾ ಧರ್ಮಪ್ರಕಾಶ್ ಮನೆ ಮುಂದೆ ಧರಣಿ ಕೂರುತ್ತಾಳೆ. ದುರಂತವೆಂದರೆ ವಿಕ್ರಮ್ ಹನಿಮೂನ್ ಮುಗಿದದ್ದೇ ಅಪ್ಪನ ಹಂಗಿಗೆ ಬಿದ್ದು ಶಿಲ್ಪಾಳನ್ನೇ ತೊರೆದು ಫಾರಿನ್ನಿಗೆ ಹೊರಟುಬಿಡುತ್ತಾನೆ. ಆತ ಫಾರಿನ್ನಿಗೆ ಹೋಗಲು ಬೆಂಗಳೂರಿಗೆ ಬರುತ್ತಿರುವಾಗ ದಾರಿ ಮಧ್ಯೆ ಶಿಲ್ಪಾ ಆತನ ಕಾರ್ ತಡೆದು ಮಂಡ್ಯ ಪೊಲೀಸರಿಗೆ ದೂರು ಕೊಡುತ್ತಾಳೆ. ಅಲ್ಲಿ ಆಕೆಯ ನೆರವಿಗೆ ಮಂಡ್ಯದ ಕೆಲ ರಾಜಕಾರಣಿಗಳು ಮತ್ತು ಪತ್ರಕರ್ತರು ನಿಲ್ಲುತ್ತಾರೆ. ಈ ಬಗ್ಗೆ ಪತ್ರಿಕೆಗಳು ಸುದ್ದಿಯನ್ನೂ ಪ್ರಕಟಿಸುತ್ತವೆ. ಏನೇ ಆದರೂ ವಿಕ್ರಮ್ ಮಾತು ಜಗ್ಗದೇ ಉಪಾಯವಾಗಿ ಫಾರಿನ್ನಿಗೆ ಪರಾರಿಯಾಗುತ್ತಾನೆ.

ಇದಿಷ್ಟೂ ಶಿಲ್ಪಾಳ ಮೊದಲ ಮದುವೆಯ ಕತೆ. ಹಾಗೊಮ್ಮೆ ಮುಂಬಯಿ ಪಾತಕಿ ರವಿ ಪೂಜಾರಿಯನ್ನೋ, ಛೋಟಾ ರಾಜನ್‌ನನ್ನೋ ಬಳಸಿ ಯಾರನ್ನಾದರೂ ಹೆದರಿಸಿ ಮದುವೆಯಾಗಬಹುದಾಗಿದ್ದರೆ ಶಿಲ್ಪಾ ಆವತ್ತೇ ರವಿ ಪೂಜಾರಿಯ ಮೂಲಕ ವಿಕ್ರಮ್‌ನನ್ನು ಹೆದರಿಸಿ ಮದುವೆಯಾಗಿರುತ್ತಿದ್ದಳು. ವಿಕ್ರಮ್‌ನ ತಂದೆ ಮಾರ್ವಾಡಿ ಧರ್ಮಪ್ರಕಾಶ್ ಕನಿಷ್ಠ ತನ್ನ ಪ್ರಾಣಕ್ಕೆ ಹೆದರಿಯಾದರೂ ಮಗನ ಮದುವೆಯನ್ನು ಒಪ್ಪುತ್ತಿದ್ದ.

ಆಗಿಲ್ಲದ ರವಿ ಪೂಜಾರಿಯ ಹೆಸರು ಈಗೇಕೆ ಬಂತು? ನಿಜಕ್ಕೂ ಕಾಮಿಡಿ ಗಣೇಶ್ ಪ್ರಾಣಭೀತಿಗೆ ಬಿದ್ದು ಶಿಲ್ಪಾಳ ಜೊತೆ ಮದುವೆಗೆ ಒಪ್ಪುವಷ್ಟು ಹುಂಬನೇ? ಆಸ್ತಿ ಅಥವಾ ಹಣಕಾಸಿಗೆ ಅಂಡರ್‌ವರ್ಲ್ಡ್ ಎಂಟ್ರಿಯಾದಂತೆ ಪ್ರೀತಿ, ಪ್ರೇಮ ಮದುವೆಯಲ್ಲೂ ಎಂಟ್ರಿಯಾಗಬಹುದಾಗಿದ್ದರೆ ಈ ಹೊತ್ತಿಗೆ ಯಾರು ಯಾರನ್ನು ಬೇಕಾದರೂ ಮದುವೆಯಾಗಬಹುದಿತ್ತಲ್ಲವೆ?

ಹಕೀಕತ್ತೇ ಬೇರೆಯಿದೆ. ಗಣೇಶ್-ಶಿಲ್ಪಾ ಪರಿಚಯ



ತನ್ನ ಮೊದಲನೆ ಗಂಡ ವಿಕ್ರಮ್ ಗುಪ್ತಾನೊಂದಿಗೆ ಶಿಲ್ಪಾ

ವಾಗಿದ್ದು 'ಮುಂಗಾರು ಮಳೆ'ಯಲ್ಲಿ. ಆ ಹೊತ್ತಿಗೆ ಆಸ್ಟ್ರೇಲಿಯಾದಲ್ಲಿದ್ದ ಶಿಲ್ಪಾ ಮುಂಗಾರು ಮಳೆಯ ಡೀವೀಡಿ ನೋಡಿದ್ದೇ ಅಲ್ಲಿಂದಲೇ ಗಣೇಶ್‌ಗೆ ಫೋನ್ ಮಾಡಿದ್ದಾಳೆ. ಆನಂತರ ಈಟೀವಿಯ ಆಂಕರ್ ರೀನಾಳ ಜೊತೆ ಮಲ್ಲೇಶ್ವರದ ರೇಣುಕಾಂಬಾ ಪ್ರೀವ್ಯೂ ಥೇಟರಿನಲ್ಲಿ ಮುಂಗಾರು ಮಳೆ ನೋಡಿದ್ದಾಳೆ. ರೂಪದರ್ಶಿ ರೀನಾಳೇ ಆಕೆಯನ್ನು ಗಣೇಶ್‌ಗೆ ಪರಿಚಯಿಸಿದ್ದಾಳೆ. ಹಾಗೆ ಪರಿಚಯವಾದ ಶಿಲ್ಪಾ ತಾನು ಆಸ್ಟ್ರೇಲಿಯಾದಿಂದ ಫೋನ್ ಮಾಡಿದ್ದನ್ನು ನೆನಪಿಸಿದ್ದಾಳೆ. ಮುಂದೆ ಗಣೇಶ್ ಪದೇಪದೇ ಶಿಲ್ಪಾಳ ಜೆ.ಪಿ. ನಗರದ ಮನೆಗೆ ಬರಲಾರಂಭಿಸಿದ್ದಾನೆ. ಆನಂತರದ 'ಹುಡುಗಾಟ'ದ ಶೂಟಿಂಗ್‌ನಲ್ಲೂ ಗಣೇಶ್-ಶಿಲ್ಪಾರನ್ನು ಒಟ್ಟೊಟ್ಟಿಗೆ ನೋಡಿದವರಿದ್ದಾರೆ.

ಮುಂದೆ 'ಚೆಲುವಿನ ಚಿತ್ತಾರ', 'ಕೃಷ್ಣ' ಮತ್ತು ಕೊಬ್ರಿ ಮಂಜು ನಿರ್ಮಾಣದ 'ಅರಮನೆ' ಚಿತ್ರಗಳ ಶೂಟಿಂಗ್‌ನಲ್ಲಿ ಗಣೇಶ್ ಮತ್ತು ಶಿಲ್ಪಾ ಒಟ್ಟೊಟ್ಟಿಗೆ ಕಾಣಿಸಿಕೊಂಡಿದ್ದಾರೆ. "ಒಬ್ಬರಿಗೆ ಒಂದು ಮಾತುಕೊಟ್ಟ ಮೇಲೆ ಅದನ್ನು ಪ್ರಾಣ ಕೊಟ್ಟಾದರೂ ನಡೆಸಿಕೊಡೋದು ನನ್ನ ಸ್ವಭಾವ. ಅದರಂತೆ ಶಿಲ್ಪಾಗೆ ಮಾತುಕೊಟ್ಟಿದ್ದೆ. ಆಕೆ ತನ್ನ ನಿಜವಾದ ಕತೆ ಹೇಳಿಕೊಂಡು ನನ್ನಂಥ ನೊಂದವಳಿಗೆ ಲೈಫ್ ಕೊಡ್ತೀರಾ? ಎಂದು ಓಪನ್ನಾಗೇ ಕೇಳಿದ್ದಳು. ಹಾಗೇ ಬೋಲ್ಡಾಗಿ ಯಾವುದನ್ನೂ ಮುಚ್ಚಿಡದೇ ಧೈರ್ಯವಾಗಿ ಕೇಳೋ ಆಕೆಯ ಗುಣ ನನ್ನನ್ನು ತುಂಬಾ ಇಂಪ್ರೆಸ್ ಮಾಡಿತ್ತು. ಎಲ್ಲರೂ ತಂತಮ್ಮ ಅನುಕೂಲಕ್ಕೆ ತಕ್ಕಂತೆ ಮದುವೆಯಾಗ್ತಾರಲ್ಲ; ಅದರಲ್ಲಿ ಏನಾದ್ರೂ ವಿಶೇಷವುಂಟಾ?" ಹಾಗಂತ ತನ್ನ ಮದುವೆ ಕುರಿತಂತೆ ಗಣೇಶ್ ಡೈಲಾಗ್ ಹೊಡೆಯುತ್ತಾನೆ.

ಬಹುಶಃ ಶಿಲ್ಪಾಳ ಆರ್ಥಿಕ ಹಿನ್ನೆಲೆಯೂ ಗಣೇಶ್ ನಿರ್ಧಾರಕ್ಕೆ ಕಾರಣವಿರಬಹುದು. ಫೆಬ್ರವರಿ 18 ರಂದು ಬಾರಕೂರಿನ ಸಂಕಮ್ಮ ತಾಯಿ ದೇವಸ್ಥಾನದಲ್ಲಿ ಮದುವೆ ನಿಶ್ಚಯವಾಗಿತ್ತು, ಆದರೆ ಫೆಬ್ರವರಿ 10 ರ ಹೊತ್ತಿಗೆ ಇಂಟರ್‌ನೆಟ್ ಮತ್ತು ಟೀವಿಗಳಲ್ಲಿ ಮದುವೆ ಸುದ್ದಿಯಾಗುತ್ತ, ಇದಾಗಿದ್ದೇ ತಡ ಗಣೇಶ್‌ಗೆ ಅಭಿಮಾನಿಗಳಿಂದ ಫೋನ್ ಹಾವಳಿ ಶುರುವಾಗಿದೆ. ಅದರಲ್ಲೂ ಚಿಕ್ಕಮಗಳೂರಿನ ಹುಡುಗಿಯೊಬ್ಬಳು ತಾನು ಮದುವೆ ನಡೆಯುವಲ್ಲೇ ಬಂದು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಫೋನ್ ಮಾಡಿದ ಮೇಲೆ ಗಣೇಶ್ ಗಾಬರಿಗೆ ಬಿದ್ದಿದ್ದಾನೆ. ಫೆಬ್ರವರಿ ಹನ್ನೊಂದರ ನಿಶ್ಚಿತಾರ್ಥದಂದೇ ಅವಸರದ ಮದುವೆ ಮಾಡಿಕೊಂಡಿದ್ದಾನೆ.

ಡಾನ್ ರವಿಪೂಜಾರಿ ಹೆದರಿಸಿದಾಕ್ಷಣ ಕಾಮಿಡಿ ಗಣೇಶ್ ಮದುವೆಗೆ ಒಪ್ಪುವುದಾಗಿದ್ದರೆ ಮತ್ತೊಬ್ಬಾಕೆಗೆ ಮತ್ತೊಬ್ಬ ಭೂಗತ ಪಾತಕಿ ಕೈಯಲ್ಲಿ ಫೋನ್ ಮಾಡಿಸುವುದು ಎಷ್ಟು ಹೊತ್ತು? ಇನ್ನಾರೋ ಒಬ್ಬಳು ಬೇಕಿದ್ದರೆ ದಾವೂದ್ ಕೈಯಲ್ಲಿ ಫೋನ್ ಮಾಡಿಸುತ್ತಾಳೆ. ಯಾರೇ ಧಮಕಿ ಕೊಟ್ಟರೂ ಸಂಸಾರ ಸಾಗಿಸುವವನು ಮಾತ್ರ ಕಾಮಿಡಿ ಗಣೇಶನೇ ತಾನೆ?

ಇದು ಕಾಮನ್ ಸೆನ್ಸ್. ಎನಿ ಹೌ ಗಣೇಶ್-ಶಿಲ್ಪಾ ದಾಂಪತ್ಯ ಚಿರಾಯುವಾಗಲಿ. ಅವರಿಗೆ ಒಳಿತಾಗಲಿ.

-ರಾ. ಸೋಮನಾಥ್

ಹಿಂದೂ ಧರ್ಮವೆಂದರೆ ಎತ್ತುವಳಿ ಧರ್ಮವೆ!

ಸರ್ವಧರ್ಮ, ಜಾತಿಯವರನ್ನು ಸೇರಿಸಿ ಜರುಗಿಸುತ್ತಿದ್ದ ತರಳಬಾಳು ಹುಣ್ಣಿಮೆಯ ಮಹೋತ್ಸವ ಈ ಬಾರಿ ಬಿಜೆಪಿಯವರ ಜಾತ್ರೆಯಾಗಿಹೋಯ್ತಂತಲ್ಲಾ, ತರಳಬಾಳು ಹುಣ್ಣಿಮೆಯ ಉದ್ಘಾಟನೆ ನೋಡಿದ ಶರಣ ಸಮೂಹ, "ನಮ್ಮ ಜನಾಂಗದ ಜಗದ್ಗುರುಗಳು ಆಯೋಜಿಸಿರುವ ಈ ಅಪರೂಪದ ಬಿಜೆಪಿ ಸಭೆಯಿಂದ ನಾವು ಯಾರಿಗೆ ಓಟು ಮಾಡಬೇಕೆಂಬುದನ್ನು ಸೂಚ್ಯವಾಗಿ ಸೂಚಿಸಿದಂತಿದೆ. ಸ್ವಾಮಿಗಳು ಇಂತಹ ಕಾರ್ಯಕ್ರಮ ಆಯೋಜಿಸಿರುವ ಕಾರಣಕ್ಕೆ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಒಬ್ಬನೇ ಒಬ್ಬ ಮುಸ್ಲಿಮರ ಹೆಸರೂ ಇಲ್ಲ, ಆ ವಿಷಯದಲ್ಲಿ ನಮ್ಮ ಶಿವಮೂರ್ತಿಗಳು ಥೇಟ್ ಎಡೂರಪ್ಪನಂತೆಯೇ ಆಲೋಚಿಸಿದ್ದಾರೆ" ಎಂದು ಮೆಚ್ಚುಗೆ ಸೂಚಿಸಿದರಂತಲ್ಲಾ, ಅಂತೂ ಕಾಲಕ್ಕೆತಕ್ಕಂತೆ ಕಾವಿ ಬಳಸುವ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಈ ಬಾರಿಯ ತರಳಬಾಳು ಹುಣ್ಣಿಮೆಗೆ ಅಡ್ವಾಣಿ ಕರೆಸಿ ಉದ್ಘಾಟಿಸಿ ಅಧ್ವಾನ ಮಾಡಿಕೊಂಡರೆಂದು ಕಾಂಗ್ರೆ ಕಾಗೆಗಳು ಕೂಗುತ್ತಿವೆಯಂತಲ್ಲಾ, ಥೂತ್ತೇರಿ!

* * * * * *

ನಮ್ಮ ಪೇಜಾವರ ಗುರುವರ್ಯರು ತಮ್ಮ ಬದುಕಿನ ದೀರ್ಘ ಅವಧಿಯಲ್ಲಿ ಸಾಹಸ ಮಾಡಿ ಕಂಡುಹಿಡಿದ ಸಂಶೋಧನೆಯೊಂದನ್ನು ಕಡೆಗೂ ಹೊರಗೆಡವಿದ್ದಾರಂತಲ್ಲಾ, "ಹುಟ್ಟುತ್ತಲೇ ಯಾರೂ ನಕ್ಸಲರಾಗುವುದಿಲ್ಲ, ಬೆಳೆಯುತ್ತ ಕ್ರಮೇಣ ನಕ್ಸಲರಾಗಿಬಿಡುತ್ತಾರೆ" ಎಂದು ತಮ್ಮ ಅಪೂರ್ವ ಸಂಶೋಧನೆಯನ್ನು ಹೊರಗೆಡವಿರುವ ಶ್ರೀ ವಿಶ್ವೇಶತೀರ್ಥರು ಈಗ ನಕ್ಸಲರಾಗಿಬಿಟ್ಟಿರುವವರನ್ನು ಭೇಟಿಯಾಗಿ ಅವರನ್ನು ಬದಲಾಯಿಸಲಿದ್ದಾರಂತಲ್ಲಾ, ನಕ್ಸಲರನ್ನು ಬದಲಾಯಿಸುವುದು ಹೇಗೆಂದು ಕೇಳಿದರೆ ಪೇಜಾವರ ಶ್ರೀಗಳು "ಸೊಳ್ಳೆ ಹೊಡೆದಂತೆ ಚಪ್ಪಾಳೆ ತಟ್ಟಿ ನಕ್ಸಲರನ್ನು ಭೇಟಿ ಆಗಲು ಇದು ಬಹು ಸುಲಭದ ಮಾರ್ಗ. ಅವರ ಕೈಯಲ್ಲಿನ ಆಯುಧವನ್ನು ತೆಗೆದುಕೊಂಡು 'ನೋಡಪ್ಪ ಮಗು, ಈ ಬಂದೂಕು ನಿನ್ನ ಕೈಯಲ್ಲಿ ಇರುವವರೆಗೆ ಬೇರೆಯವರನ್ನು ಕೊಲ್ಲಬೇಕೆಂಬ ಮನಸ್ಸು ಬರ್ತದೆ. ಬೇರೆಯವರನ್ನು ಕೊಲ್ಲುವ ಹಕ್ಕು ನಿನಗಿಲ್ಲ, ಹಾಗೆಯೇ ನಿನ್ನನ್ನು ಕೊಲ್ಲುವ ಹಕ್ಕು ಯಾರಿಗೂ ಇಲ್ಲ. ಈ ಬಂದೂಕಿನಿಂದ ಬೇರೆಯವರಿಗೆ ಹೊಡೆದರೆ ರಕ್ತ ಬರುವುದುಂಟು. ಆ ರಕ್ತವನ್ನು ನೋಡಲಾಗುವುದಿಲ್ಲ, ಆದ್ದರಿಂದ ಇದನ್ನು ಬಿಸಾಡಿ, ನೀನು ಹುಟ್ಟಿದಾಗ ಹೇಗಿದ್ದೆ, ಅದೇ ಮನಸ್ಥಿತಿಯಲ್ಲಿದ್ದ ಹಾಗಾಗಿ ಬಿಡು' ಎಂದು ನಕ್ಸಲರ ಮನಸ್ಸನ್ನೇ ಬದಲಿಸಿಬಿಡ್ತೇನೆ" ಎಂದರಂತಲ್ಲಾ, ಥೂತ್ತೇರಿ!!!

* * * * * *

ನಮ್ಮ ನಂದಿ ಮಾರ್ಕ್ ಪತ್ರಿಕೆಯ ಸಂಬಂಧಿ ಬಂಗಾರಪ್ಪನವರು ತಮ್ಮ ಮೊಮ್ಮಗನಿಗೆ ಮುತ್ತು ಕೊಟ್ಟ ಸಂಗತಿಯನ್ನು ಫೋಟೋ ಸಮೇತ ಪ್ರಕಟಿಸಿ, ಇಡೀ ನಾಡಿನ ಜನತೆ 'ಬಂ'ರಲ್ಲೂ ಮೊಮ್ಮಕ್ಕಳನ್ನು ಮುದ್ದು ಮಾಡುವ ಮಂಗಾಟವಿದೆ ಎಂಬ ಚರ್ಚೆಗೆ ಗ್ರಾಸವೊದಗಿಸಿದೆಯಂತಲ್ಲಾ, ಬಲಬದಿಯಲ್ಲಿದ್ದ ಒಬ್ಬ ಮಗನನ್ನು ಎದುರು ನಿಲ್ಲಿಸಿಕೊಂಡು ವೈರಿಯನ್ನಾಗಿಸಿ, ಇದ್ದ ಇಬ್ಬರು ಶಾಸಕರನ್ನು ಬೇರೆ ಪಾರ್ಟಿಗೆ ಓಡಿಸಿ ಎಂದಿನಂತೆ ಏಕಾಂಗಿ ವೀರನಾಗಿರುವ 'ಬಂ' ಮೊಮ್ಮಕ್ಕಳನ್ನು ಮುದ್ದಾಡಿಕೊಂಡಿರುವ ಕಾಲ ಮೇ ತಿಂಗಳು ಕಳೆದ ಕೂಡಲೇ ಬರಲಿದೆಯೆಂದು ಹರತಾಳು ಹಾಲಪ್ಪ ಆಡಿಕೊಳ್ಳುತ್ತಿದ್ದಾನಂತಲ್ಲಾ, ಆದರೆ 'ಬಂ' "ಚುನಾವಣೆ ಮುಂದೆಹೋದರೆ ಅದರ ಲಾಭವಾಗುವುದು ನಮ್ಮ ಸಮಾಜವಾದಿ ಪಾರ್ಟಿಗೆ.



ಅಷ್ಟು ದೀರ್ಘ ದಿನಗಳಲ್ಲಿ ನಾವು ನಮ್ಮ ವೈರಿಗಳನ್ನು ಸೋಲಿಸಿ ನಮ್ಮ ಠೇವಣಿಗಳನ್ನು ಉಳಿಸಿಕೊಳ್ಳುವ ತಯಾರಿ ಮಾಡಿಕೊಳ್ಳಬಹುದು. ಅದಕ್ಕಿಂತಲೂ ಮುಖ್ಯವಾಗಿ ನಾನು ನಿಲ್ಲುವ ಕ್ಷೇತ್ರ ಯಾವುದು ಎಂದು ಹುಡುಕಿಕೊಳ್ಳಬೇಕಾಗಿದೆ" ಎಂದರಂತಲ್ಲಾ, ಇದೇನಾದರೂ ಆಗಲಿ ಎಲ್ಲಾ ಅಜ್ಜಂದಿರು ತಮ್ಮ ಮೊಮ್ಮಕ್ಕಳನ್ನು ಮುದ್ದಾಡಬಲ್ಲರು ಎಂಬುದನ್ನು ಗಂಡಿಮಠಾಕೀನ ಸಂದಿಗಳಿಗೆ ಹೇಳಬೇಕಾಗಿದೆಯಲ್ಲಾ, ಥೂತ್ತೇರಿ!!

* * * * * *

ಸುಸ್ಥಾನದಂತಿದ್ದ ಶಾಸಕರ ಭವನಕ್ಕೆ ಬಾಂಬ್ ಮಡಗಿ ಅಲ್ಲಿಗೆ ಸಾರ್ವಜನಿಕರಾರೂ ಹೋಗದಂತೆ ಮಾಡಿದ ಗಿರೀಶ್ ಮಟ್ಟಣ್ಣನೆಂಬ ಕ್ರಾಂತಿಕಾರಿ ಕಡೆಗೂ ಮದುವೆಯಾಗಿಬಿಟ್ಟನಂತಲ್ಲಾ. ಈ ನೂತನ ವಧುವರರನ್ನು

ಥೂತ್ತೇರಿ

ಯಾಹೂ

ಆಶೀರ್ವದಿಸಲು ಹೋಗಿದ್ದ ಎಡೂರಪ್ಪ ಮತ್ತು ಶೋಭಾ ಕರಂದ್ಲಾಜೆ, ನೂತನ ವಧೂವರರನ್ನು ನೋಡಿ ಮಾಜಿ ವಧೂವರರು ಸಂಭ್ರಮದಲ್ಲಿ ಓಡಾಡಿದರಂತಲ್ಲಾ.

ಇದೆಲ್ಲಕ್ಕಿಂತ ಮುಖ್ಯವಾಗಿ, ಗಣೇಶ್ ಮದುವೆಯಾಗಿ ಬಿಟ್ಟ ಸುದ್ದಿ ಮಾಧ್ಯಮದ ಕೆಲ ಮೂರ್ಖರಿಗೆ ರಸಕವಳದ ಸುದ್ದಿಯಾಗಿ, ಗಣೇಶ್ ಅರ್ಧ ರಾತ್ರಿಯಲ್ಲಿ ಮದುವೆಯಾಗಲು ಕಾರಣವೇನು? ಹುಡುಗಿ ದುಬೈನಲ್ಲಿದ್ದಳೆಂದರೆ ಭೂಗತ ಲೋಕದ ಒತ್ತಡವಿರಬೇಕು? ಮೊದಲ ಗಂಡನಿಗೆ ಇನ್ನು ವಿಚ್ಛೇದನ ಕೊಡದೆ ಎರಡನೇ ಮದುವೆಯನ್ನು ಹೇಗೆ ಮಾಡಿಕೊಂಡಳು? ಅದಕ್ಕೆ ಗಣೇಶ್ ಒಪ್ಪಿದ್ದು ಹೇಗೆ? ಅವರ ಅಪ್ಪ ಅವ್ವ ಒಪ್ಪಬಾರದಿತ್ತು, ಮದುವೆ ಸಮಯದಲ್ಲಿ ಶಿಲ್ಪ ನಗುತ್ತಿರಲಿಲ್ಲ, ಗಣೇಶ್ ಆಗಾಗ್ಗೆ ಬೆವರು ಒರೆಸಿಕೊಂಡು ತಲೆ ಕೆರೆದುಕೊಳ್ಳುತ್ತಿದ್ದ, ಇದರಲ್ಲಿ ಏನೊ ಅಡಗಿದೆ ಎಂದೂ ಬರೋಬ್ಬರಿ ಮೂರ್ನಾಲ್ಕು ದಿನ ಅನ್ನ ನೀರು ಬಿಟ್ಟು ಆಡಿಕೊಂಡವಂತಲ್ಲಾ, ಇದನ್ನು ನೋಡಿದ ಕರ್ನಾಟಕದ ಜನತೆ ಬಿದ್ದುಬಿದ್ದು ನಕ್ಕವಂತಲ್ಲಾ, ಥೂತ್ತೇರಿ!!!

* * * * * *

"ಹಿಂದುತ್ವಕ್ಕೂ, ಬಿಜೆಪಿಗೂ ಯಾವ ಸಂಬಂಧವೂ ಇಲ್ಲ, ಶತಶತಮಾನಗಳ ಕಾಲ ದಕ್ಷಿಣೆಗಾಗಿ ಕೈಯೊಡ್ಡಿದ ಪುರೋಹಿತರು ಬಿಜೆಪಿ ಸ್ಥಾಪಿಸಿಕೊಂಡು ಇಲ್ಲೂ ಕೂಡ ಆರೆಸ್ಸೆಸ್, ವಿಶ್ವಹಿಂದು, ರಾಮಸೇನೆ, ಭಜರಂಗವೆಂಬ ಸುಲಿಗೆ ಸಂಘಟನೆಗಳನ್ನು ಮಾಡಿಕೊಂಡು ಅವೆಲ್ಲಾ ಎತ್ತುವಳಿಯಲ್ಲಿ ನಿರತವಾಗಿಯೇ ಹೊರತು ಈ ಸಂಘಟನೆಗಳಿಗೂ ಹಿಂದೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ."

ಇಂತಹ ಸ್ಫೋಟಕ ಸಂಗತಿಯನ್ನು ಯಾರು, ಯಾರಿಗೆ, ಯಾವಾಗ ಹೇಳಿದರು ಗೊತ್ತೆ? ಅರವತ್ತು ನಾಲ್ಕು ವಸಂತಗಳನ್ನು ತುಂಬಿಸಿಕೊಂಡು ಅರವತ್ತೈದಕ್ಕೂ ಟ್ರೈ ಮಾಡುತ್ತಿರುವ ನಮ್ಮ ಬಾಲಗಂಗಾಧರನಾಥ ಸ್ವಾಮಿಗಳು ಹೀಗೆ ಗುಡುಗಿದ್ದಾರಂತಲ್ಲಾ, ಈ ಮಾತಿನಿಂದ ಏನೊಂದೂ ಬೇಸರವಾಗದ ಸದರಿ ಹಿಂದೂ ಸಂಘಟನೆಗಳು, "ಆದಿ ಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮಿಗಳು ಗೋಳವರ್‌ಕರ್ ತರಹ ಆರೆಸ್ಸೆಸ್ ಬೈಟಕ್‌ನಲ್ಲಿ ಬಂದು ಆಸೀನರಾಗುತ್ತಿದ್ದರು. ಅಂತಹ ಹಿರಿಯರು ನಮ್ಮನ್ನು ಟೀಕಿಸಿರುವುದು ಸಕಾಲಿಕವಾಗಿದೆ. ಆದ್ದರಿಂದ ನಮ್ಮ ಸಂಘ ಪರಿವಾರವು ಇನ್ನು ಮುಂದೆ ಬರೀ ಎತ್ತುವಳಿಯನ್ನೇ ಕಾಯಕ ಮಾಡಿಕೊಳ್ಳದೆ ಅದನ್ನು ವಿನಿಯೋಗಿಸುವುದರ ಬಗ್ಗೆಯೂ ಯೋಚಿಸುತ್ತೇವೆ" ಎಂದಿವೆಯಂತಲ್ಲಾ, ಥೂತ್ತೇರಿ!!

* * * * * *

ಆದಿಚುಂಚನಗಿರಿಯ ಗುರುವರ್ಯರು, ಚಿದ್ದಿಗಳು ಮುಟ್ಟಿನೋಡಿಕೊಳ್ಳುವಂತೆ ಮಾತಿನ ಚಾಟಿ ಬೀಸುತ್ತಿದ್ದಾಗ ಪಕ್ಕದಲ್ಲೇ ಕುಮಾರಸ್ವಾಮಿಗಳೂ ಆಸೀನರಾಗಿದ್ದು, ಜಗದ್ಗುರುಗಳ ಟೀಕೆಯಿಂದ ಶಾನೆ ಖುಷಿಯಾಗಿ ಎದ್ದುಹೋದರಂತಲ್ಲಾ, ಇದನ್ನು ಕಂಡ ಕನ್ನಡದ ಪ್ರಜ್ಞಾವಂತ ಜನ, "ಈ ಜಗದ್ಗುರು ಜಗತ್ತಿನ ಮಹಿಮೆಯನ್ನು ಏನೆಂದು ಕೊಂಡಾಡುವುದು? ಇತ್ತ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಬಿಜೆಪಿ ದಳಪತಿಗಳನ್ನು ಕರೆಸಿ, ತರಳಬಾಳು ಹುಣ್ಣಿಮೆ ಮಾಡಿದರೆ, ಅತ್ತ ಬಾಲಗಂಗಾಧರಸ್ವಾಮಿಗಳು ಕುಮಾರಸ್ವಾಮಿ ಜತೆ ಕೂರಿಸಿಕೊಂಡು ಹಿಂದೂ ಧರ್ಮವನ್ನು ಹಿಗ್ಗಾಮುಗ್ಗಾ ಜಗ್ಗಿ ಬಿಸಾಡುತ್ತಿದ್ದಾರೆ. ಇನ್ನೊಂದೆಡೆ ಮುರುಘರಾಜೇಂದ್ರ ಮಠದ ಶರಣರು ರಿಪೇರಿ ಸಾಧ್ಯವಿಲ್ಲದ ಸ್ವಾಮಿಗಳ ಹಿಂಡು ನೋಡಿ ಭಾವುಕರಾಗುತ್ತಿದ್ದಾರೆ. ಇತ್ತ ಪೇಜಾವರ ಶ್ರೀಗಳು ನಕ್ಸಲರನ್ನು ಹಿಡಿದುಕೊಂಡು ಹೋಗಿ ಕೃಷ್ಣಮಠದಲ್ಲಿನ ವಸತಿ ಕಾಯುವಕ್ಕೆ ಹಚ್ಚುತ್ತೇನೆ ಎನ್ನುತ್ತಿದ್ದಾರೆ. ಮನರಂಜನೆ ಅಂದರೆ ಇದೇ ಅಲ್ಲವೆ" ಎಂದು ಮಜಾ ತೆಗೆದುಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ!!!

ಯಾದವ ಮಠದಲ್ಲಿ ಪೇಜಾವರ ದಬ್ಬಾಳಿಕೆ

ಉಡುಪಿಯ ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಹೆಸರಿಗೆ ಮಾತ್ರ ಬ್ರಾಹ್ಮಣರ ಧರ್ಮಗುರುವಾದರೂ ರಾಜ್ಯದ ಸಕಲೆಂಟು ಜಾತಿ ಜನಾಂಗದವರ ವ್ಯವಹಾರದಲ್ಲಿ ಮೂಗು ತೂರಿಸುವ ಹೀನ ಚಾಳಿ ಮಾತ್ರ ಬಿಡುತ್ತಿಲ್ಲ.

ಕಳೆದ ವಾರ ಚಿತ್ರದುರ್ಗದಲ್ಲಿ ನಡೆದ ಯಾದವ ಜನಾಂಗದ ಮಠದ ಶ್ರೀ ಬಸವ ಯಾದವಾನಂದ ಸ್ವಾಮಿಗಳ ಪಟ್ಟಾಭಿಷೇಕ ಸಮಾರಂಭ ಇದಕ್ಕೆ ಮತ್ತೊಮ್ಮೆ ಸಾಕ್ಷಿಯಾಗಿದೆ.

ವಾಸ್ತವದಲ್ಲಿ ಈ ಯಾದವರಿಗೆ ಅಂದರೆ ಗೊಲ್ಲ ಜನಾಂಗದವರಿಗೂ ಪುರೋಹಿತಶಾಹಿ ಬ್ರಾಹ್ಮಣರಿಗೂ ಯಾವುದೇ ಸಂಬಂಧವಿಲ್ಲ. ಅವರ ರೀತಿ ರಿವಾಜುಗಳು, ನಂಬಿಕೆ-ಆಚರಣೆಗಳು ಕೊನೆಗೆ ಸಾಮಾಜಿಕ ಸ್ಥಾನ ಮಾನಗಳೆಲ್ಲವೂ ಬೇರೆಬೇರೆಯಾಗಿವೆ. ಹೀಗಿದ್ದಾಗಲೂ ಮೊನ್ನೆ ಫೆಬ್ರವರಿ 12ರಂದು ದುರ್ಗದಲ್ಲಿ ನಡೆದ ಗೊಲ್ಲ ಮಠಾಧೀಶರ ಪಟ್ಟಾಭಿಷೇಕ ಸಮಾರಂಭಕ್ಕೆ ಹಿಂದಿನ ಬಾಗಿಲಿಂದ ತೂರಿ ನುಗ್ಗಿ ಬಂದ ಪೇಜಾವರ ಇಡೀ ಕಾರ್ಯಕ್ರಮವನ್ನು ವೈದಿಕಮಯಗೊಳಿಸಿಬಿಟ್ಟರು. ಇದಿಷ್ಟೇ ಅಲ್ಲದೆ ಅದರ ಹಿಂದಿನ ದಿನವೇ ಕೆಲ ಪುರೋಹಿತಶಾಹಿಗಳು ಮಠಕ್ಕೆ ನುಗ್ಗಿ ಯಾವನಿಗೂ ಬೇಡವಾಗಿದ್ದ ಹೋಮ, ಹವನಗಳನ್ನೆಲ್ಲಾ ನಡೆಸಿದ್ದರು. ಇದರಿಂದ ಅಸಮಾಧಾನ ಪಟ್ಟುಕೊಂಡ ಮುರುಘಾ ಮಠದ ಶಿವಮೂರ್ತಿ ಶರಣರು ಬಹಿರಂಗ ಸಭೆಯಲ್ಲೇ 'ವೈದಿಕರ ದಬ್ಬಾಳಿಕೆ' ಖಂಡಿಸಿ ಮಾತಾಡಿಬಿಟ್ಟರು.

ಆದರೇನು ಈ ಪೇಜಾವರ ಮತ್ತವರ ಪುರೋಹಿತ ಶಾಹಿ ಪಟಾಲಂಗಳ ಹಾಜರಾತಿಯಿಂದ ಅವೈದಿಕ, ಶೂದ್ರ ಪರಂಪರೆಯ ಮಠವೊಂದು ಮಲಿನವಾಗುವುದನ್ನು ಯಾರಿಂದಲೂ ತಪ್ಪಿಸಲಾಗಲಿಲ್ಲ.

ಈ ಹಿಂದೆ 1991 ರಲ್ಲಿ ಕುರುಬ ಜನಾಂಗದವರು ಕಾಗಿನೆಲೆಯಲ್ಲಿ ಮಠ ಸ್ಥಾಪಿಸಿದಾಗಲೂ ಇದೇ ಪೇಜಾವರ ಅಲ್ಲೂ ತಲೆ ಹಾಕಿ ಸರಳ ಶುದ್ಧವಾಗಿದ್ದ 'ಬೀರೇಂದ್ರ ಕೇಶವ' ಸ್ವಾಮಿಗಳ ಹೆಸರನ್ನು 'ಬೀರೇಂದ್ರ ಕೇಶವ ತಾರಕಾನಂದ ಪುರಿಸ್ವಾಮಿ' ಎಂದು ಸಂಸ್ಕೃತಮಯಗೊಳಿಸಿ ತಮ್ಮ ಚಿಲ್ಲಿ ಬುದ್ಧಿ ತೋರಿಸಿದ್ದರು. ಈ ಪೇಜಾವರರ ಒತ್ತುವರಿ ಕೆಲಸ ಬರೀ ಶೂದ್ರ ಮಠಗಳಿಗೂ ಸೀಮಿತವಾಗಿಲ್ಲ. ಮಂತ್ರಾಲಯದ ಸ್ವಾಮಿಗಳ ಆಯ್ಕೆ, ಉಡುಪಿ ಅಷ್ಟಮಠಗಳ ವ್ಯವಹಾರಗಳಲ್ಲೂ ನಿತ್ಯ ತಲೆ ಹಾಕುತ್ತಾ ಪುಢಾರಿ ಧರ್ಮಗುರು ಎನಿಸಿಕೊಳ್ಳುವತ್ತ ಸಾಗುತ್ತಿದ್ದಾರೆ.



ಪೇಜಾವರ ಪುಂಡು ನೋಟ

ಬೇಡದ ಅತಿಥಿ ಪೇಜಾವರ

ರಾಜ್ಯದ ಅತೀ ದೊಡ್ಡ ಜನಸಮುದಾಯಗಳಲ್ಲಿ ಒಂದಾದ ಗೊಲ್ಲ ಜನಾಂಗಕ್ಕೆ ಬಹಳ ಹಿಂದೆಯೇ ಒಂದು ಮಠ ಇತ್ತು. 1984ರಲ್ಲಿಯೇ ಬೆಂಗಳೂರಿನಲ್ಲಿ ರಮಾನಂದ ಸ್ವಾಮಿಗಳೆಂಬುವರನ್ನು ಈ ಜನಾಂಗದ ಮಠಾಧೀಶರೆಂದು ಹೇಳಿಕೊಂಡು ಬರಲಾಗಿತ್ತು. ಆದರೆ ಆಗಿನ್ನೂ ಸಾಮಾಜಿಕ- ರಾಜಕೀಯವಾಗಿ ಅಷ್ಟು ಜಾಗೃತವಾಗಿರದಿದ್ದ ಗೊಲ್ಲರು ಒಕ್ಕಲಿಗ-ಲಿಂಗಾಯತರಂತೆ ಒಂದು ಬಲಿಷ್ಠ ಮಠ ಕಟ್ಟಿಕೊಳ್ಳಲು ಆಗಿರಲಿಲ್ಲ. ಜೊತೆಗೆ ಭೂಗಳ್ಳ ವರ್ತೂರು ಕೃಷ್ಣಪ್ಪನ ಚಿತಾವಣೆಯಿಂದಾಗಿ ರಮಾನಂದ ಸ್ವಾಮಿಗಳೂ ಬೆಂಗಳೂರು ತ್ಯಜಿಸಿ ಮಂಗಳೂರಿಗೆ ಹೋಗಿ ನೆಲೆಸಿಬಿಟ್ಟರು. ಹೀಗೆ ಯಾದವರ ಪಾಲಿಗೆ ಸ್ವಾಮಿ ಹಾಗೂ ಮಠ ಇದ್ದೂ ಇಲ್ಲದಂತಾಗಿತ್ತು. ಈ ನಡುವೆ ಈಗ್ಗೆ ನಾಲ್ಕಾರು ವರ್ಷಗಳ ಹಿಂದೆಯೇ ಮುರುಘಾ ಮಠದ ಶಿವಮೂರ್ತಿ ಶರಣರು ಚಿತ್ರದುರ್ಗದ ಹೊರವಲಯದಲ್ಲಿ ಯಾದವ ಜನಾಂಗದವರು ಮಠ ಕಟ್ಟಿಕೊಳ್ಳಲೆಂದೇ ಐದೆಕರೆ ಜಮೀನು ನೀಡಿ ಬಸವ ಯಾದವಾನಂದ ಸ್ವಾಮಿಯನ್ನು ಬೆಳೆಸುತ್ತಾ ಬಂದರು. ಹೊಳಲ್ಕೆರೆ ರಸ್ತೆಯಲ್ಲಿನ್ನ ಈ ಜಮೀನಿನ ಈಗಿನ ಬೆಲೆಯೇ ಮೂರು ಕೋಟಿ ರೂಪಾಯಿನಷ್ಟಿದೆ. ಭರಮಸಾಗರದ ಚೌಲಿಹಳ್ಳಿಯ ಕರಿಯಣ್ಣನೆಂಬುವರ ಮಗ ಹಿಮಂತಸ್ವಾಮಿ ಮೊದಲು ಆತ್ಮಾನಂದ ಆಶ್ರಮದ ಗೋವಿಂದ ಸ್ವಾಮಿಗಳ ಆಶ್ರಮದಲ್ಲಿ

ಕಾರ್ಯಕ್ರಮದ ಹಿಂದಿನ ರಾತ್ರಿ ಕೆಲವು ಜನಿವಾರಧಾರಿಗಳು ಯಾದವ ಮಠಕ್ಕೆ ಬಂದು ಹೋಮ-ಹವನ ಶುರು ಮಾಡಿಕೊಂಡರು. ಬಸವ ಯಾದವ ಸ್ವಾಮಿಯನ್ನು ಹಿಡಿದುಕೊಂಡು ಒಬ್ಬ ನಾಮ ಹಾಕಿದರೆ ಮತ್ತೊಬ್ಬ ಅದನ್ನು ಅಳಿಸಿ ಮುದ್ರೆ ಬಳಿದ. ಇನ್ನೊಬ್ಬ ತಲೆಗೆ ವಿಚಿತ್ರ ರೀತಿಯ ಪೇಟಾ ಸುತ್ತಿಬಿಟ್ಟ. ಇವ್ಯಾವು ಗೊಲ್ಲರ ಸಂಸ್ಕೃತಿಯಲ್ಲ ಎಂದು ಉಗಿದು ಬುದ್ಧಿ ಹೇಳುವ ಧೈರ್ಯ ಅಲ್ಲಿದ್ದವರಿಗೆ ಬರಲೇ ಇಲ್ಲ.

ಬೆಳೆಯುತ್ತಿದ್ದವರು. ಅವರನ್ನೇ ಶರಣರು ಕರೆತಂದು ಬಸವ ಯಾದವಾನಂದ ಸ್ವಾಮಿಗಳೆಂದು ನಾಮಕರಣ ಮಾಡಿ ಯಾದವ ಮಠ ಸ್ಥಾಪನೆಗೆ ಅಸ್ತಿಭಾರ ಹಾಕಿ ಕೊಟ್ಟಿದ್ದರು. ಹಾಗೆ ಮೊನ್ನೆ ನಡೆದದ್ದೇ ಈ ಯಾದವ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ. ಇದರಲ್ಲಿ ಪೇಜಾವರರನಂಥ ಬ್ರಾಹ್ಮಣರ ಕೊಡುಗೆ ಏನೂ ಇರಲಿಲ್ಲ.

ಬಿಳಿದಾಳೆ ಈಶ

ಹಾಗಾಗೇ ಅವರ ಪಾತ್ರವೂ ಇರುವುದಿಲ್ಲವೆಂದು ಜನ ಭಾವಿಸಿದ್ದರು. ಆದರೆ ರಾತ್ರೋರಾತ್ರಿ ದೃಶ್ಯಗಳೇ ಬದಲಾಗಿ ಹೋದವು.

ಕಾರ್ಯಕ್ರಮದ ಹಿಂದಿನ ರಾತ್ರಿ ಕೆಲವು ಜನಿವಾರ ಧಾರಿಗಳು ಯಾದವ ಮಠಕ್ಕೆ ಬಂದು ಹೋಮ-ಹವನ ಶುರು ಮಾಡಿಕೊಂಡರು. ಬಸವ ಯಾದವ ಸ್ವಾಮಿಯನ್ನು ಹಿಡಿದುಕೊಂಡು ಒಬ್ಬ ನಾಮ ಹಾಕಿದರೆ ಮತ್ತೊಬ್ಬ ಅದನ್ನು ಅಳಿಸಿ ಮುದ್ರೆ ಬಳಿದ. ಇನ್ನೊಬ್ಬ ತಲೆಗೆ ವಿಚಿತ್ರ ರೀತಿಯ ಪೇಟಾ ಸುತ್ತಿಬಿಟ್ಟ, ಇವ್ಯಾವು ಗೊಲ್ಲರ ಸಂಸ್ಕೃತಿಯಲ್ಲ ಎಂದು ಉಗಿದು ಬುದ್ಧಿ ಹೇಳುವ ಧೈರ್ಯ ಅಲ್ಲಿದ್ದವರಿಗೆ ಬರಲೇ ಇಲ್ಲ. ಹೀಗೆ ಶೂದ್ರ ಸ್ವಾಮಿಯೊಬ್ಬರನ್ನು ರಾತ್ರಿಯೆಲ್ಲಾ ಸತಾಯಿಸಿ ವೈದಿಕ ಆಚರಣೆ ನಡೆಸಿದ ಪುರೋಹಿತರು ಮಾರನೇ ದಿನದ ಕಾರ್ಯಕ್ರಮದಲ್ಲೂ ಮೆರೆದರು.

ಬ್ರಾಹ್ಮಣ ಮಠದಲ್ಲಿ ಶೂದ್ರ ಸ್ವಾಮಿಗಳಿಗೆ ಆಹ್ವಾನವಿರಲ್ಲ ಏಕೆ?

ಅದು ಯಾದವ ಮಠಾಧೀಶರ ಪಟ್ಟಾಭಿಷೇಕವಾಗಲಿ, ಕುರುಬ ಗುರುಗಳ ಕಾರ್ಯಕ್ರಮವಿರಲಿ, ಒಕ್ಕಲಿಗರ ಮಠದ ದೊಡ್ಡ ಸಮಾರಂಭವಾಗಲಿ ಈ ಪೇಜಾವರ ಪಟಾಲಂ ಹಾಜರಾಗಿ ಸಕಲ ಗೌರವ ಮರ್ಯಾದೆ ಗಿಟ್ಟಿಸಿ ಹೋಗುತ್ತಾರೆ. ಆದರೆ ಇಲ್ಲೊಂದು ವಿಪರ್ಯಾಸ ಏನು ಗೊತ್ತೆ?

ತೀರಾ ಇತ್ತೀಚೆಗೆ ಉಡುಪಿಯಲ್ಲಿ ಪರ್ಯಾಯ ಮಹೋತ್ಸವ ಆಯಿತಲ್ಲ.. ಅಲ್ಲಿಗೆ ರಾಜ್ಯದ ಯಾವ ಶೂದ್ರ ಸ್ವಾಮಿಗಳನ್ನು ಈ ಬ್ರಾಹ್ಮಣರು ಕರೆಸಿರಲಿಲ್ಲ.

ಇದೊಂದು ಉದಾಹರಣೆ ಮಾತ್ರ.

ರಾಜ್ಯದಲ್ಲಿ ವೈದಿಕ ಮಠಗಳವರು ಏನೇ ಕಾರ್ಯಕ್ರಮ, ಪಟ್ಟಾಭಿಷೇಕ ನಡೆಸಿದರೂ ಅಲ್ಲಿಗೆ ಒಬ್ಬಾನೊಬ್ಬ ಒಕ್ಕಲಿಗ, ಲಿಂಗಾಯತ, ಯಾದವ, ಕುರುಬ ಸ್ವಾಮಿಗಳನ್ನು ಕರೆದು ಕೂರಿಸಿಕೊಳ್ಳುವ ಸಂಪ್ರದಾಯ ಬ್ರಾಹ್ಮಣರಿಗಿಲ್ಲ. ಹಾಗಿರುವಾಗ ಅದೇ ಬ್ರಾಹ್ಮಣ ಮಠಾಧೀಶರನ್ನು ಶೂದ್ರರ ಮಠಗಳ ಕಾರ್ಯಕ್ರಮಗಳಿಗೆ ಯಾಕೆ ಕರೆಸಬೇಕು?

ಸ್ವಾಭಿಮಾನವಿದ್ದರೆ ಶೂದ್ರ ಸ್ವಾಮಿಗಳು ಇದಕ್ಕೆ ಉತ್ತರಿಸಲಿ.

ವೈದಿಕರ ಚೇಷ್ಟೆಗೆ ಶೂದ್ರ ಸ್ವಾಮಿ ಬಲಿ





ಅಯ್ಯಂಗಾರರ U ಮುದ್ರೆ

[illegible] ನಾಮ



ಶರಣರ ಶೋಕ

ಈ ಪುಂಡು ಪುರೋಹಿತರ ನಾಯಕ ಪೇಜಾವರ ಗೊಲ್ಲರ ಸ್ವಾಮಿಗಳ ಹೆಸರನ್ನೇ ಬದಲಿಸಿಬಿಟ್ಟ. ಶರಣರು ಇಟ್ಟಿದ್ದ, ಬಹುತೇಕ ಜನ ಸಮ್ಮತಿಸಿದ್ದ 'ಬಸವ ಯಾದವಾನಂದ ಸ್ವಾಮಿ' ಎಂಬ ಹೆಸರಿನ ಬದಲಾಗಿ 'ಶ್ರೀ ಕೃಷ್ಣ ಯಾದವಾನಂದ ಸ್ವಾಮಿ' ಎಂದು ದಿಢೀರನೆ ಬದಲಾಯಿಸಲಾಯಿತು. ಯಾಕೆ ಹೀಗೆ ಎಂದು ಪ್ರಶ್ನಿಸಿದವರಿಗೆ ಗೊಲ್ಲರೊಳಗೇ ಹಟ್ಟಿ ಗೊಲ್ಲರು, ಊರಗೊಲ್ಲರೆಂಬ ಭೇದವಿದೆ. ಕೆಲವರಿಗೆ ಬಸವನ ಹೆಸರು ಬೇಕಿರಲಿಲ್ಲ. ಹಾಗಾಗಿ 'ಬಸವ' ತೆಗೆದು 'ಕೃಷ್ಣ' ಸೇರಿಸಲಾಗಿದೆ ಎಂದು ವಿವರಿಸಲಾಯಿತು. ಹೀಗೆ ಶೂದ್ರರ ನಡುವಿನ ಭಿನ್ನಾಭಿಪ್ರಾಯವನ್ನು ಬ್ರಾಹ್ಮಣರು ಬಳಸಿಕೊಂಡು ಗೊಲ್ಲ ಜನಾಂಗದ ಮಠದಲ್ಲೂ ತಮ್ಮ ಬಾವುಟ ನೆಟ್ಟೇಬಿಟ್ಟರು.



ಪೇಟಾ ಧಾರಣೆ

ಕಾಂಗ್ರೆಸ್ ನಾಯಕ ವರ್ತೂರು ಕೃಷ್ಣಪ್ಪನೆಂಬ ವೇಷಿಯೇ ಇದಕ್ಕೆಲ್ಲಾ ಬಹುಪಾಲು ಕಾರಣ. ಅನಿರೀಕ್ಷಿತ ಘಟನೆಗಳಿಂದ ದಿಗ್ಭ್ರಾಂತರಾದಂತೆ ಕಂಡುಬಂದ ಶರಣರು ಯಾದವ ಜನಾಂಗ ವೈದಿಕರ ಹಿತಾಸಕ್ತಿಗೆ ಬಲಿಯಾದ ಬಗ್ಗೆ ಬಹಿರಂಗ ಸಭೆಯಲ್ಲೇ ಆಕ್ರೋಶ ವ್ಯಕ್ತಪಡಿಸಿ ಮಾತಾಡಿಬಿಟ್ಟರು. ಆ ದಿನ ಅವರು ಹತಾಶರಾಗಿದ್ದರೆಂದರೆ ಮಾತನಾಡುವಾಗಲೇ ಅವರ ಕಣ್ಣಾಲಿಗಳಲ್ಲಿ ನೀರು ತುಂಬಿತ್ತು. ಆದರೆ ಅದೇ ವೇದಿಕೆಯಲ್ಲಿ ಶರಣರ ಪಕ್ಕದಲ್ಲೇ ಇದ್ದ ಪೇಜಾವರ ಮುಂತಾದ ಬ್ರಾಹ್ಮಣ ಸ್ವಾಮಿಗಳು ನಿರ್ಲಿಪ್ತರಾಗಿ ಕುಳಿತಿದ್ದರು.

ಇನ್ನೊಂದು ಶೂದ್ರ ಮಠವನ್ನು ವೈದಿಕ ಸಂಸ್ಕೃತಿಗೆ ಬಲಿ ಮಾಡಿದ ತೃಪ್ತಿ ಇರಬಹುದು ಅದು.

ಒಂದು ರೀತಿ ಪುರೋಹಿತರು ಉಂಡು ತೇಗಿದರು.

ಈ ರೀತಿಯ ಅನಾಚಾರಗಳಿಗೆ ಯಾದವ ಸಂಘಟನೆಯ ನಾಯಕರುಗಳಾದ ಡಾ. ಕಾಟಪ್ಪ, ಯಾದವ್, ಪೂರ್ಣಿಮ ಪ್ರಕಾಶ್, ಕೋದಂಡರಾಮ ಮುಂತಾದವರು ಯಾಕೆ ಅವಕಾಶ ಕಲ್ಪಿಸಿಕೊಟ್ಟರು ವಿವರಿಸುವರ್ಯಾರು ಹೇಳಿ?

ಪುಂಡ ಗುರು ನಾನಾ ಚೇಷ್ಟೆ

ವೈದಿಕ ಧರ್ಮಗುರು ಪೇಜಾವರ ಈ ರೀತಿ ಜಾತಿ ಜನಾಂಗಗಳವರ ಆಂತರಿಕ ವ್ಯವಹಾರದಲ್ಲಿ

ಚೆಡ್ಡಿಗಳಿಗೆ ಉಗಿದ ಬಾಲಗಂಗಾಧರ ಸ್ವಾಮಿ

'ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರೀತು' ಎಂಬ ಗಾದೆ ಮಾತು ಆದಿಚುಂಚನಗಿರಿ ಮಠಾಧೀಶ ಬಾಲಗಂಗಾಧರನಾಥ ಸ್ವಾಮಿಗಳಿಗೆ ಬಹಳ ಚೆನ್ನಾಗಿ ಅನ್ವಯಿಸುತ್ತದೆ.



ಕಳೆದ ವಾರ ಚುಂಚನಗಿರಿಯಲ್ಲಿ ನಡೆದ ಹಿಂದೂ-ಧರ್ಮ ಕುರಿತ ಸಭೆಯೊಂದರಲ್ಲಿ ಮಾತನಾಡಿದ ಸ್ವಾಮಿಗಳು RSS, ವಿಶ್ವಹಿಂದೂ ಪರಿಷತ್, ಬಜೆಪಿಗಳನ್ನು ತರಾಟೆಗೆ ತೆಗೆದುಕೊಂಡರು. "ಹಿಂದೂ ಧರ್ಮ, ಮತಾಂತರ ಹೀಗೆ ಪ್ರತಿಯೊಂದು ವಿಚಾರವೂ ಈ ಸಂಘ ಪರಿವಾರದವರಿಗೆ ದುಡ್ಡು ಮಾಡುವ ದಂಧೆಯಾಗಿ ಹೋಗಿದೆ" ಎಂದು ಚೆಡ್ಡಿಗಳ ಜನ್ಮ ಜಾಲಾಡಿದ್ದಾರೆ.

ಇದರ ಹಿನ್ನೆಲೆಯಲ್ಲಿ ಶೈವ-ವೈಷ್ಣವ ಜಗಳದ ಆಯಾಮವೂ ಇದೆ.

ವಿಚಾರ ಏನೆಂದರೆ ಕಳೆದ ವಾರ ಬೆಂಗಳೂರಿನ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಬಸವನಗುಡಿ ಶಾಸಕ ಚಂದ್ರಶೇಖರ್ ಹಿಂದೂ ಧರ್ಮ ಆಚಾರ್ಯರ ಸಮಾವೇಶ ನಡೆಸಿದರು. ಆದರೆ ಅವತ್ತು ವೈಷ್ಣವ (ಅಂದರೆ ಬಹುತೇಕ ವೈದಿಕರು) ಪರಂಪರೆಯ ಬ್ರಾಹ್ಮಣ ಮಠಾಧೀಶರಿಗೆ ಹೆಚ್ಚು ಮರ್ಯಾದೆ ಮಾಡಿ ಶೂದ್ರ (ಶೈವ) ಸ್ವಾಮಿಗಳನ್ನು ಎರಡನೇ ದರ್ಜೆಯುವರಂತೆ ಕಾಣಲಾಗಿತ್ತು, ಇದರಿಂದ ಸಿಟ್ಟಿಗೆದ್ದ ಬಾಲಗಂಗಾಧರ ಸ್ವಾಮಿ ಅಲ್ಲೇ ಪ್ರತಿಭಟಿಸಿದ್ದರು.

ಹಾಕುತ್ತಿರುವುದು ಇದೇ ಮೊದಲೇನಲ್ಲ. ಸ್ವತಃ ಬ್ರಾಹ್ಮಣರದ್ದೇ ಆಗಿದ್ದರೂ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಉತ್ತರಾಧಿಕಾರಿ ಆಯ್ಕೆ ವಿಚಾರದಲ್ಲೂ ತಲೆ ತೂರಿಸಿದ್ದ ಪೇಜಾವರ ತಮಗೆ ಬೇಕಾದವರಾಗಿದ್ದ ಸುಜಯೇಂದ್ರ ತೀರ್ಥರನ್ನೇ ಅಲ್ಲಿಗೆ ಬರುವಂತೆ ನೋಡಿಕೊಂಡಿದ್ದರು. ಇದು ನಂತರ ದೊಡ್ಡ ವಿವಾದವಾಗಿ ಬೆಳೆದು ಮಂತ್ರಾಲಯ ಮಠದ ಭಕ್ತರು ಪೇಜಾವರ ಮತ್ತವನ ಉಡುಪಿ ಪಟಾಲಂ ವಿರುದ್ಧ ಹೀನಾಮಾನವಾಗಿ ತೆಗಳಿದ್ದರು. ಪೇಜಾವರ ಅನೇಕ ಅವ್ಯವಹಾರ, ಬಡ್ಡಿ ದಂಧೆ, ಅನ್ಯರ ಆಸ್ತಿ ನುಂಗಲು ಹೋಗಿ ಕೋರ್ಟ್ ಕೇಸಾದ ಅನೇಕ ಘಟನೆಗಳು ಬೆಳಕಿಗೆ ಬಂದಿದ್ದೇ ಈ ಜಗಳದಿಂದ.

ಇದಕ್ಕೂ ಮುನ್ನ ಕುರುಬ ಮಠಾಧೀಶರಾಗಿ ಬೀರೇಂದ್ರ ಕೇಶವ ಸ್ವಾಮಿಗಳು 1991 ರಲ್ಲಿ ಕಾಗಿನೆಲೆಗೆ ಬಂದಾಗಲೂ ಇದೇ ಪೇಜಾವರ ಅಲ್ಲೂ ತಲೆ ಹಾಕಿ ವೈದಿಕ ಧರ್ಮಾಚರಣೆಯಂತೆ ಸ್ವಾಮಿಗಳ ಪಟ್ಟಾಭಿಷೇಕ ನಡೆಸಿದ್ದರು. ಆಗೆಲ್ಲಾ ತಾನೇನೋ ಶೂದ್ರರ ಹಿತೈಷಿಯಂತೆ ನಾಟಕವಾಡಿದ ಇದೇ ಪೇಜಾವರ ನಂತರ ಉಡುಪಿಯಲ್ಲಿದ್ದ ಕನಕಗೋಪುರವನ್ನೇ ವೈದಿಕರು ಕೆಡವಿದಾಗ ಬಾಯೇ ಬಿಡದೆ ಸುಮ್ಮನಿದ್ದ. ಈಗಲೂ ಉಡುಪಿಯ ಕೃಷ್ಣ ದೇವಾಲಯ ಭಕ್ತ ಜನರಿಗೆ ಸೇರಿದ ಆಸ್ತಿ ಎಂಬುದನ್ನು ಒಪ್ಪದೆ ತನಗೇ ಸೇರಬೇಕೆಂದು ಕೋರ್ಟ್ ಕಚೇರಿ ಅಲೆಯುತ್ತಿದೆ ಈ ಭಂಡ ಜೀವಿ. ಇದೇ ಪೇಜಾವರನ ಮೂಲಕ ಕಾಗಿನೆಲೆಗೆ ಪ್ರವೇಶ ಗಿಟ್ಟಿಸಿಕೊಂಡಿದ್ದ ಸಂಜಯ ಜೋಶಿ ಎಂಬ ವಟು ಮಠದ 1 ಕೋಟಿ ರೂ. ಕದ್ದು ಪರಾರಿಯಾದ.

ಕರ್ನಾಟಕದ ಶೂದ್ರ ಪರಂಪರೆಯ ಜಾತಿ ಜನಾಂಗಗಳು ತಮ್ಮ ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಲು [illegible] ಸಂಘಟನೆ ಬೇಕಾದರೂ ಕಟ್ಟಿಕೊಳ್ಳಲಿ. ತಮ್ಮ ಸಂಸ್ಕೃತಿ ಪರಂಪರೆಗಳ ಮುಂದುವರಿಕೆಗೆ ಅಗತ್ಯಾನುಸಾರ ಸಂಸ್ಥೆಗಳನ್ನು ಕಟ್ಟಿಕೊಳ್ಳಲಿ.... ಅದು ತಪ್ಪೇನಲ್ಲ.


ಆದರೆ ಪೇಜಾವರರಂಥ [illegible] ಸಂಸ್ಕೃತಿ [illegible]. ಹಿಂದೂ [illegible] ಮಾತ್ರ ಬಿಡಬೇಕಿದೆ.

[illegible]

ಪೇಜಾವರನ ಪೋಲೀಸ್ ಶಿಷ್ಯನಿಗೆ ಸಿಓಡಿಯ ಮಂಗಳಾರತಿ!

ಪಾರ್ಟ್ ಟೈಂ ಸ್ವಾಮಿ, ಪಾರ್ಟ್ ಟೈಂ ರಾಜಕಾರಣಿ, ಪಾರ್ಟ್ ಟೈಂ ಬಡ್ಡಿವ್ಯವಹಾರಿ ಆಗಿರುವ ಪೇಜಾವರ ಸ್ವಾಮಿಗೆ ಒಂದರ ಮೇಲೊಂದರಂತೆ ಹಿನ್ನಡೆಗಳಾಗುತ್ತಿವೆ. ಇತ್ತೀಚೆಗೆ ತಿಂಗಳುಗಟ್ಟಲೆ ನಡೆದ ಉಡುಪಿ ಪರ್ಯಾಯ ವಿವಾದದಲ್ಲಿ ಪುತ್ತಿಗೆ ಸುಗುಣೇಂದ್ರ ತೀರ್ಥರ ಎದುರು ಆಖಾಡಕ್ಕಿಳಿದು, ಉಪವಾಸ ಮಾಡಿ ಬಸವಳಿದುಹೋದರು. ಅದರಿಂದ ಇನ್ನೂ ಸುಧಾರಿಸಿಕೊಳ್ಳುತ್ತಿರುವಾಗಲೇ ಇತ್ತ ಬೆಂಗಳೂರಿನಲ್ಲಿದ್ದ ಅವರ ಪೊಲೀಸ್ ಶಿಷ್ಯ ಎಸಿಪಿ ಗಂಗಾಧರ್ ಟಿ. ನಾಯಕ್ ಮಾಡಿದ ಅವಾಂತರಗಳ ಬಗ್ಗೆ ತನಿಖೆ ಮಾಡಿದ ಸಿಓಡಿ ವರದಿಯೂ ಈಗ ಹೊರಬಿದ್ದಿದೆ. ತನಗಿರುವ ರಾಜಕೀಯ ಪ್ರಭಾವವನ್ನಾದರೂ ಬಳಸಿ ಕದ್ದಿ ಆದಿಸೋಣವೆಂದರೆ ಈಗ ಯಡ್ಡಿಯಾಗಲೀ, ಬಜೆಪಿಯಾಗಲೀ ಅಧಿಕಾರದಲ್ಲಿ ಇಲ್ಲ. ಒಟ್ಟಿನಲ್ಲಿ ಪೇಜಾವರನ ಮುಖ ಮಾತ್ರ ಹರಳೆಣ್ಣೆ ಕುಡಿದಂತಾಗಿರುವುದಂತೂ ಸತ್ಯ.

ನಿಮಗೆ ನೆನಪಿರಬಹುದು, ಭಕ್ತರು ಮಠಕ್ಕೆಂದು ಕೊಟ್ಟ ದುಡ್ಡನ್ನು ಪೇಜಾವರ ಸ್ವಾಮಿ ಬಡ್ಡಿ ವ್ಯವಹಾರಕ್ಕಾಗಿ ಬಳಸಿದ್ದು, ಹಣ ಪಡೆದ ಸಂಸ್ಕೃತ ಅಧ್ಯಾಪಕ ಕೆ.ಎಸ್. ವೆಂಕಟೇಶ್ ಸಕಾಲಕ್ಕೆ ಅದನ್ನು ವಾಪಾಸ್ಸು ನೀಡಲಿಲ್ಲ ಎಂದು ಆತನ ಮೇಲೆ ಸ್ವಾಮಿ ಗೂಂಡಾಗಳನ್ನು ಛೂಬಿಟ್ಟು ದೌರ್ಜನ್ಯವೆಸಗಿದ್ದು, ತಿರುಗಿಬಿದ್ದ ವೆಂಕಟೇಶ್ ಪೇಜಾವರನ ಮೇಲೆ ಕೊಲೆಬೆದರಿಕೆಯ ದೂರು ನೀಡಿದ್ದು, ವಿಚಾರಣೆಯ ನೆಪದಲ್ಲಿ ಪೊಲೀಸರು ವೆಂಕಟೇಶ್ ಮತ್ತವರ ಅಕ್ಕ ರುಕ್ಮಿಣಿಯವರ ಮೇಲೆ ದೈಹಿಕ ದೌರ್ಜನ್ಯವೆಸಗಿದ್ದು, ಇದನ್ನು ಪ್ರತಿಭಟಿಸಿ ವೆಂಕಟೇಶ್ ರಾಜ್ಯಪಾಲರಿಗೆ ದೂರಿತ್ತಿದ್ದು, ರಾಜಭವನದೆದುರೇ ವೆಂಕಟೇಶ್ ಮೇಲೆ ಪೇಜಾವರನ ಗೂಂಡಾ ಶಿಷ್ಯಪಡೆ ಅವರ ಮೇಲೆ ಮುಗಿಬಿದ್ದು ಹಲ್ಲೆ ನಡೆಸಿದ್ದು, ಇತ್ಯಾದಿ, ಇತ್ಯಾದಿ...



ಇದೇ ಕೇಸಿನಲ್ಲಿ ದೇಶದ ಕಾಯ್ದೆ ಕಾನೂನುಗಳನ್ನು ಗಾಳಿಗೆ ತೂರಿ, ವೆಂಕಟೇಶ್ ಮತ್ತು ರುಕ್ಮಿಣಿ ಮೇಲೆ ಪೊಲೀಸ್ ದೌರ್ಜನ್ಯವೆಸಗಿದ ಪೇಜಾವರನ ಪಕ್ಕಾ ಪೊಲೀಸ್ ಶಿಷ್ಯ ಎಸಿಪಿ ಗಂಗಾಧರ್ ನಾಯಕ್ ಮಾಡಿದ ಎಲ್ಲಾ ಅವಾಂತರಗಳು ಈಗ ಸಿಓಡಿ ತನಿಖೆಯಿಂದ ದೃಢಪಟ್ಟಿವೆ.

[illegible]

ಸಂಸ್ಕೃತ ಪ್ರಾಧ್ಯಾಪಕರಾದ ಕೆ.ಎಸ್. ವೆಂಕಟೇಶ್‌ರವರು ತಮ್ಮಿಂದ ಪಡೆದ ಹಣವನ್ನು ವಾಪಾಸ್ಸು ಕೊಡಲಿಲ್ಲವೆಂಬ ಕಾರಣವೊಡ್ಡಿ ಪೇಜಾವರ ಶ್ರೀಗಳು ಗೂಂಡಾಗಳನ್ನು ಬಿಟ್ಟು ದೈಹಿಕ ದೌರ್ಜನ್ಯವೆಸಗಿದ್ದರು. ಇದರ ವಿರುದ್ಧ ವೆಂಕಟೇಶ್ ಅವರು ಜನವರಿ 3, 2007ರಂದು ಎಸಿಎಂಎಂ ನ್ಯಾಯಾಲಯದಲ್ಲಿ ಒಂದು ಖಾಸಗಿ ದೂರನ್ನು ಸಲ್ಲಿಸಿದ್ದರು. ದೂರನ್ನು ಅಂದೇ ದಾಖಲಿಸಿಕೊಂಡ ನ್ಯಾಯಾಲಯವು (ಪಿಸಿಆರ್ ನಂ 180/2007) ಪ್ರಕರಣದ ಕುರಿತು ಸಿಆರ್‌ಪಿಸಿ ಕಲಂ 156 (3) ಅನ್ವಯ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿ ಪ್ರಕರಣವನ್ನು ಅದೇ ದಿನ ಕೆ.ಜಿ. ನಗರ ಪೊಲೀಸ್ ಠಾಣೆಗೆ ಕಳುಹಿಸಿತ್ತು. ಪಿಎಸ್‌ಐ ಭೈರಲಿಂಗಯ್ಯ ಅವರು ಐಪಿಸಿ ಕಲಂ 307, 326, 340, 506 ಸಹ ಕಲಂ 34ರನ್ವಯ ಪ್ರಕರಣ ದಾಖಲಿಸಿಕೊಂಡಿದ್ದರು (ಮೊ.ಸಂ. 1/2007). ಅದೇ ದಿನದಂದು ವೆಂಕಟೇಶ್ ಅವರು ಕೆ.ಜಿ. ನಗರ ಠಾಣೆಗೆ ಹಾಜರಾಗಿದ್ದು ಅವರ ಹೇಳಿಕೆಯೂ ದಾಖಲಾಯಿತು.

ನಂತರದಲ್ಲಿ ಈ ಪ್ರಕರಣದ ಮುಂದಿನ ತನಿಖೆ ನಡೆಸುವುದಕ್ಕೆ ದಕ್ಷಿಣ ವಿಭಾಗದ ಡಿಸಿಪಿಯವರು ಸ್ಥಳೀಯ ಎಸಿಪಿ ಗಂಗಾಧರ್ ಟಿ.ನಾಯಕ್ ಅವರಿಗೆ ವಹಿಸಿಕೊಟ್ಟರು. ಈ ಪ್ರಕರಣ ತನ್ನ ಕೈಗೆ ಬಂದಿದ್ದೇ ತಡ, ಪೇಜಾವರನಿಗೆ ಸೇವೆ ಮಾಡುವುದಕ್ಕೆ ಒಂದು ಒಳ್ಳೆಯ ಅವಕಾಶ ಸಿಕ್ಕಿತೆಂದೇ ಭಾವಿಸಿದ ಎಸಿಪಿ ಗಂಗಾಧರ್ ಮಾಡಬಾರದ ಅಧ್ವಾನಗಳನ್ನು ಪ್ರಾರಂಭಿಸಿಬಿಟ್ಟ. ಪ್ರಕರಣ ಕೈಗೆ ಬಂದ ಮರುದಿನವೇ ವೆಂಕಟೇಶ್ ಮತ್ತು ರುಕ್ಮಿಣಿಯನ್ನು ಠಾಣೆಗೆ ಕರೆಸಿಕೊಂಡು ವಿಚಿತ್ರ ತನಿಖೆಯನ್ನು ಶುರುಹಚ್ಚಿಕೊಂಡ. ಜನವರಿ 4, 5 ಮತ್ತು 6 ರಂದು ನಿರಂತರವಾಗಿ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ. ಮರುದಿನವೂ - ಅಂದರೆ, ಜನವರಿ 7ರಂದೂ - ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಕರೆದುಕೊಂಡು ಬರುವಂತೆ ಪಿಎಸ್‌ಐ ಬೈರಲಿಂಗಯ್ಯನನ್ನು ಕಳುಹಿಸಿದ್ದ. ಅಷ್ಟು ಹೊತ್ತಿಗಾಗಲೇ ಕತ್ತಲಾಗಿದ್ದರಿಂದ ಪೊಲೀಸರೊಂದಿಗೆ ಹೋಗಲು ಅವರಿಬ್ಬರೂ ನಿರಾಕರಿಸಿದ್ದರು. ಈ ವಿಷಯವನ್ನು ತಿಳಿದ ಎಸಿಪಿ ಗಂಗಾಧರನೇ ಖುದ್ದಾಗಿ ಬಂದು ಕೆರೆಗುಡ್ಡದ ಹಳ್ಳಿಯ ತಮ್ಮ ಸಂಬಂಧಿಕರಾದ ವಿಠಲ್ ಅವರ ಮನೆಯಲ್ಲಿದ್ದ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಪೊಲೀಸ್ ದೌರ್ಜನ್ಯ ನಡೆಸಿ ಕರೆದುಕೊಂಡುಬಂದಿದ್ದ. ಅಂದು ರಾತ್ರಿ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಅನಧಿಕೃತ ಬಂಧನದಲ್ಲಿಟ್ಟಿದ್ದ. ಅದೇರೀತಿ, ರುಕ್ಮಿಣಿಯವರನ್ನು ಕೆ.ಜಿ.ನಗರ ಪೊಲೀಸ್ ಠಾಣೆಗೆ ಕರೆದೊಯ್ದು ಅಲ್ಲಿಂದ ರಾಜ್ಯ ಮಹಿಳಾ ನಿಲಯಕ್ಕೆ ರಾತ್ರಿ ತಂಗಲು ಜವರೇಗೌಡ ಎಂಬ ಪೇದೆ ಜೊತೆ ಕಳಿಸಿಕೊಟ್ಟಿದ್ದ.



ವೆಂಕಟೇಶ್

ಮರುದಿನ ಅಂದರೆ, ಜನವರಿ 8ರಂದು ರುಕ್ಮಿಣಿಯವರ ಮಗ ಹೈಕೋರ್ಟ್‌ನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ ವೆಂಕಟೇಶ್ ಮತ್ತು ರಕ್ಮಿಣಿಯವರನ್ನು ಪೊಲೀಸರು ಅಕ್ರಮವಾಗಿ ಕರೆದುಕೊಂಡು ಹೋಗಿದ್ದಾರೆಂದು, ಅವರನ್ನು ಹುಡುಕಿಕೊಡಬೇಕೆಂದು ಕೇಳಿಕೊಂಡರು. ಬಹುಶಃ ಈ ಅರ್ಜಿಯನ್ನು ಸಲ್ಲಿಸಿರುವ ವಿಚಾರ ಎಸಿಪಿ ಗಂಗಾಧರ್‌ಗೆ ಗೊತ್ತಾಗಿ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಅಂದೇ ಸಂಜೆ 4.30ಕ್ಕೆ ಗಾಂಧಿನಗರದಲ್ಲಿರುವ ಕಾನಿಷ್ಕ ಹೋಟೇಲ್ ಹತ್ತಿರ ಬಿಟ್ಟುಹೋಗಿದ್ದ.

ಅವರಿಬ್ಬರೂ ರುಕ್ಮಿಣಿಯ ಮಗ ಶ್ರೀನಿಧಿಯೊಂದಿಗೆ ಸೇರಿ ಸಂಜೆ 6-7 ಗಂಟೆಯ ಹೊತ್ತಿಗೆ ರಾಜ್ಯಪಾಲರಿಗೆ ದೂರು ನೀಡಿ ಮರಳುತ್ತಿದ್ದಾಗ ಅವರ ಮೇಲೆ ಹಲ್ಲೆ ನಡೆದಿತ್ತು.

ಇಷ್ಟೆಲ್ಲಾ ವಿಚಾರಗಳನ್ನು ಸಿಓಡಿ ತನಿಖಾ ತಂಡ ಈಗ ದೃಢಪಡಿಸಿದೆ. ಆದರೆ, ಗಂಗಾಧರ್ ನಾಯಕ್ ಎಂತಹ ಕಂತ್ರಿಬುದ್ಧಿಯವನು ಎಂದರೆ, ಜನವರಿ 23ರಂದು ಉಚ್ಛ ನ್ಯಾಯಾಲಯಕ್ಕೆ ಸಲ್ಲಿಸಿದ ಕೌಂಟರ್ ಅಫಿಡವಿಟ್ಟನಲ್ಲಿ "ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಹುಡುಕಿ ತರಲು ನಾಲ್ಕು ಜನ ಸಿಬ್ಬಂಧಿಯನ್ನು ನೇಮಿಸಿದ್ದೆ, ಅವರು 4, 5 ಮತ್ತು 6 ರಂದು ಅವರ ಮನೆ, ಇತರ ಸ್ಥಳಗಳಲ್ಲಿ ಹುಡುಕಿದರೂ ಸಿಕ್ಕಿರಲಿಲ್ಲ" ಎಂದು ಅಪ್ಪಟ ಸುಳ್ಳನ್ನು ಹೇಳಿದ್ದಾನೆ. ವಾಸ್ತವದಲ್ಲಿ ಈ ಮೂರೂ ದಿನ ಅವನೇ ಖುದ್ದಾಗಿ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಪೊಲೀಸ್ ಠಾಣೆಯಲ್ಲಿ ವಿಚಾರಿಸಿ ಹಿಂಸಿಸಿದ್ದ.

ಹೈಕೋರ್ಟ್ ತನ್ನ ರಿಜಿಸ್ಟ್ರಾರ್ (ವಿಜಿಲೆನ್ಸ್) ಮೂಲಕ ನಡೆಸಿದ ವಿಚಾರಣೆಯಲ್ಲೂ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಎಸಿಪಿ ಗಂಗಾಧರ್ ನಾಯಕ್ ಅಕ್ರಮವಾಗಿ ಬಂಧನದಲ್ಲಿಟ್ಟು ಚಿತ್ರಹಿಂಸೆ ಕೊಟ್ಟಿರುವ ಬಗ್ಗೆ ಸ್ಪಷ್ಟವಾಗಿ ನಮೂದಿಸಿದ್ದರು. ಅದನ್ನು ಪರಿಶೀಲಿಸಿದ ನ್ಯಾಯಾಲಯವು ವೆಂಕಟೇಶ್ ಮತ್ತು ರುಕ್ಮಿಣಿಯವರಿಗೆ 50,000 ರೂ.ಗಳ ಪರಿಹಾರ ಮತ್ತು 5 ಸಾವಿರ ಅರ್ಜಿಯ ಖರ್ಚು ಕೊಡಬೇಕೆಂದು ಹೇಳಿ ಸಿಓಡಿ ತನಿಖೆಗೆ ಆದೇಶಿಸಿತ್ತು.

ಸಿಓಡಿ ತನಿಖೆಯಲ್ಲಿ ತಾನು ಮಾಡಿದ ಘನಂದಾರಿ ಕೆಲಸಗಳೆಲ್ಲ ಎಲ್ಲಿ ಬಯಲಾಗಿಬಿಡುತ್ತವೆ ಎಂಬ ಭಯದಿಂದ ತನಗೆ ಬೇಕಾದಂತೆ ಸಿ.ಡಿಗಳನ್ನು ಬರೆಸಿ, ಅದಕ್ಕೆ ಅಷ್ಟು ಹೊತ್ತಿಗಾಗಲೇ ನಿವೃತ್ತರಾಗಿದ್ದ ಎಸ್ಸೈ ಬೈರಲಿಂಗಯ್ಯನವರಿಂದ ಸಹಿ ಪಡೆದಿದ್ದಾನೆ. ಅದೂ ಈಗ ಸಿಓಡಿ ತನಿಖೆಯಲ್ಲಿ ಬಯಲಾಗಿದೆ.

ಇನ್ನೂ ಒಂದು ವಿಚಾರ ಎಂದರೆ, ಎಸಿಪಿ ಗಂಗಾಧರ್ ನಡೆಸುತ್ತಿದ್ದ ಪ್ರಕರಣದಲ್ಲಿ (ಮೊ.ಸಂ. 1/2007) ರುಕ್ಮಿಣಿ ಆರೋಪಿತರಲ್ಲ, ಆದರೂ ಎಸಿಪಿ ಗಂಗಾಧರ್ ಅವರನ್ನು ಅಕ್ರಮವಾಗಿ ಬಂಧಿಸಿದ್ದ. ಬಂಧಿಸುವಾಗಲೂ ಕೂಡ ಯಾವುದೇ ಮಹಿಳಾ ಪೇದೆಗಳಿಲ್ಲದೇ ತಾನೇ ಖುದ್ದಾಗಿ ಬಂಧಿಸಿರುವುದು ತೀವ್ರತರವಾದ ಅಧಿಕಾರ ದುರುಪಯೋಗ ಎಂದು ಸಿಓಡಿ ಅಭಿಪ್ರಾಯಪಟ್ಟಿದೆ. ಅಲ್ಲದೇ, ಕರ್ನಾಟಕದ ಉಚ್ಛನ್ಯಾಯಾಲಯದ ಎದುರು ಸುಳ್ಳು ಕೌಂಟರ್ ಅಫಿಡವಿಟ್ ಸಲ್ಲಿಸಿರುವುದು, ಸುಳ್ಳು ಸಿ.ಡಿ.ಗಳನ್ನು ಸೃಷ್ಟಿಸಿರುವುದು, ನಿವೃತ್ತಿ ಹೊಂದಿದ ನಂತರ ಪಿಎಸ್ಸೈ ಅವರಿಂದ ಸಹಿ ಪಡೆದಿರುವುದು ಎಲ್ಲವೂ ಈಗ ಸಿಓಡಿ ತನಿಖೆಯಲ್ಲಿ ಬಯಲುಗೊಳಿಸಲಾಗಿದೆ.

ಸಿಓಡಿಯ ತನಿಖೆಯ ವಿವರಗಳು ಹೊರಬೀಳುತ್ತಿದ್ದಂತೆ ಇತ್ತ ಎಸಿಪಿ ಗಂಗಾಧರ್ ನಾಯಕ್ ಹಾಗೂ ಅತ್ತ ಅವನ ಗುರು ಪೇಜಾವರ ಇಬ್ಬರಿಗೂ ಏನೋ ಒಂಥರ ಚಳಿಜ್ವರ ಶುರುವಾಗಿಬಿಟ್ಟಿದೆ. ತನ್ನ ಪಟ್ಟದ ಶಿಷ್ಯನನ್ನು ಉಳಿಸಿಕೊಳ್ಳಲು ಈಗ ಪೇಜಾವರನ ಮಾತು ಕೇಳುವ ರಾಜಕಾರಣಿಗಳೂ ಅಧಿಕಾರದಲ್ಲಿಲ್ಲ.

ಎಸಿಪಿ ಗಂಗಾಧರ್ ನಾಯಕ್ ಮಾಡಿದ ಅಧಿಕಾರದ ದುರುಪಯೋಗ ಮತ್ತು ಪೊಲೀಸ್ ದೌರ್ಜನ್ಯಗಳು ಒಮ್ಮೆ ವಿಜಿಲೆನ್ಸ್ ರಿಜಿಸ್ಟ್ರಾರ್ ಅವರ ತನಿಖೆಯಲ್ಲಿ, ಮತ್ತೊಮ್ಮೆ ಸಿಓಡಿ ತನಿಖೆಯಲ್ಲಿ ಸಾಬೀತಾಗಿದೆ. ಈಗಿರುವ ಪ್ರಶ್ನೆ ಎಂದರೆ ಅಂತಹ ಒಬ್ಬ ಕಾನೂನು ದ್ರೋಹಿಗೆ ಯಾವ ಶಿಕ್ಷೆ ದೊರೆಯುತ್ತದೆ ಎಂಬುದು.

- ಕುಮಾರ್ ಬುರಡಿಕಟ್ಟಿ


ಗಡಂಗಿನ ಛಾಯೆಯಿಂದ ಹೊರಬರದ ಯಾದಗಿರಿ



ವೀರಬಸವಂತರೆಡ್ಡಿ ಮುದ್ನಾಳ

ಕಲಬುರ್ಗಿ ಜಿಲ್ಲೆಯ ಯಾದಗಿರಿ ವಿಧಾನಸಭಾ ಕ್ಷೇತ್ರದ ಕುರಿತು ಹೇಳಬೇಕೆಂದರೆ ಮೊದಲು ವಿಶ್ವನಾಥರೆಡ್ಡಿ ಮುದ್ನಾಳ ಗಡಂಗಿನ ಕುರಿತೆ ಮಾತನಾಡಬೇಕಾಗುತ್ತದೆ. ಏಕೆಂದರೆ ಕಳೆದ ಸಲ ವಿಧಾನಸಭೆಯ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು ಬಂದು, ತದನಂತರ ಜನತಾದಳ ಸೇರಿದ್ದ ಡಾ. ವೀರಬಸವಂತರೆಡ್ಡಿ ಮುದ್ನಾಳ, ವಿಶ್ವನಾಥರೆಡ್ಡಿ ಮುದ್ನಾಳನ ಸಹೋದರ ಭೀಮರೆಡ್ಡಿ ಮುದ್ನಾಳರ ಸುಪುತ್ರ. ಒಂದರ್ಥದಲ್ಲಿ ಡಾ. ವೀರಬಸವಂತರೆಡ್ಡಿ ಮುದ್ನಾಳ ಗೆದ್ದು ಬಂದಿದ್ದರೂ ಅಧಿಕಾರದ ರುಚಿಯನ್ನೆಲ್ಲ ಯಥೇಚ್ಛವಾಗಿ ಅನುಭವಿಸಿದವರು ವಿಶ್ವನಾಥರೆಡ್ಡಿ ಮುದ್ನಾಳ್ ಹಾಗೂ ಆತನ ಸುಪುತ್ರರಾದ ವೆಂಕಟರೆಡ್ಡಿ, ಹನುಮಂತರೆಡ್ಡಿ ಮತ್ತು ಚಾಚಣ್ಣಗೌಡ ಮುದ್ನಾಳ. ಸರಕಾರಿ ಕಚೇರಿಗಳಲ್ಲಂತೂ ಮುದ್ನಾಳ ಫ್ಯಾಮಿಲಿಯ ಫರ್ಮಾನುಗಳದ್ದೇ ಕಾರುಬಾರು ನಡೆದಿತ್ತೆಂದರೆ ವಾಸ್ತವಾಂಶವನ್ನು ಹೇಳಿದಂತಾಗುತ್ತದೆ. ಎಲ್ಲಾ ಮತಕ್ಷೇತ್ರಗಳಲ್ಲಿ ಒಬ್ಬೊಬ್ಬ ಶಾಸಕ ಇದ್ದರೆ ಇಲ್ಲಿ ಮೂವರು ಎಂ.ಎಲ್.ಎ.ಗಳಂತೆ ಮೆರೆಸುತ್ತಿದ್ದ ದುರಂತ ಜನರದ್ದಾಗಿತ್ತು.

ವಿಶ್ವನಾಥರೆಡ್ಡಿ ಮುದ್ನಾಳ ಎಂಬ ಅವ್ಯವಹಾರಿ ಅಪ್ಪಟ ಪ್ರಾಮಾಣಿಕನ ಪೋಜು ನೀಡುತ್ತ, ಇಡೀ ಯಾದಗಿರಿಯ ಜನತೆಯನ್ನು ಮುಕ್ಕಿ ಕಾಡಿದ್ದ. ಬೆಂಗಳೂರಿನ 'ಬಸವ ಸಮಿತಿ'ಯ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿಯೂ ತನ್ನ ಮನೆಯಲ್ಲಿ ಪಂಚಾಚಾರ್ಯ ಜಗದ್ಗುರುಗಳ ಕಾಲುಗಳನ್ನು ತಿಕ್ಕಿತಿಕ್ಕಿ ತೊಳೆಯುತ್ತಾನೆ. ಹಿಂದೊಮ್ಮೆ 'ಮುದ್ನಾಳ ಸೀಡ್ಸ್' ಎಂಬ ವಿನೂತನ ಯೋಜನೆಯೊಂದನ್ನು ಶುರು ಮಾಡಿ ಅದನ್ನೆಲ್ಲ ತನ್ನ ಮಗ ವೆಂಕಟರೆಡ್ಡಿಯ ಹೆಸರಿನಲ್ಲಿ ನಮೂದಿಸಿದ್ದ ಸಂಗತಿಯನ್ನು ಜನ ಇನ್ನೂ ಮರೆತಿಲ್ಲ. 'ವಿಶ್ವಕಲ್ಯಾಣ' ಎಂಬ ಪತ್ರಿಕೆಯನ್ನು ಆರಂಭಿಸಿ, ಆ ಪತ್ರಿಕೆಯಲ್ಲಿ ಜನಸಾಮಾನ್ಯನ ಬವಣೆಗಳನ್ನ ಕುರಿತು ಬರೆಸದೆ ಅದನ್ನು ತನ್ನ ತುತ್ತೂರಿಯಾಗಿ ಮಾತ್ರ ಬಳಸಿಕೊಂಡ.



ಕೋಳೂರು ಮಲ್ಲಣ್ಣಗೌಡ

ಇದನ್ನು ಜನಸಾಮಾನ್ಯರ್‍ಯಾರು ಇಷ್ಟ ಪಡದಿದ್ದರಿಂದ ಕೆಲವು ವರ್ಷಗಳಲ್ಲಿಯೆ ಆ ಪತ್ರಿಕೆ ಸತ್ತು ಹೋಯಿತು. ಆದರೆ ಈ ಪತ್ರಿಕೆಗಾಗಿ ಚಂದಾ ವಸೂಲಿಯನ್ನು ಈ ವಿಶ್ವನಾಥರೆಡ್ಡಿ ಮುದ್ನಾಳ ತನ್ನ ಎಂದಿನ ಠಾಕುಠೀಕು ಮಾತುಗಳಿಂದ ಜನರಿಂದ ಹಣವನ್ನು ವಸೂಲಿ ಮಾಡುತ್ತಿದ್ದ ಸಂಗತಿಗಳೆಲ್ಲ ಈಗ ಜಗಜ್ಜಾಹೀರು. ಹೀಗೆ ಇಲ್ಲದ ಇಂಥ ತೆವಲುಗಳಿಗೆ ತಗಲು ಬಿದ್ದುಕೊಂಡಿದ್ದರಿಂದ ಬಹಳಷ್ಟು ಜನ 'ವಿಶ್ವಕಲ್ಯಾಣ' ಪತ್ರಿಕೆಯನ್ನು ತಮಾಷೆಯಾಗಿ 'ವಿಶ್ವನಾಥರೆಡ್ಡಿ ಕಲ್ಯಾಣ' ಎಂದು ಕರೆಯುತ್ತಿದ್ದರು. ಆದರೆ ವಾಸ್ತವವಾಗಿ ಪತ್ರಿಕೆಯಿಂದ ಅದರ ಸಂಪಾದಕ ಬಿ.ಮಹಾದೇವಪ್ಪ ಹೇಗೆ ಪಾಪರ್ ಆದರೋ, ಮುದ್ನಾಳ ಕೂಡ ಅದೇ ದಾರಿ ಹಿಡಿದು ಹೋದರು.

ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಕೆಲವು ಹಳ್ಳಿಗಳಿಗೆ ಪಕ್ಷದವರು ಪ್ರಚಾರಕ್ಕೆ ಹೋದಾಗ "ವಿಶ್ವನಾಥರೆಡ್ಡಿ ಮುದ್ನಾಳ ಹಾಗೂ ಅವರ ಮಗನನ್ನು ಬಿಟ್ಟು ಬಂದರೆ ಮಾತ್ರ ನಿಮಗೆ ಓಟು ಹಾಕುತ್ತೇವೆ. ಇಲ್ಲದಿದ್ದರೆ ನಮ್ಮ ಓಟು ಮತ್ತೀನ್ಯಾರಿಗೋ" ಎಂದು ಜನರ್‍ಯಾರು ಈತನ ರಾಜಕೀಯ ಸಿಟ್ಟು ಸೆಡವುಗಳಿಗೆ ಕಡವೆ ಕಾಸಿನ ಕಿಮ್ಮತ್ತು ಕೊಡುತ್ತಿಲ್ಲ. ಹಾಗಾಗಿ ಈಗ "ರಾಜಕೀಯ ಸನ್ಯಾಸವನ್ನು ಪಡೆದಿರುವೆ" ಅಂತ ಅನಿವಾರ್ಯವಾಗಿ ಹೇಳುತ್ತಿದ್ದಾನೆ.


ಆದರೆ ತನ್ನ ಸಹೋದರನ ಮಗ ಗೆದ್ದು ಬಂದ ತರುವಾಯ ತನ್ನ ದೈನಂದಿನ ಕ್ರಿಯೆಗಳಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ ರಾಜಕೀಯವನ್ನೆ ಹಾಸುಹೊದ್ದು ಬದುಕುತ್ತಿರುವ ವಿಷಯ ಎಲ್ಲರಿಗೂ ವಿಧಿತ. ಇದು ಅವರೆಲ್ಲರ ಮುಖಕ್ಕೇ ಹಲವಾರು ಜನ ಹೇಳಿದ್ದ ಉದಾಹರಣೆಗಳಿವೆ. ಮುದ್ನಾಳ ಇಂಥ ಅವ್ಯವಹಾರಿಯೂ, ಜನಸಾಮಾನ್ಯನ ಒಳತುಡಿತಗಳನ್ನು . ಅರ್ಥಮಾಡಿಕೊಳ್ಳದ ಮನುಷ್ಯನೂ ಆಗಿದ್ದಾನೆ. ಆದರೆ ವಿಪರೀತ ಸಿಟ್ಟು, ವಿಪರೀತ ಕಟ್ಟುನಿಟ್ಟಿನ ಮನುಷ್ಯ ಎಂದು ತೋರಿಸಿಕೊಳ್ಳಲು ಹಂಬಲಿಸುವ ಆತ ಬರುಬರುತ್ತ ಸಾಮಾನ್ಯ ಜನತೆಯಿಂದ ಬಹುದೂರ ನಡೆದುಹೋಗಿದ್ದಾನೆ.



ಮಲಕರೆಡ್ಡಿ


ಜನಸಾಮಾನ್ಯರಿಗೆ ಸುಂಗಲಾರದ ಕುತ್ತಾಗಿ ಪರಿಣಮಿಸಿವೆ. ಜಿಲ್ಲಾಪಂಚಾಯತಿ ಸದಸ್ಯನಾಗಿ ಬೆಂಬೆಗುಂಬಳಿಯಿಂದ ಆಯ್ಕೆಯಾದ ಶ್ರೀನಿವಾಸರೆಡ್ಡಿ, ಬೆಳಗುಂದಿ ವಿರುಪಣ್ಣ, ಶರಣಗೌಡ ಗೊಂದೆವಾಡಗಿ ಹಾಗೂ ಬಾಡಿಯಾಲದ ಶರಣಗೌಡನ ಆಟಾಟೋಪಗಳು ಹದ್ದುಮೀರಿವೆ. ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ತಾಲೂಕ್ ಪಂಚಾಯತಿ, ನಗರಸಭೆ ಹಾಗೂ ಶಾಸಕನ ಅನುದಾನದ ಹಣದಲ್ಲಿ ನಡೆಸಿದ ಲೂಟಿ, ಖೊಟ್ಟಿ ಬಿಲ್ಲುಗಳೆಲ್ಲ ನೇರ ಮುದ್ನಾಳ ಮನೆಯ ಪ್ರವೇಶ ಪಡೆದಿವೆ.

ಡಾ. ವೀರಬಸವಂತರೆಡ್ಡಿ ಮುದ್ನಾಳ ವೈಯಕ್ತಿಕವಾಗಿ ನಿಜಕ್ಕೂ ಸಭ್ಯ ಹಾಗೂ ಸರಳ ಜೀವಿ. ತನ್ನ ಹತ್ತಿರ ಕೆಲಸ ಹುಡುಕಿಕೊಂಡು ಬರುವ ಯಾರನ್ನೂ ಎಂದೂ ತುಚ್ಛೀಕರಿಸಿ ನೋಡಿದವನಲ್ಲ, ತನಗೆ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡಿಕೊಟ್ಟಿರುವಾತ. ವೈದ್ಯಕೀಯ ವೃತ್ತಿ ಓದಿ ಸಮಾಜದ ಅವಘಡಗಳಿಗೆ ಚಿಕಿತ್ಸೆ ನೀಡಬೇಕಾದ ಡಾಕ್ಟರ್ ತನ್ನ ಸಹೋದರ ಸಂಬಂಧಿಗಳ ಕಾರುಬಾರಿಗೆ ಅದೇಕೋ ಮೂಕಪ್ರೇಕ್ಷಕನಾಗಿದ್ದಾನೆ. ಈ ಮೌನ ನಡವಳಿಕೆ-ಅಸಹಾಯಕತೆಯೆ ಮುಂದಿನ ಚುನಾವಣೆಯಲ್ಲಿ ಊರುಗೋಲಾಗುವ ಸಾಧ್ಯತೆಗಳಿವೆ. ಇದೆಲ್ಲದರಿಂದ ರೋಸಿ ಹೋಗಿರುವ ಕಾರಣಕ್ಕೇ ಡಾ. ವೀರಬಸವಂತರೆಡ್ಡಿ ಈಗ ಬಿಜೆಪಿಯನ್ನು ಸೇರಿದ್ದಾನೆ ಎಂದು ಹೇಳಲಾಗುತ್ತದೆ. ಆದರೆ ಡಾಕ್ಟರಿಗೂ ಈ ಸಲ ಟಾಂಗು ಕೊಟ್ಟು ತನ್ನ ಸುಪುತ್ರ ವೆಂಕಟರೆಡ್ಡಿಯನ್ನೆ ಜೆ.ಡಿ.ಎಸ್.ದಿಂದ ಕಣಕ್ಕೆ ಇಳಿಸಬೇಕು ಎಂಬ ಇರಾದೆ ಗಡಂಗು ಇಟ್ಟುಕೊಂಡಿದೆ ಎಂದು ಹೇಳುತ್ತಾರೆ. ಇದು ಚುನಾವಣೆಯ ಸಮಯದಲ್ಲಿ ಮಾತ್ರ ಸ್ಪಷ್ಟವಾಗಲಿದೆ.



ಅಜೀಜ್ ಅಹ್ಮದ್

ಕಳೆದ ಚುನಾವಣೆಯಲ್ಲಿ ಡಾಕ್ಟರ್ ವಿರುದ್ಧ ನಿಂತು ಸೋತ ಮತ್ತೊಬ್ಬ ಡಾಕ್ಟರ್ ಎ.ಬಿ.ಮಲಕರೆಡ್ಡಿಯೂ ಯಾರಿಗೂ ಕೇಡು ಬಗೆಯದ ಸಭ್ಯ ಮನುಷ್ಯ. ಆದರೆ ಆತನ ಹೆಸರನ್ನು ಕೆಡಿಸಲು ಅವರ ಹೆಂಡತಿ ಶ್ರೀಮತಿ ಡಾಕ್ಟರ್ ಮಹಾದೇವಿ ಮಲಕರೆಡ್ಡಿ ಒಬ್ಬರೆ ಸಾಕು ಎಂದು ಜನ ಮಾತಾಡಿಕೊಳ್ಳುತ್ತಾರೆ. ಅಂದಂತೆ ಮಲಕರೆಡ್ಡಿಯ ಪ್ರತಿ ಚಟುವಟಿಕೆಗಳನ್ನು ನಿಯಂತ್ರಿಸುವ ಶಕ್ತಿ ಶ್ರೀಮತಿ ಮಲಕರೆಡ್ಡಿಗೆ ಇದೆ. ಕಾಂಗ್ರೆಸ್ ಪಕ್ಷದವರೇ ಆದ ಕೋಳೂರು ಮಲ್ಲಣ್ಣಗೌಡ, ಚೆನ್ನಾರೆಡ್ಡಿ ತುನ್ನೂರು




ಹರಿಹರ

ಸೋಲಲಿರುವ ಡಾ. ವೈ.ನಾಗಪ್ಪ

ಹರಿಹರದ ಮತದಾರರು ಒಂದು ಬಾರಿ ಗೆಲ್ಲಿಸಿದ ಅಭ್ಯರ್ಥಿಯನ್ನು ಮುಂದಿನ ಬಾರಿ ಗೆಲ್ಲಿಸುತ್ತಿರಲಿಲ್ಲ. ಆದರೆ ಮಾಜಿ ಮಂತ್ರಿ ಡಾ.ವೈ.ನಾಗಪ್ಪನಿಗೆ ಮಾತ್ರ ಇದರಿಂದ ವಿನಾಯಿತಿ ನೀಡಿ ಸತತವಾಗಿ ಎರಡು ಬಾರಿ ಗೆಲ್ಲಿಸಿದ್ದಾರೆ. ದಾವಣಗೆರೆ ಜಿಲ್ಲೆ ಹರಿಹರ ವಿಧಾನಸಭಾ ಕ್ಷೇತ್ರದಿಂದ ವೈ.ನಾಗಪ್ಪ ಒಟ್ಟು ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದಾನೆ. ನಿರಂತರವಾಗಿ ಎರಡು ಬಾರಿ ಆಯ್ಕೆಯಾಗಲು ನಾಗಪ್ಪ ಮಾಡಿದ ಲೋಕಕಲ್ಯಾಣ ಕೆಲಸಗಳಂತೂ ಕಾರಣವಾಗಿರಲಿಲ್ಲ, ಸಾದರು ಮತ್ತು ಪಂಚಮಸಾಲಿ ಲಿಂಗಾಯತರ ಮತಗಳು ಬಿಜೆಪಿ ಅಭ್ಯರ್ಥಿ ಹರೀಶ ಮತ್ತು ಜನತಾದಳದ ಅಭ್ಯರ್ಥಿ ಶಿವಪ್ಪನ ನಡುವೆ ಇಬ್ಭಾಗಗೊಂಡಿದ್ದು, ನಾಗಪ್ಪನ ಸ್ವಜಾತಿಯವರಾದ ಕುರುಬರು ಆತನಿಗೆ ಬೆಂಬಲಿಸಿದ್ದು ಮತ್ತು ಮುಸ್ಲಿಮರು ಹಾಗೂ ದಲಿತರ ಮತಗಳು ಕೂಡ ಸಿಕ್ಕಿದ್ದು ನಾಗಪ್ಪನನ್ನು ಗೆಲ್ಲಿಸಿದ್ದವು. ಆದರೂ ಮಾಜಿ ಮಂತ್ರಿ ಶಿವಪ್ಪನ ವಿರುದ್ಧ ಕೇವಲ 450 ಮತಗಳ ಅಂತರದಿಂದ ಮೂರನೇ ಬಾರಿಗೆ ಶಾಸಕನಾಗಿ ನಾಗಪ್ಪ ಗೆದ್ದು ಬಂದಿದ್ದ.

ವೈದ್ಯ ವೃತ್ತಿಗೆ ವಿದಾಯ ಹೇಳಿ ಸುಮಾರು 25-30 ವರ್ಷಗಳಿಂದಲೂ ಕಟ್ಟಾ ಕಾಂಗ್ರೆಸ್ಸಿಗನಾಗಿರುವ ನಾಗಪ್ಪ ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿದ್ದಿಲ್ಲ, ಕನಿಷ್ಠ ಮಟ್ಟದ ಸಂಭಾವಿತ ಗುಣಗಳನ್ನು ರೂಢಿಸಿಕೊಂಡಿರುವ ಈತ ಅಹಂಕಾರಿಯಲ್ಲದಿರುವುದು ಈತನ ಪ್ಲಸ್ ಪಾಯಿಂಟು. ಆದರೆ ರಾಜಕಾರಣದಲ್ಲಿ ಬರೀ ಇದಿಷ್ಟೇ ಸಾಕಾಗುವುದಿಲ್ಲವಲ್ಲ, ತನ್ನನ್ನು ಗೆಲ್ಲಿಸಿದ ಕ್ಷೇತ್ರಕ್ಕೆ ನ್ಯಾಯ ದೊರಕಿಸಿಕೊಡಬೇಕಾಗುವುದು ಆಯ್ಕೆಗೊಂಡ [illegible] ಒಬ್ಬ ಜನಪ್ರತಿನಿಧಿಯ ಜವಾಬ್ದಾರಿಯಲ್ಲವೇ? ಆದರೆ ಈ ಪ್ರಧಾನ ಜವಾಬ್ದಾರಿಯನ್ನು ತಾನು ಶಾಸಕನಾದ ಅವಧಿಯಲ್ಲಿ ನಾಗಪ್ಪ ಎಂದೂ ನಿರ್ವಹಿಸಲಿಲ್ಲ - ಅಂದರೆ ನಾಗಪ್ಪ ವೇದಿಕೆಗಳಲ್ಲಿ ರಂಗುರಂಗಾಗಿ ಪೋಸುಗಳನ್ನು ಕೊಟ್ಟನೇ ಹೊರತು ಹರಿಹರ ಕ್ಷೇತ್ರದ ಮೂಲಭೂತ ಅವಶ್ಯ ಕೆಲಸಗಳನ್ನು ಮಾಡದೇ ತನ್ನ ಪ್ರತಿಸ್ಪರ್ಧಿ ಶಿವಪ್ಪನೊಂದಿಗಿನ ರಾಜಕೀಯ ಜಿದ್ದಾಜಿದ್ದಿಯಲ್ಲೇ ಕಾಲ ಕಳೆದಿದ್ದರಿಂದ ಹರಿಹರ ಕ್ಷೇತ್ರ ಅಭಿವೃದ್ಧಿಯಾಗಲಿಲ್ಲ. ದಶಕಗಳಿಂದಲೂ ಹರಿಹರ ಕ್ಷೇತ್ರದ ಸಮಸ್ಯೆಗಳು ಹೇಗಿದ್ದವೋ ಈಗ ಅದಕ್ಕಿಂತಲೂ ಕೆಟ್ಟ ಪರಿಸ್ಥಿತಿಗೆ ಬಂದು ತಲುಪಿವೆ. ಈ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಹರಿಹರದ ಸುತ್ತಲಿನ ಹಳ್ಳಿಗಳ ಜನರು ಅನಿವಾರ್ಯವಾಗಿ ಫ್ಲೋರೈಡ್‌ಯುಕ್ತ ನೀರನ್ನು ಕುಡಿದು ಕೈಕಾಲುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ನಡುವಯಸ್ಸಿನಲ್ಲೇ ವೃದ್ಧಾಪ್ಯವನ್ನು ತಂದುಕೊಳ್ಳಬೇಕಾದ ಅನಿವಾರ್ಯಕ್ಕೊಳಗಾಗಿದ್ದಾರೆ.

ಹರಿಹರ-ದಾವಣಗೆರೆ ಮಧ್ಯದಲ್ಲಿ ಸಿಗುವ ಎರಡು ರೈಲ್ವೆ ಕ್ರಾಸಿಂಗ್‌ಗಳಿಗೆ ಮೇಲ್ಸೇತುವೆಯನ್ನು ಕಟ್ಟುವ ಕೆಲಸ 25 ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದೆ. ಕ್ಷೇತ್ರದ ಕೆಲಸವನ್ನು ಕಡೆಗಣಿಸಿ ತನ್ನ ಜನಾಂಗದವರಿಗಾದರೂ ನಾಗಪ್ಪ ಸಹಾಯ ಮಾಡಿದ್ದಾನಾ? ಎಂದು ಹುಡುಕಿದರೆ ಅದೂ ಸಿಗುವುದಿಲ್ಲ, ತಮ್ಮದೇ ಜಾತಿಯವರ ಕಾಳಿದಾಸ ವಿದ್ಯಾಸಂಸ್ಥೆಯವರು ಸರ್ಕಾರದಿಂದ ಸಿಗುವ ಸವಲತ್ತುಗಳಿಗಾಗಿ ನಾಗಪ್ಪನ ಮನೆಬಾಗಿಲಿಗೆ ಅಲೆದು ಚಪ್ಪಲಿ ಸವೆಸಿಕೊಂಡರೇ ಹೊರತು ನಾಗಪ್ಪ ಮಾತ್ರ ಅವರಿಗೆ ಗ್ರ್ಯಾಂಟ್‌ಗಳನ್ನು ಕೊಡಿಸಲಿಲ್ಲ. ಟಿ.ಸಿ.ಎಚ್., ಡಿ.ಎಡ್. ಕೋರ್ಸುಗಳು ಈ ಸಂಸ್ಥೆಯ ಬಾಗಿಲವರೆಗೂ ಬಂದು ವಾಪಾಸು ಹೋಗಿವೆ. ಹಠಕ್ಕೆ ಬಿದ್ದು ಕೆಲಸ ಮಾಡುವುದನ್ನು ತನ್ನ ಜಾಯಮಾನದಲ್ಲೆಂದೂ ರೂಢಿಸಿಕೊಳ್ಳದ ನಾಗಪ್ಪನಿಗೆ ಯೋಜನಾಬದ್ಧ ರಾಜಕೀಯ ಮಾಡುವುದು ಗೊತ್ತಿಲ್ಲ, ಆ ಕಾರಣದಿಂದಾಗಿಯೇ ಈತ ಕಾಂಗ್ರೆಸ್ ಪಕ್ಷದಲ್ಲಿ ಸೀನಿಯರ್ ಆದರೂ ಶಾಮನೂರು ಶಿವಶಂಕರಪ್ಪ ನಾಗಪ್ಪನನ್ನು ತನ್ನ ರಾಜಕೀಯ ಷಡ್ಯಂತ್ರಗಳ ಮೂಲಕ ಆಟವಾಡಿಸುವುದರಲ್ಲಿ ಸಫಲನಾಗಿದ್ದಾನೆ.




ನಾಗಪ್ಪನ ರಾಜಕೀಯ ಬೇಜವಾಬ್ದಾರಿ ವರ್ತನೆ ಹರಿಹರ ಕ್ಷೇತ್ರದ ಮೇಲೆ ಪ್ರಭಾವ ಉಂಟುಮಾಡಿದಂತೆ ಆತನ ಕುಟುಂಬದ ಮೇಲೂ ಗಾಢವಾದ ದುಷ್ಪರಿಣಾಮವನ್ನು ಬೀರಿದೆ. ನಾಗಪ್ಪನ ಒಬ್ಬ ಮಗ ಕಳೆದೆರಡು ವರ್ಷಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡ. ಇರುವ ಇನ್ನೊಬ್ಬ ಮಗ ಕೂಡ ತಂದೆಯನ್ನು ತೊರೆದು ಬೇರೆ ಹೋಗಿದ್ದಾನೆ. ಇವನು ರಾಜಕೀಯದಲ್ಲಿ ಸಕ್ರಿಯವಾಗುವುದಿರಲಿ, ಪ್ರಪಂಚದ ಪರಿವೆಯೇ ಇಲ್ಲದೆ ಬೇಜವಾಬ್ದಾರಿಯಂತೆ ಕುಣಿದು ಕುಪ್ಪಳಿಸುತ್ತಾನೆ. ಆದರೆ ನಾಗಪ್ಪನ ಅಳಿಯ ಸುರೇಶ್ ಹಾದಿಮನಿ ಎನ್ನುವವನು ಮಾತ್ರ ನಾಗಪ್ಪನ ಕುಟುಂಬವನ್ನು ಹೊಕ್ಕು ಸಂಪೂರ್ಣ ನಿಯಂತ್ರಣವನ್ನು ಪಡೆದುಕೊಂಡಿದ್ದಾನೆ.

ಅಹಂಕಾರಿಯಲ್ಲವೆಂದ ಮಾತ್ರಕ್ಕೆ ನಾಗಪ್ಪ ಸಭ್ಯ ಮತ್ತು ಶುದ್ಧ ಹಸ್ತದ ರಾಜಕಾರಣಿಯೇನಲ್ಲ, ಈತ ತನ್ನ ಕ್ಷೇತ್ರದ ಪ್ರಧಾನ ಕಾಮಗಾರಿ ಗುತ್ತಿಗೆಗಳನ್ನು ಅಳಿಯ ಸುರೇಶ್ ಹಾದಿಮನಿ ಮೂಲಕ ನಿಯಂತ್ರಿಸುತ್ತಾನೆ. ಸ್ವತಃ ಗುತ್ತಿಗೆದಾರನಾಗಿರುವ ಸುರೇಶ್ ಹಾದಿಮನಿ ಹರಿಹರದ ಪಕ್ಕದಲ್ಲಿರುವ ರಾಜಗೊಂಡರ ಕಾಲನಿಯಲ್ಲಿ ಮಾಡಿಸಿದ ಚರಂಡಿ ಕಾಮಗಾರಿಯು ಅರ್ಧಕ್ಕೇ ನಿಂತು

ಮುಂತಾದವರ ಒಳ ರಾಜಕೀಯವೂ ಮಲಕರೆಡ್ಡಿಯವರು ಸೋಲಲು ಪ್ರಮುಖ ಕಾರಣವಾಗಿತ್ತು.

ಕಳೆದ ಸಲದ ಚುನಾವಣೆಗಳಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ 22 ಸಾವಿರ ಮತಗಳನ್ನು ಪಡೆದಿದ್ದ ಎ.ಸಿ. ಕಾಡ್ಲೂರ ಹಲವಾರು ಶಿಕ್ಷಣ ಸಂಸ್ಥೆಗಳ ರೂವಾರಿ. ಈತನಿಗೂ ಗಡಂಗಿನ ಛಾಯೆ ಇದ್ದೇ ಇದೆ. "ಈ ಸಲ ಮತ್ತೆ ಸಿದ್ದಾರಾಮಯ್ಯರನ್ನು ಹಿಡಿದು ಟಿಕೇಟು ತಂದು ಸ್ಪರ್ಧಿಸುವುದು ಗ್ಯಾರಂಟಿ" ಎಂದು ಹೇಳುತ್ತಿದ್ದಾನೆ. ಆದರೆ ರೆಡ್ಡಿ ಕಮ್ಯುನಿಟಿ ಬಿಟ್ಟು ಯಾರ ರಾಜಕೀಯ ಬೆಳವಣಿಗೆಯನ್ನು ಇಷ್ಟಪಡದ ಹಾಗೂ ಅದನ್ನು ನಿಯಂತ್ರಿಸುವ 'ಗಡಂಗಿನ ರಾಜಕೀಯ'ದ ಒಳಸುಳಿಗೆ ಈತ ಬಲಿಪಶುವಾಗಬಹುದಷ್ಟೆ.


ಎ.ಸಿ. ಕಾಡ್ಲೂರ

ಗಡಂಗಿನ ಛಾಯೆಯಲ್ಲಿ ಬೆಳೆಯದೆ ತಮ್ಮ ಸ್ವತಂತ್ರ ಅಸ್ತಿತ್ವದ ಮೇಲೆ ನಿಂತಿರುವ, ಮಲ್ಲಿಕಾರ್ಜುನ ಖರ್ಗೆಯ ಕೃಪಾಶೀರ್ವಾದ ಪಡೆದಿರುವ ಕೋಳೂರು ಮಲ್ಲಣ್ಣಗೌಡ, ಅಜೀಜ ಅಹ್ಮದ ಶಹೀನಾ ಮುಂತಾದವರು ಡಾ. ಮಲಕರೆಡ್ಡಿಯನ್ನು ಓವರ್ ಟೇಕ್ ಮಾಡಿ ಮುಂದೆ ಬರಬೇಕೆಂದು ಹಂಬಲಿಸುತ್ತಿದ್ದಾರೆ. ಆದರೆ ಕೇಂದ್ರದಲ್ಲಿ ಎಂ.ವಿ.ರಾಜಶೇಖರನ್, ಆಸ್ಕರ್ ಫರ್ನಾಂಡಿಸ್, ಶಿವರಾಜ ಪಾಟೀಲ್ ಮುಂತಾದವರ ಜೊತೆ ಮಲಕರೆಡ್ಡಿ ಹೊಂದಿರುವ ಗಳಸ್ಯಕಂಠಸ್ಯ ಸಂಬಂಧದಿಂದ ಇವರ್‍ಯಾರಿಗೂ ಟಿಕೇಟು ಅಷ್ಟು ಸುಲಭವಾಗಿ ದಕ್ಕಲಾರದು.

ಬಹುಶಃ ನೇರ ಹಣಾಹಣಿ ಡಾ. ಮಲಕರೆಡ್ಡಿ ಹಾಗೂ ಡಾ. ವೀರಬಸವಂತರೆಡ್ಡಿ ನಡುವೆ ಸಂಭವಿಸಬಹುದು. ಬೈಛಾನ್ಸ್ ಗಡಂಗಿನ ಪ್ರತಿನಿಧಿಯಾಗಿ ವೆಂಕಟರೆಡ್ಡಿ ಮುದ್ನಾಳರೇನಾದರೂ ನಿಂತರೋ ಆಗ ಡಾ. ಮಲಕರೆಡ್ಡಿ ಮತ್ತೆ 'ಯಾದಗಿರಿ ಮತಕ್ಷೇತ್ರದ ಕ್ಯಾನವಾಸ್' ಮೇಲೆ ಮಿಂಚತೊಡಗುತ್ತಾರೆ.

ಒಮ್ಮೊಮ್ಮೆ ಚಂಡಮಾರುತ ಬೀಸಿದಾಗ ಎಂಥೆಂಥವೋ ಮರಗಳು, ಕಟ್ಟಡಗಳು ಉರುಳಿ ಹೋಗುತ್ತವಂತೆ. ಹಾಗೆಯೇ ಯಾದಗಿರಿಯಲ್ಲಿ ಪ್ರಸ್ತುತವಾಗಿ ಬೀಸುತ್ತಿರುವ 'ಚೆಡ್ಡಿ ಗಾಳಿ'ಯು ಡಾ. ವೀರಬಸವಂತರೆಡ್ಡಿಯನ್ನು ಮತ್ತೊಮ್ಮೆ ತೇಲಿಸಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

-ವಿಶ್ವಾರಾಧ್ಯ ಸತ್ಯಂಪೇಟೆ

ವರ್ಷಗಳೇ ಕಳೆದಿವೆ. ಈತನೇ ಕಟ್ಟಿಸಿರುವ ಇಲ್ಲಿನ ಶೌಚಾಲಯಗಳು ಕುಳಿತವರ ಮೇಲೆ ಕುಸಿದುಕೊಂಡು ಬೀಳುತ್ತಿವೆ. ಈ ಪರಿಯ ಅರ್ಧಂಬರ್ಧ ಹಾಗೂ ಕಳಪೆ ಕಾಮಗಾರಿಯ ಕೆಲಸಕ್ಕೆ ಪೂರ್ಣ ಮೊತ್ತದ ಬಿಲ್ ಮಾಡಿಸಿಕೊಂಡು ಸುರೇಶ್ ಹಾದಿಮನಿ ಎಂದೋ ಮುಣಗಿ ನೀರು ಕುಡಿದಿದ್ದಾನೆ.

ರಾಜಗೊಂಡರ ಕಾಲನಿಯ ಜನರು ನಾಗಪ್ಪನ ಬದ್ಧ ವಿರೋಧಿ ಶಿವಪ್ಪನ ಬೆಂಬಲಿಗರಾಗಿರುವುದರಿಂದ ಈ ಕಾಲನಿಗೆ ತಲುಪಬೇಕಾದ ಅನುದಾನಗಳಿಗೆ ಕಲ್ಲು ಹಾಕುವ ಕೆಲಸಗಳನ್ನು ಕೂಡ ನಾಗಪ್ಪ ಹಾಗೂ ಅಳಿಯ ಸುರೇಶ್ ಹಾದಿಮನಿ ಮಾಡುತ್ತಿದ್ದಾರೆ. ವೈಸಾಗಪ್ಪನವರ ಪತ್ನಿ ಅಧಿಕಾರಿಗಳನ್ನು ಹೆದರಿಸಿ ಹಣ ವಸೂಲಿ ಮಾಡುತ್ತಿದ್ದಾಳೆಂದು ಕಳೆದೆರಡು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ವರದಿಯಾಗಿತ್ತು! ಇದಕ್ಕೆ ಪೂರಕವೆಂಬಂತೆ ಪಿಮಾಸ್ಕ ವೈದ್ಯನಾಗಿದ್ದ ನಾಗಪ್ಪ ಶಾಸಕನಾದ ನಂತರ ಕರ್ಜರಿಜನಾಗಿ ಗಂಟುಮಾಡಿ ಕೊಂಡಿರುವ ಬಗ್ಗೆ ಶಹರದ ಜನರು ಮಾತನಾಡುತ್ತಿರುವುದರಲ್ಲಿ ಸತ್ಯ ಇಲ್ಲದಿಲ್ಲ.


ಬರಲಿರುವ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿರುವ ಜನತಾದಳದ ಶಿವಪ್ಪ ಪಾತ್ರಾನ ಮಕ್ಕಳು ಹಣದ ಥೈಲಿಯೊಂದಿಗೆ ತಯಾರಾಗಿದ್ದಾರೆ. ಕಾಡಾದ ಅಧ್ಯಕ್ಷ ಹಾಗೂ ಬಿಜೆಪಿ ಪಕ್ಷದ ಸ್ಪರ್ಧಿ ಹರೀಶ್ ಕೂಡಾ ತಾನು ದೋಚಿರುವ ದುಡ್ಡಿನ ಮೂಲಕ ಬರಲಿರುವ ಚುನಾವಣೆಯಲ್ಲಿ ನಾಗಪ್ಪನಿಗೆ ಪಾಠಕೊಡಲು ಮುಂದಾಗಿದ್ದಾನೆ. ಈ ಇಬ್ಬರೂ ವಿರೋಧಿ ಅಭ್ಯರ್ಥಿಗಳ ಹಣದ ಬಲದಿಂದಾಗಿ, ಜನಪರವಾದ ಯಾವ ಕೆಲಸವನ್ನೂ ಮಾಡದಿದ್ದುದರಿಂದಾಗಿ ಬರುವ ಚುನಾವಣೆಯಲ್ಲಿ ನಾಗಪ್ಪ ಸೋತು ಮನೆ ಸೇರುವುದು ಗ್ಯಾರಂಟಿ.

-ಚಂದ್ರಶೇಖರ ತೋರಣಘಟ್ಟ

ಏವೂರ ಮಲ್ಲಣ್ಣಗೌಡನ ರಕ್ಷಣೆಯೂ ದರ್ಶನಾಪುರ ಶರಣಬಸಪ್ಪನ ರಾಜಕೀಯವೂ

ಹಿಂದೊಂದು ಸಂದರ್ಭವಿತ್ತು. ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಏವೂರು-ಹದ್ನೂರು ಎಂಬ ಊರುಗಳಲ್ಲಿ ಹೊಡೆದಾಟ, ಬಡಿದಾಟಗಳೆಂದರೆ ಸಾಮಾನ್ಯವಾಗಿತ್ತು. ಒಮ್ಮೊಮ್ಮೆ ಇವು ಅತಿರೇಕಕ್ಕೂ ಹೋಗಿ ಕೊಲೆಗಳಲ್ಲಿ ಪರ್ಯಾವಸಾನವಾಗಿ ಬಿಡುತ್ತಿದ್ದವು. ಹೀಗಾಗಿ ಈ ಊರುಗಳಲ್ಲಿ ಕತ್ತಲು ಆವರಿಸಿಕೊಳ್ಳುತ್ತಿದ್ದಂತೆ ಭಯವೂ ದಾಂಗುಡಿಯಿಟ್ಟು ನಿಲ್ಲುತ್ತಿತ್ತು. ಈ ಕಾಳ ರಾತ್ರಿಯಲ್ಲಿ ಯಾರ ತಲೆ ಇನ್ನಾರ ಕೈಯಲ್ಲೋ? ಎಂಬ ಆತಂಕ ನೆಲೆ ಮಾಡಿತ್ತು. ಕೊಡಲಿ, ತಲವಾರ, ಜಂಬೆ, ಕವಣಿ ಕಾರಪುಡಿಯನ್ನು ಉಡಿಯಲ್ಲಿ ತುಂಬಿಕೊಂಡು ಜನ ಕೇಕೇ ಹಾಕುತ್ತ ನಿಂತುಬಿಟ್ಟರೆ ಎಂಥವನಿಗೂ ಮೈನಡುಕ ಉಂಟಾಗಿಬಿಡುತ್ತಿತ್ತು.

ಹಗಲು ಹೊತ್ತು ಏವೂರು ಎಂಬ ಸುಂದರ ಹೆಸರಿನಿಂದ ಕರೆಯಲ್ಪಡುತ್ತಿದ್ದ ಈ ಊರನ್ನು ರಾತ್ರಿಯಾಗುತ್ತಲೇ ಯಾವೂರೋ ಆಗಿಬಿಡುತ್ತದೆ ಎಂದು ಜನ ಮಾತಾಡುತ್ತಿದ್ದರು. ಹಗಲು ಜಾರುತ್ತ ಇರುಳು ಬರುತ್ತಿದ್ದಂತೆ ಬಸ್ ನಿಲ್ದಾಣದಲ್ಲಿ ನೀವು ದೀಪ ಹಚ್ಚಿ ಹುಡುಕಿದರೂ ಒಬ್ಬರೂ ಸಿಗುತ್ತಿರಲಿಲ್ಲ. ನಿಶಾಚರ ಜಗತ್ತು ಸಂಪೂರ್ಣ ಆವರಿಸಿಕೊಂಡು ಬಿಡುತ್ತಿತ್ತು. ಅಲ್ಲಲ್ಲಿ ನಿಲ್ಲುತ್ತಿದ್ದ ಪೊಲೀಸ್ ವ್ಯಾನ್‌ಗಳಲ್ಲಿ ಕುಳಿತ ಪೊಲೀಸರ ಮಾತಿನ ಸಪ್ಪಳ ಬಿಟ್ಟರೆ ಮತ್ತೊಂದೇನೂ ಕೇಳಿಸುತ್ತಿರಲಿಲ್ಲ. ಆ ಪೊಲೀಸರಾದರೋ ನಿರಾತಂಕವಾಗಿ ವ್ಯಾನ್‌ಗಳಲ್ಲಿ ಎಂದೂ ಕುಳಿತಿರುತ್ತಿರಲಿಲ್ಲ. ಅವರೂ ಸಹ ಯಾವಾಗ ಏನಾಗುತ್ತದೋ ಎಂಬ ದಿಗಿಲಿನಿಂದಲೇ ಇಡೀ ರಾತ್ರಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿ ಕಾಯುತ್ತಿದ್ದರು. ಇದು ಅಂದಿನ ಭೀಕರ ದಿನಗಳನ್ನು ಪರಿಚಯಿಸುತ್ತದೆ.


ದರ್ಶನಾಪುರ ಶರಣಬಸಪ್ಪ

ಒಂದು ಊರಿನ ಜನ ಮತ್ತೊಂದು ಊರಿನ ಜನರೊಂದಿಗೆ ಹೀಗೆ ಕಾದಾಡಲು ಏನಾದರೂ ಗುರುತರವಾದ ಕಾರಣಗಳು ಇದ್ದವೆ? ಎಂದು ಹುಡುಕಹೋದರೆ ನೀವು ಖಂಡಿತವಾಗಿಯೂ ಮೂರ್ಖರಾಗುತ್ತೀರಿ. ಯಾಕೆಂದರೆ, ಯಾವೊಂದು ಕಾರಣವಿಲ್ಲದೆ ಒಣ ಪ್ರತಿಷ್ಠೆಯೆ ಬಹುದೊಡ್ಡ ಕಾರಣವಾಗಿ ಹಲವಾರು ತಲೆಗಳು ಉರುಳಿಹೋದವು ಎಂದರೆ ಯಾರಾದರೂ ನಂಬಲು ಸಾಧ್ಯವೆ? ಆದರೆ ನೀವು ಇದನ್ನು ನಂಬಲೇಬೇಕು.

ಹಾಗೆ ನೋಡಿದರೆ ಏವೂರಿನ ಸಿದ್ದಣ್ಣಗೌಡರೂ, ಹದ್ನೂರಿನ ದೇಸಾಯಿ ಭೀಮಣ್ಣಗೌಡರೂ ಬೇರೆ ಬೇರೆಯಾಗಿರಲಿಲ್ಲ. ಇಬ್ಬರೂ ರಕ್ತ ಸಂಬಂಧಿಗಳೆ. ಆದರೆ ಅವರ ಸಂಬಂಧ ಮಧುರವಾಗಿರಲಿಲ್ಲ. ವಿವೇಚನೆ ಇಲ್ಲದ ದರ್ಪ, ಬುದ್ಧಿ ಇಲ್ಲದ ಪ್ರತಿಷ್ಠೆ ಏನೇನು ಅನಾಹುತಗಳನ್ನು ಮಾಡಬಹುದೋ ಅವೆಲ್ಲವನ್ನೂ ಇಬ್ಬರೂ ಕೂಡಿಯೆ ಮಾಡಿಕೊಂಡಿದ್ದರು. ಒಂದು ಸಲ ಏವೂರಿನ ಗ್ಯಾಂಗಿನ ಕೈ ಮೇಲಾದರೆ ಇನ್ನೊಂದು ಸಲ ಹದ್ನೂರು ದೇಸಾಯಿಯ ಗ್ಯಾಂಗಿನ ಕೈ ಮೇಲಾಗುತ್ತಿತ್ತು. ಹೊಡೆದು ಬಂದವರು ಕೇಕೇ ಹಾಕುತ್ತ ಸಿಹಿ ಹಂಚುತ್ತಿದ್ದರೆ, ಹೊಡೆಸಿಕೊಂಡವರು ಹಲ್ಲು ಮಸೆಯುತ್ತ ಸಮಯಕ್ಕೆ ಕಾಯುತ್ತಿದ್ದರು. 'ಜಾಣ ಜಾಣನಿಗೆ ಮೂರು ದಾರಿ. ಜಾಣ ಕೋಣಗಳಿಗೆ ಎರಡು ದಾರಿ. ಕೋಣ ಕೋಣಗಳಿಗೆ ಒಂದೇ ದಾರಿ' ಎಂಬಂತೆ ಕೊನೆಯ ದಾರಿಯನ್ನೇ ಈ ಎರಡು ಊರುಗಳ ಮುಖ್ಯಸ್ಥರು ಆಯ್ದುಕೊಂಡಿದ್ದರು. ಹೀಗಾಗಿ ಕದನ ಅನಿವಾರ್ಯವಾಗಿತ್ತು.


ಏವೂರ ಮಲ್ಲಣ್ಣಗೌಡ

ಇಂಥ ಮೂರ್ಖ ತೀರ್ಮಾನಗಳ ಹಿನ್ನೆಲೆಯಲ್ಲಿಯೆ ಈಗ್ಗೆ 18 ವರ್ಷಗಳ ಹಿಂದೆ - ಅಂದರೆ 1989 ಎಪ್ರಿಲ್ 22 ರಂದು - ಹದ್ನೂರಿನ ಭೀಮಣ್ಣಗೌಡ ದೇಸಾಯಿ ಮತ್ತಾತನ ಗುಂಪು ಗುಲಬರ್ಗಾ ಕೋರ್ಟಿಗೆ ಬಂದಾಗ ಅವರ ಮೇಲೆರಗಿದ ಏವೂರಿನ ಗುಂಪು ಆ ಕೋರ್ಟ ಆವರಣದಲ್ಲೇ ಭೀಮಣ್ಣಗೌಡನನ್ನು ಬರ್ಬರವಾಗಿ ಕೊಲೆ ಮಾಡಿತ್ತು. ಈ ಕೊಲೆ ಇಡೀ ಜಿಲ್ಲೆಯ ಜನ ತತ್ತರಗೊಳ್ಳುವಂತೆ ಮಾಡಿತ್ತು. ಯಾಕೆಂದರೆ ನಮ್ಮ ದೇಶದ ಸುಭಿಕ್ಷೆಯನ್ನು ಕಾಯ್ದುಕೊಂಡು ಹೋಗಬೇಕಾದ, ಎಂಥವನಿಗೂ ನ್ಯಾಯ ನೀಡಬೇಕಾದ ಕೋರ್ಟ್ ಆವರಣದಲ್ಲಿ ಹಾಡುಹಗಲೇ ಎಲ್ಲರ ಕಣ್ಣೆದುರೆ ಹೀಗೆ ಕೊಲೆ ನಡೆಯುತ್ತದೆಂದರೆ ಜಿಲ್ಲೆಯಲ್ಲಿ ಅದೆಂಥ ಅನಾರ್ಕಿ ತುಂಬಿದೆ? ಎಂದೆಲ್ಲ ಭಯಭೀತರಾಗಿ ಹೋಗಿದ್ದರು.

ಆಶ್ಚರ್ಯವೆನ್ನುವಂತೆ ಸುಮಾರು 18 ವರ್ಷಗಳಿಂದಲೂ ಕಾನೂನಿನ ಕಣ್ಣಿಗೆ ಮಣ್ಣೆರಚುತ್ತ ಬಂದು ಹೇಗೋ ಖುಲಾಸೆಯಾಗಬೇಕೆಂದಿದ್ದ ಏವೂರಿನ ಮಲ್ಲಣ್ಣಗೌಡ ಹಾಗೂ ಆತನ ಗ್ಯಾಂಗ್ ಜೇಲು ಕಂಬಿಗಳನ್ನು ಎಣಿಸಲೇಬೇಕೆಂದು ಕೊನೆಗೂ ಸುಪ್ರೀಂಕೋರ್ಟ್ ಅವರೆಲ್ಲರಿಗೆ ಜೀವಾವಧಿಯ ಶಿಕ್ಷೆಯನ್ನು ವಿಧಿಸಿದೆ.


ಆದರೆ ಇಷ್ಟು ವರ್ಷಗಳ ಸುದೀರ್ಘ ಅವಧಿಯವರೆಗೆ ಗುರುತರ ಅಪರಾಧ ಹೊಂದಿರುವ ವ್ಯಕ್ತಿ ಸಮಾಜದ ನಡುವೆ ಇದ್ದರೆ ಎಂಥ ಭಯಾನಕ ವಾತಾವರಣ ಸೃಷ್ಟಿ ಮಾಡಬಹುದು? ಅದೆಲ್ಲವನ್ನು ಮಲ್ಲಣ್ಣಗೌಡ ತನ್ನ ಸುತ್ತಮುತ್ತಲಿನ ಊರುಗಳಲ್ಲಿ ಉಂಟುಮಾಡಿದ್ದನೆಂದು ಹೇಳಲಾಗುತ್ತಿದೆ. ಚುನಾವಣೆಗಳು ಬಂದರಂತೂ ತಲವಾರಗಳನ್ನು ಝಳಪಿಸುತ್ತ ಹೊರಡುತ್ತಿದ್ದ ಇವನ ಕಾರ್ಯವೈಖರಿಗೆ ಹರಿದಾಡುವ ಹಾವೂ ಸಹ ನಿಲ್ಲುತ್ತಿತ್ತು ಎಂದು ಜನ ಮಾತನಾಡುತ್ತಾರೆ.

ಇಂಥ ವ್ಯಕ್ತಿಗಳ ಹುಡುಕಾಟದಲ್ಲಿಯೆ ಇರುವ ಗುಲಬರ್ಗಾ ಜಿಲ್ಲೆಯ ಮಾಜಿ ಉಸ್ತುವಾರಿ ಮಂತ್ರಿ ಶರಣಬಸವಪ್ಪ ದರ್ಶನಾಪುರ ಈ ಅವಕಾಶವನ್ನು ಬಿಡಲು ಸಾಧ್ಯವೆ? ಕೊಲೆ ಮಾಡಿದ ಆರೋಪದಿಂದ ಮೊದಲೇ ತತ್ತರಿಸಿ ಹೋಗಿದ್ದ ಮಲ್ಲಣ್ಣಗೌಡ ಏವೂರನನ್ನು ಆತನಿಗೆ ಗೊತ್ತಾಗದಂತೆ ತನ್ನ ರಾಜಕೀಯ ದಾಳವಾಗಿ ಬಳಸಿಕೊಂಡು ತನ್ನ ರಾಜಕೀಯ ಪ್ರಾಬಲ್ಯ ಮೆರೆಸಲು ಹೊರಟ ದರ್ಶನಾಪುರ. ಏವೂರು ಮಲ್ಲಣ್ಣಗೌಡನನ್ನು ತಾನು ಹೋದಲ್ಲಿ ಬಂದಲ್ಲಿ ತನ್ನ ಹಿಂದೆ ಇಟ್ಟುಕೊಂಡು ತಿರುಗಾಡಿದ್ದು ಸಾಲದೆಂಬಂತೆ, ಆತನನ್ನು ಸುರಪುರ ಪಿಎಲ್‌ಡಿ ಬ್ಯಾಂಕ್‌ನ ಸದಸ್ಯನನ್ನಾಗಿಯೂ ಮಾಡಿದ್ದು ಎಲ್ಲರೂ ತಲೆ ತಗ್ಗಿಸುವಂತಹ ಸಂಗತಿಯಾಗಿತ್ತು.

ದರ್ಶನಾಪುರನ ಸಾರ್ವಜನಿಕ ಕಾರ್ಯಕ್ರಮ ಹಾಗೂ ಖಾಸಗಿ ಸಮಾರಂಭಗಳಲ್ಲೂ ಏವೂರಿನ ಮಲ್ಲಣ್ಣಗೌಡ ಹಾಜರಿ ಇರುತ್ತಿದ್ದ. ಇದು ಪ್ರಜ್ಞಾವಂತರಿಗೆ, ಸಮಾಜಚಿಂತಕರಿಗೆ ದರ್ಶನಾಪುರ ಕೊಡುತ್ತಿದ್ದ ಸದರಿನ ಒಂದು ಉದಾಹರಣೆ ಎನ್ನದೆ ವಿಧಿ ಇಲ್ಲ. ಇದೆಲ್ಲವನ್ನೂ ದೂರದಿಂದ ಗಮನಿಸುತ್ತಿದ್ದ ಶಹಾಪುರ ಮತಕ್ಷೇತ್ರದ ಮತದಾರ ತಲ್ಲಣಗೊಂಡುಬಿಟ್ಟದ್ದು ಸುಳ್ಳಲ್ಲ. ಸುಪ್ರೀಂಕೋರ್ಟ್ ಇತ್ತೀಚಿನ ತನ್ನ ಐತಿಹಾಸಿಕ ತೀರ್ಪಿನಲ್ಲಿ ಏವೂರಿನ ಮಲ್ಲಣ್ಣಗೌಡನಿಗೆ ಜೀವಾವಧಿ ಶಿಕ್ಷೆ ನೀಡಿದ್ದು ಗೊತ್ತಿದ್ದರೂ ಆತನನ್ನು ಬಚಾವ್ ಮಾಡಲು ದರ್ಶನಾಪುರ ಹೊರಟದ್ದು, ಕಾನೂನಿನ ಕಣ್ಣಿಗೆ ಮಣ್ಣೆರಚ ತೊಡಗಿದ್ದು ಎಂಥವರಿಗೂ ವಾಕರಿಕೆ ಉಂಟು ಮಾಡಿತ್ತು.

ಪೊಲೀಸರು ಮಲ್ಲಣ್ಣಗೌಡನ ಶೋಧದಲ್ಲಿ ತೊಡಗಿರುವಂತೆ ಡಾಕ್ಯುಮೆಂಟ್‌ನಲ್ಲಿ ತೋರಿಸುತ್ತಿದ್ದರೆ ಇತ್ತ ಮಲ್ಲಣ್ಣಗೌಡ ದರ್ಶನಾಪುರನ ಮಗ್ಗುಲಲ್ಲಿಯೆ ರಾಜಾರೋಷವಾಗಿ ತಿರುಗಾಡುತ್ತಿದ್ದ. ಭೀಮರಾಯನ ಗುಡಿಯ ಐಬಿಯಲ್ಲಿ ದರ್ಶನಾಪುರನ ಕಾಕ ಬಸವರಾಜಪ್ಪಗೌಡನ ಮಗ ಪಪ್ಪುಗೌಡನ ಆಸರೆಯಲ್ಲಿ ಭೀಮಣ್ಣಗೌಡ ಅಡಗಿಕೊಂಡು ಕುಳಿತಿದ್ದೂ ಪಾಪ ಪೊಲೀಸ್ ಇಲಾಖೆಗೆ ಕಂಡುಬರದೇ ಮೂರು ತಿಂಗಳುಗಲೇ ಕಳೆದುಹೋದವು.

ಇತ್ತೀಚೆಗೆ ದರ್ಶನಾಪುರ ಶಹಾಪುರದ ಚರಬಸವೇಶ್ವರ ಸಂಸ್ಥೆಯಲ್ಲಿ ತನ್ನ ಕಾರ್ಯಕರ್ತರ ಸಭೆಯೊಂದನ್ನು ಕರೆದಿದ್ದ. ಈ ಸಮಾರಂಭದಲ್ಲಿ ಎಲ್ಲರ ಕಣ್ಣು ನೆಟ್ಟದ್ದು ಈ ಮಲ್ಲಣ್ಣಗೌಡ ಏವೂರ ಮೇಲೆಯೆ. ಏಕೆಂದರೆ ಪೊಲೀಸರು ಹುಡುಕಾಡುತ್ತಿದ್ದರೂ ಸಿಗದ ಈ ಮಲ್ಲಣ್ಣಗೌಡ ದರ್ಶನಾಪುರನ ಈ ಸಭೆಯ ವೇದಿಕೆಯ ಮೇಲೆ ಕುಳಿತು ಮೀಸೆ ತಿರುವುತ್ತಿದ್ದ. ಸಭೆಯ ಕೊನೆಯಲ್ಲಿ ವಂದನಾರ್ಪಣೆಯನ್ನೂ ಮಾಡಿದ. ಎಲ್ಲರಿಗೂ ಕಂಡ ಏವೂರು ಮಲ್ಲಣ್ಣಗೌಡ ಪೊಲೀಸರ ಕಣ್ಣಿಗೆ ಮಾತ್ರ ಕಾಣದೆ ಹೋದ ಚೋದ್ಯ ಎಂಥವರನ್ನೂ ಬೆರಗುಗೊಳಿಸುತ್ತದೆ.


[illegible]

ಅದೇನೆ ಇರಲಿ. ಕೊನೆಗೂ ಏವೂರಿನ ಮಲ್ಲಣ್ಣಗೌಡ ಈಗ ಜೇಲಿನ ಕಂಬಿಗಳ ಹಿಂದೆ ತನ್ನ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ. ಅತ ಹೊರಬರುವಾಗ ಮತ್ತೆ [illegible]

-[illegible]

ಹುಡುಗಿಯರೇ ಹುಷಾರ್!!

ಮುಖ್ಯ ನ್ಯಾಯಮೂರ್ತಿಗಳಿದ್ದಾರೆ

ನ್ಯಾಯಾಧೀಶರು ಹಾಗೂ ನ್ಯಾಯಮೂರ್ತಿಗಳೆಂದರೆ ನಮ್ಮ ದೇಶದಲ್ಲಿ ದೇವರುಗಳಿದ್ದಂತೆ. ನೊಂದವರಿಗೆ, ಅನ್ಯಾಯಕ್ಕೊಳಗಾದವರಿಗೆ, ತುಳಿತಕ್ಕೊಳಗಾದವರಿಗೆ ಅವರೇ ಕಡೆಯ ಭರವಸೆಯ ಬೆಳಕು. ಅವರಿಗೆ ಅಪಾರವಾದ ಅಧಿಕಾರವಿದೆ. ಅವರು ಏನು ಬೇಕಾದರೂ ಮಾಡಬಹುದು etc, etc.

ಆದರೆ ಒಂದು ಆಶ್ಚರ್ಯಕರ ಸಂಗತಿ ಗೊತ್ತೆ! ನಮ್ಮ ನ್ಯಾಯಮೂರ್ತಿಗಳು, ಈ ದೇಶದಲ್ಲಿ ನಡೆಯುವ ಪ್ರತಿಯೊಂದು ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ ಹಾಗೂ ಎಲ್ಲ ಬಗೆಯ ಅಪರಾಧಗಳಿಗೆ ಮೂಲವಾದ ಕಾರಣವನ್ನು ಕಂಡುಹಿಡಿದಿದ್ದಾರೆ. ಆ ಕಾರಣವನ್ನು ಪರಿಣಾಮಕಾರಿಯಾಗಿ ನಿಭಾಯಿಸಿದ್ದೇ ಆದಲ್ಲಿ ನಮ್ಮ ದೇಶದಲ್ಲಿನ ಜಲವಿವಾದಗಳು, ಗಡಿ ವಿವಾದಗಳು, ಬಹುರಾಷ್ಟ್ರ ಕಂಪನಿಗಳಿಂದ ಬಡರೈತನ ಮೇಲಾಗುತ್ತಿರುವ ಪ್ರಹಾರ, ನಕ್ಸಲ್ ಹಾವಳಿ, ಸಾಲದ ಬಾಧೆ ತಾಳದ ಬಡರೈತನ ಆತ್ಮಹತ್ಯೆ, ವರದಕ್ಷಿಣೆ ಸಾವು ಮುಂತಾದ ಎಲ್ಲ ಸಮಸ್ಯೆಗಳನ್ನು ಬೇರು ಸಮೇತ ಕಿತ್ತು ಹಾಕಬಹುದು.

ಅದಕ್ಕೆ ಪರಿಹಾರ ಇಷ್ಟೆ! "ಹುಡುಗಿಯರು ಸಭ್ಯತೆ(?)ಯಿಂದ ಬಟ್ಟೆ ಹಾಕಿಕೊಳ್ಳುವುದನ್ನು ಕಲಿಯಬೇಕು."

ಇದೇನು ಸ್ವಾಮಿ "ಇಮಾಮ್‌ಸಾಬಿಗೂ ಗೋಕುಲಾಷ್ಟಮಿಗೂ ಎಲ್ಲಿಂದ ಸಂಬಂಧ" ಎಂದು ನೀವು ಕೇಳುವಂತಿಲ್ಲ. ಏಕೆಂದರೆ ಹೀಗೆ ಹೇಳಿದವರು ನಮ್ಮ ನಿಮ್ಮಂತೆ ಸಾಮಾನ್ಯ ಜನರಲ್ಲ, ಕರ್ನಾಟಕದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಮಾನ್ಯ ಸಿರಿಯಾಕ್ ಜೋಸೆಫ್‌ರವರು. ಫೆಬ್ರವರಿ 8ರಂದು ಕಾನೂನಿಗೆ ಸಂಬಂಧಿಸಿದ ಜರ್ನಲ್ ಹಾಗೂ ಪತ್ರಿಕೆಯೊಂದನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಈ ಮಾತುಗಳನ್ನಾಡಿದ್ದಾರೆ.

"ಜನಸಾಮಾನ್ಯರ ಸುರಕ್ಷತೆಯ ದೃಷ್ಟಿಯಿಂದ ಹೆಂಗಸರು ಸಭ್ಯವಾಗಿ ಬಟ್ಟೆ ತೊಡಬೇಕು. ಇತ್ತೀಚೆಗೆ ಹೆಂಗಸರು, ದೇವಸ್ಥಾನ ಹಾಗೂ ಚರ್ಚ್‌ಗಳಲ್ಲಿ ಕೂಡ ಎಂತಹ ಬಟ್ಟೆ ಹಾಕುತ್ತಾರೆಂದರೆ, ದೇವರನ್ನು ಪ್ರಾರ್ಥಿಸಲು ಹೋದ ನಾವು ದೇವರ ಬದಲು ಇವರನ್ನು ಧ್ಯಾನಿಸುವಂತಾಗುತ್ತದೆ. ಬಸ್‌ಗಳಲ್ಲಿ ತಿರುಗಾಡುವಾಗ ಹುಡುಗಿಯರು ಹಾಕಿಕೊಳ್ಳುವ ಉದ್ರೇಕಿಸುವ ಬಟ್ಟೆಗಳಿಂದಾಗಿ ಬಸ್‌ಗಳಲ್ಲಿ ತಿರುಗಾಡುವ ಪುರುಷ ಪ್ರಯಾಣಿಕರಿಗೆ ಇರುಸುಮುರುಸಾಗುತ್ತದೆ. ಆದ್ದರಿಂದ ಹೆಂಗಸರು ಸಭ್ಯವಾಗಿ ಬಟ್ಟೆ ಹಾಕಿಕೊಳ್ಳಬೇಕು" ಎಂದು ಅವರು ಮಹಿಳೆಯರಿಗೆ ಸಲಹೆ ನೀಡಿದ್ದಾರೆ.

ಇಷ್ಟಕ್ಕೇ ಮುಗಿಯುವುದಿಲ್ಲ ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಮಾತು, ಈ ಸಮಸ್ಯೆಯ ವಿರುದ್ಧ ಸಮರವನ್ನೇ ಸಾರುತ್ತಾರೆ! ಈ ಸಮಸ್ಯೆಯನ್ನು ಪ್ರಮುಖವಾಗಿ ಬೆಳಕಿಗೆ ತರುವಂತೆ ಎಲ್ಲ ಮಾಧ್ಯಮದವರಿಗೆ ಕರೆ ನೀಡುತ್ತಾರೆ ಹಾಗೂ ಈ ನಿಟ್ಟಿನಲ್ಲಿ ರಚನಾತ್ಮಕ ಪಾತ್ರ(?) ವಹಿಸುವಂತೆ ಮಾಧ್ಯಮದವರಿಗೆ ಸೂಚಿಸುತ್ತಾರೆ.

ಇಂತಹ ಒಂದು ಬುಡವೇ ಇಲ್ಲದ ವಾದವನ್ನು ಕೇಳಿದಾಗ ಇದು ಚಿಡ್ಡಿಗಳ ಯಾವ ಬಣ್ಣ ಎಂದು ಸಂದೇಹ ಪಡುವಂತಿದೆ.

ಇಂತಹ ಒಂದು ಸುದ್ದಿ ಅಸಮಾಧಾನ, ಅಸಹ್ಯಗಳನ್ನು ಹುಟ್ಟಿಸಿದರೆ ಕಾಕತಾಳೀಯ ಎನ್ನುವಂತೆ ಅದೇ ದಿನ ಇನ್ನೊಂದು ಪತ್ರಿಕೆಯ ಮುಖಪುಟದಲ್ಲಿ ರಾಜ್ಯ ಮಾನವಹಕ್ಕುಗಳ ಆಯೋಗದ ಮುಖ್ಯಸ್ಥರಾದ ನ್ಯಾಯಮೂರ್ತಿ ಎಸ್.ಆರ್. ನಾಯಕ್ ಹೊಸ ವರ್ಷದ ಸಂದರ್ಭದಲ್ಲಿ ಮುಂಬೈನಲ್ಲಿ ನಡೆದ ಮಹಿಳೆಯರಿಬ್ಬರ ಮೇಲಿನ ಹಲ್ಲೆಯನ್ನು ವಿವರಿಸುತ್ತ ಆ ಮಹಿಳೆಯರು ಆ ದಿನ ಹೊರಗೆ ಹೋಗಿದ್ದರಿಂದಲೇ ಇಷ್ಟೆಲ್ಲ ಆದದ್ದು "ಅವರಿಗ್ಯಾರು ಹೋಗಲು ಹೇಳಿದ್ದರು" ಎಂದು ಹೇಳುವ ಮೂಲಕ ತಮ್ಮ ರಕ್ಷಣೆಯನ್ನು ಕೊನೆಗೆ ನ್ಯಾಯಾಲಯಗಳಾದರೂ ಮಾಡಬಹುದು ಎಂಬ ಭರವಸೆಯನ್ನು ಇಟ್ಟುಕೊಂಡಿರುವ ಲಕ್ಷಾಂತರ ಮಹಿಳೆಯರ ಹೊಟ್ಟೆಯಲ್ಲಿ ಭಯದ ತಣ್ಣಗಿನ ಗಾಳಿ ಹುಟ್ಟುವ ಹಾಗೆ ಮಾಡಿದ್ದಾರೆ.

ಇದೆಲ್ಲ ಏನು ನಡೆಯುತ್ತಿದೆ ಎಂದು ವಿಚಾರಿಸಿ ವಿಮರ್ಶಿಸಲೂ ಆಗದಷ್ಟು ಶೀಘ್ರಗತಿಯಲ್ಲಿ ಈ ಹೊಸ ಸೂತ್ರದ ಹರಿಕಾರರು ತಮ್ಮ ಅಸಂಬದ್ಧ ವಾದಗಳನ್ನು ಮಂಡಿಸುತ್ತಿದ್ದಾರೆ.



ಮುಖ್ಯ ನ್ಯಾಯಮೂರ್ತಿ
ಸಿರಿಯಾಕ್ ಜೋಸೆಫ್

ಇದೆಲ್ಲಕ್ಕೂ ಮೀರಿದ ಆಶ್ಚರ್ಯಕರ ಸಂಗತಿ ಎಂದರೆ ಮಹಿಳಾ ಆಯೋಗಗಳಾಗಲಿ, ಯಾವುದೇ ಮಹಿಳಾ ಸಂಘಟನೆಗಳಾಗಲೀ ಇದನ್ನು ತೀವ್ರವಾಗಿ ಖಂಡಿಸದೇ ಇದ್ದದ್ದು. ಈ ಹೊಸ ಮೂಲಭೂತವಾದದ ಹರಿಕಾರರ ಅಸಹನೆಯ ಮಟ್ಟ ಹೆಚ್ಚಾಗಿದೆಯೋ, ಇಲ್ಲ ಈ ಮಹಿಳಾ ಸಂಘಟನೆಗಳ ಸಹನೆ ಹೆಚ್ಚಾಗಿದೆಯೋ ಗೊತ್ತಿಲ್ಲ.

ನ್ಯಾಯಾಧೀಶರುಗಳ ತೀರ್ಪುಗಳು, ಅವರ ನ್ಯಾಯದಾನದ ಪದ್ಧತಿ, ಅವರು ಕೊಡುವ ಕಾರಣಗಳು ಎಲ್ಲವೂ ಜನರ ಟೀಕೆಗಳಿಂದ ಮುಕ್ತವಾಗಿವೆ ಎನ್ನುವಂಥ ವಾತಾವರಣ ನಿರ್ಮಾಣ ಆಗಿರುವುದೇ ಇದಕ್ಕೆ ಕಾರಣವೇ? ಅಥವಾ "ನ್ಯಾಯಾಂಗ ನಿಂದನೆ" ಬಗ್ಗೆ ಜನರಿಗೆ ಇರುವ ತಪ್ಪು ಕಲ್ಪನೆಗಳು ಇದಕ್ಕೆ ಕಾರಣವೆ? ಹಾಗೆಂದಮಾತ್ರಕ್ಕೆ ನ್ಯಾಯಾಂಗವನ್ನು ಪ್ರತಿನಿಧಿಸುವ ಈ ನ್ಯಾಯಾಧೀಶರುಗಳ ಸಮೂಹ ಮಾತನಾಡಿದ್ದೆಲ್ಲವನ್ನೂ ಮರುಮಾತಿಲ್ಲದೆ ಒಪ್ಪಿಕೊಳ್ಳಬೇಕೇ?

ಮಾಧ್ಯಮಗಳಿಗೆ ಕರೆ ನೀಡಿ "ಹೆಂಗಸರು ಧರಿಸುವ ಬಟ್ಟೆಗಳೇ ಅವರ ಮೇಲಿನ ದೌರ್ಜನ್ಯಕ್ಕೆ ಕಾರಣ" ಎಂಬುದನ್ನು ರಚನಾತ್ಮಕವಾಗಿ ಬಿಂಬಿಸಲು ಕರೆ ನೀಡಿದ ನ್ಯಾಯಾಧೀಶರ ವೈಯಕ್ತಿಕ ಅಭಿಪ್ರಾಯವನ್ನು, ಯಾವುದೇ ವಿಮರ್ಶೆ ಇಲ್ಲದೆ ಬರೆದು ಪ್ರಕಟಿಸಿದ ಪತ್ರಿಕೆಗಳು ಇನ್ನು ಅದ್ಯಾವ ಮಹಾನ್ ಕಾರ್ಯಗಳನ್ನು ಸಾಧಿಸಲು ಮುಂದಾಗುತ್ತದೆ ಎಂಬುದನ್ನು ಆ ದೇವರೇ ಹೇಳಬೇಕು.

ಮಾನ್ಯ ಮುಖ್ಯ ನ್ಯಾಯಾಧೀಶರ ಗಮನಕ್ಕೆ ಕೆಲವು ಅಂಶಗಳನ್ನು ತರುವ ಮೂಲಕ ಅವರ ಅಭಿಪ್ರಾಯಕ್ಕೆ ವಿವರಣೆ ಕೇಳಬಯಸುತ್ತೇನೆ.

1. ಇದುವರೆಗೂ ನಡೆದಿರುವ ಮಹಿಳೆಯರ ಮೇಲಿನ ಆಸಿಡ್ ದಾಳಿಯಲ್ಲಿ ಸತ್ತುಹೋದ ಅಥವಾ ಗಾಯಗೊಂಡವರೆಲ್ಲ ಮಧ್ಯಮ ಅಥವಾ ಕೆಳ ಮಧ್ಯಮ ವರ್ಗದವರು ಹಾಗೂ ಸಭ್ಯವಾಗಿಯೇ ಬಟ್ಟೆ ಧರಿಸಿದವರು.
2. ಹೆಚ್ಚುತ್ತಿರುವ ದರೋಡೆ ಪ್ರಕರಣದಲ್ಲಿ ಸಿಕ್ಕು ಹತರಾದ ಮಹಿಳೆಯರೆಲ್ಲ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಗೃಹಿಣಿಯರು ಅಥವಾ ವೃದ್ಧೆಯರು.
3. ವಿಕೃತ ಮನಸ್ಸಿನ ವ್ಯಕ್ತಿಗಳ ಅತ್ಯಾಚಾರಕ್ಕೆ ಒಳಗಾದ ಬಹುತೇಕ ಹುಡುಗಿಯರು ಸಭ್ಯ ಅಸಭ್ಯದ ನಡುವಿನ ಅಂತರವೂ ತಿಳಿಯದ ಮಕ್ಕಳು.
4. ವರದಕ್ಷಿಣೆ ಕಿರುಕುಳ ತಾಳದೆ ಆತ್ಮಹತ್ಯೆ ಮಾಡಿಕೊಂಡ ಇಲ್ಲವೆ ಕೊಲೆಯಾದವರೆಲ್ಲ ಸಭ್ಯವಾಗಿಯೇ ಬಟ್ಟೆ ಧರಿಸಿದವರು.

ಇವರೆಲ್ಲರನ್ನೂ ತಮ್ಮ ಈ ಅದ್ಭುತ ವಾದದ ಪರಿಧಿಗೆ ತಂದು ಅದ್ಹೇಗೆ ಅದನ್ನು ಸಮರ್ಥಿಸಿಕೊಳ್ಳುತ್ತಾರೆ ಎಂಬುದನ್ನು ಸ್ವಲ್ಪ ವಿವರಿಸಿಬಿಟ್ಟರೆ ಈ ನೊಂದ ಮಹಿಳೆಯರು ತಮ್ಮ ಅಹವಾಲನ್ನು ತೆಗೆದುಕೊಂಡು ಈ ನ್ಯಾಯಮೂರ್ತಿಗಳ ಅಥವಾ ಇವರು ಪ್ರತಿನಿಧಿಸುವ ಬಹುತೇಕ ನ್ಯಾಯಾಧೀಶರುಗಳ ಎದುರು ಹೋಗುವುದೋ ಬಿಡುವುದೋ ಎಂದು ನಿರ್ಧರಿಸುವಲ್ಲಿ ಸಹಾಯವಾಗುತ್ತದೆ. ಅಪರಾಧವನ್ನು ನಿರ್ಧರಿಸುವುದಕ್ಕಿಂತ ಮೊದಲೇ ಅಪರಾಧಿ ಯಾರೆಂದು ಇವರುಗಳು ನಿರ್ಧರಿಸಿರುವುದರಿಂದ ಮುಂದೆ ವಿಚಾರಣೆಯ ಅಗತ್ಯ ಇದೆಯೇ ಎಂಬುದು ಕೆಲವು ಮಹಿಳೆಯರನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ.

ಮುಖ್ಯ ನ್ಯಾಯಾಧೀಶರ ಈ ಹೇಳಿಕೆ ಎಂತಹ ಪರಿಸ್ಥಿತಿಯನ್ನು ಹುಟ್ಟು ಹಾಕಬಹುದು ಎಂಬುದನ್ನು ನೆನೆಸಿಕೊಂಡರೇ ಭಯವಾಗುತ್ತದೆ.

ಕೇವಲ ನಟಿಯೊಬ್ಬಳು ತನ್ನ ವೈಯಕ್ತಿಕ ಅಭಿಪ್ರಾಯವನ್ನು ವಿವಾಹಪೂರ್ವ ಲೈಂಗಿಕ ಸಂಬಂಧದ ಬಗ್ಗೆ ವ್ಯಕ್ತಪಡಿಸಿದ್ದಕ್ಕೆ ಅವಳನ್ನು ರಾಜ್ಯಾದ್ಯಂತ ವಿರೋಧಿಸಿ ಸಾರ್ವಜನಿಕವಾಗಿ ಕ್ಷಮೆ ಕೇಳುವ ಹಾಗೆ ಮಾಡಿದ ವ್ಯಕ್ತಿಗಳು,' ಕ್ರೀಡೆಯ ಅಂಗಣದಲ್ಲಿ ಸಾನಿಯಾಳ ಆಟಕ್ಕಿಂತ ಸ್ಕರ್ಟನ್ನೇ ನೋಡಿದ ವ್ಯಕ್ತಿಗಳು ಹಾಗೂ ಕಾಲೇಜುಗಳಲ್ಲಿ ಹುಡುಗಿಯರ ಬಟ್ಟೆ ಮೇಲೆ ನಿರ್ಬಂಧ ಹೇರುವ ವ್ಯಕ್ತಿಗಳು ಇರುವ ಈ ದೇಶದ ಒಬ್ಬ ಮುಖ್ಯ ನ್ಯಾಯಾಧೀಶರಿಗೆ ಸಕಲ ತೊಂದರೆಗಳಿಗೂ ಈ ಹುಡುಗಿಯರ ಬಟ್ಟೆಯೇ ಮೂಲಕಾರಣವಾಗಿ ಕಂಡದ್ದು ಆಶ್ಚರ್ಯವೇನಲ್ಲ.

ಒಂದು ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯಕ್ತಿಗಳು ಕೇವಲ ಒಂದು ಸಮೂಹದ ಪ್ರತಿನಿಧಿಗಳಂತೆ ಮಾತನಾಡಲು ಶುರು ಮಾಡಿದರೆ ಇನ್ನೊಂದು ಸಮೂಹದ ವಿಶ್ವಾಸ ಹಾಗೂ ನಂಬಿಕೆಯನ್ನು ಅವರು ಹೇಗೆ ಗಳಿಸಲು ಸಾಧ್ಯ?

ನ್ಯಾಯಾಂಗದ ಮುಖ್ಯಸ್ಥರೊಬ್ಬರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಇಡೀ ನ್ಯಾಯಾಂಗ ಸಮುದಾಯದ ಅಭಿಪ್ರಾಯ ಎನ್ನುವಂತೆ ಬಿಂಬಿಸಿದರೆ ಅದನ್ನು ಕಣ್ಣು ಮುಚ್ಚಿ ನಂಬುವ ಜನರಿಗೇನು ಕಮ್ಮಿ ಇಲ್ಲ. ಇದೆಲ್ಲ ಹೇಗಿದೆ ಎಂದರೆ ತನ್ನೆಲ್ಲ ದುಸ್ಥಿತಿಗೆ ಹಾಗೂ ತನ್ನ ಮೇಲಿನ ದಬ್ಬಾಳಿಕೆಗೆ ಹೆಂಗಸನ್ನೇ ನೇರ ಕಾರಣ ಮಾಡಿ, ವಿಚಾರಣೆ ಇಲ್ಲದೆ, ಎಲ್ಲ ಅಪರಾಧಗಳಿಗೆ ಅವಳನ್ನೇ ದೂಷಿಸಿ ನಿಧಾನವಾಗಿ ಅದನ್ನು ಅಲ್ಲಗಳೆಯುವ ಜವಾಬ್ದಾರಿಯನ್ನು ಅವಳ ಮೇಲೆಯೇ ಹೇರಿ ವಿಚಾರಣೆ ಹಾಗೂ ತೀರ್ಪು ನೀಡುವಂತಹ ಜವಾಬ್ದಾರಿಯಿಂದ ಪಾರಾಗುವ ಹುನ್ನಾರದಂತೆ ಕಾಣುತ್ತದೆ.


ಅತ್ತೆ ಸೊಸೆಯರ ಪರಸ್ಪರ ಕುತಂತ್ರಗಳ ಕಥೆ, ಪ್ರೀತಿಯ ಹೆಸರಿನಲ್ಲಿ ಹಾದರ, ಇವನ್ನೇ ವೈಭವೀಕರಿಸಿ, ಹುಡುಗಿಯ ಕೊಬ್ಬು ಮುರಿಯಲು ಅವಳನ್ನು ಬಲಾತ್ಕಾರ ಮಾಡಬೇಕು ಎಂಬುದನ್ನು ತೋರಿಸುವ ಮಾಧ್ಯಮಗಳು, ನ್ಯಾಯಾಂಗ ನಿಂದನೆಗೆ ಹೆದರಿ ರಚನಾತ್ಮಕ ವಿಮರ್ಶೆಯನ್ನೇ ಮಾಡದ ಮಾಧ್ಯಮಗಳಿಗೆ ಮುಖ್ಯ ನ್ಯಾಯಾಧೀಶರು ನೀಡುವ ಕರೆಗೆ, ಇಡೀ ಮಹಿಳಾ ಸಮುದಾಯ ಅದ್ಹೇಗೆ ಪ್ರತಿಕ್ರಿಯಿಸದೇ ಕುಳಿತಿದೆ ಎಂಬುದು ನಿಜಕ್ಕೂ ಆಶ್ಚರ್ಯ.

ಕೆಲವು ತಿಂಗಳ ಹಿಂದೆ 'ಔಟ್‌ಲುಕ್' ಪತ್ರಿಕೆಯಲ್ಲಿ ನ್ಯಾಯಾಂಗದ ಕಾರ್ಯವೈಖರಿಯನ್ನು ವಿವರಿಸುತ್ತ ಅರುಂಧತಿ ರಾಯ್ ನ್ಯಾಯಾಂಗ ಈ ಮಟ್ಟಕ್ಕೇ ಬೆಳೆಯಲು ಕಾರಣಗಳನ್ನು ವಿವರಿಸುತ್ತ "ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಉಗಮವೇ ಇದಕ್ಕೆ ಕಾರಣ" ಎನ್ನುತ್ತಾರೆ. ನಿಜಕ್ಕೂ ಈಗಿನ ಪರಿಸ್ಥಿತಿ ಹೇಗೆ ಆಗಿದೆ ಎಂದರೆ "ನಾವೇ ಹೆದರಿಸಲು ಒಂದು ಭೂತವನ್ನು ಹುಟ್ಟು ಹಾಕಿ ಈಗ ಆ ಭೂತಕ್ಕೆ ಹೆದರುತ್ತ ಬದುಕುವಂತಾಗಿದೆ."

ದೇವಸ್ಥಾನಗಳಲ್ಲಿ, ಚರ್ಚುಗಳಲ್ಲಿ ಪ್ರಾರ್ಥನೆ ಮಾಡುವಾಗ ದೇವರಿಗಿಂತಲೂ ಹೆಚ್ಚಾಗಿ, ಭಕ್ತಿಗಿಂತಲೂ ಪ್ರಮುಖವಾಗಿ ಕಾಡಿದ ಅಪರಾಧಕ್ಕಾಗಿ ಆ ಸುಂದರ ಹುಡುಗಿಯರ ಪರವಾಗಿ ಆ ಏಸು ಪ್ರಭುವೇ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮಾನ್ಯ ಸಿರಿಯಾಕ್ ಜೋಸೆಫ್‌ರನ್ನು ಕ್ಷಮಿಸಲಿ.

–ರಾಜಲಕ್ಷ್ಮಿ ಅಂಕಲಗಿ

ಕಣ್ಣುಗಳ ಕೆಂಪು



ಚಿಕ್ಕ ಶ್ಯಾನುಭೋಗ ನಾಗನ್ನನ ಕಡೆಯೇ ನೋಡ್ತಿದ್ದ. ನಾಗನ್ನ ಏನೂ ಮಾತನಾಡದೇ ಇರೋದು ಅಚ್ಚರೆಡ್ಡಿಗಂತೂ ದ್ವೇಷ ಉರಿಸ್ತಾ ಇತ್ತು. ಈ ಚಿಲ್ಲರೆ ಜನ ಇಷ್ಟು ನೀಟಾಗಿ ಮಾತನಾಡೋದೇ ತಪ್ಪು ಎಂಬುದು ಅಚ್ಚರೆಡ್ಡಿಯಂಥವರ ಗಟ್ಟಿ ಅಭಿಪ್ರಾಯ. ಅದು ಈಗ ಅವನ ಬಾಯಿಂದ ಕೆಟ್ಟ ಬೈಗುಳದ ರೂಪದಲ್ಲಿ ಆಚೆ ಬರ್ತಿದೆ. ಶ್ಯಾನುಭೋಗ ಇದನ್ನೆಲ್ಲಾ ಗಮನಿಸ್ತಾಲೇ ಇದ್ದ. ಅವನು ಮುಖ್ಯವಾಗಿ ಗಮನಿಸ್ತಾ ಇದ್ದದ್ದು ಅಚ್ಚರೆಡ್ಡಿ ಅಥವಾ ಅವನ ಅಸಹ್ಯ ಹುಟ್ಟಿಸೋ ಮಾತುಗಳನ್ನಲ್ಲ. ಅವನು ಹಾಗೆ ಮಾತನಾಡ್ತಾ ಇದ್ದರೆ ಪಿಟ್ಟೋನ ಕಣ್ಣುಗಳಲ್ಲಿ ಕಾಣುವ ಕೆಂಪನ್ನ ಗಮನಿಸ್ತಾಲೇ ಇದ್ದ. ಅಸಹನೆಯಿಂದ ಹಾಗೂ ಹೀಗೂ ಕದಲಾಡೋ ಪೋಲಯ್ಯನನ್ನ ಅರ್ಥಮಾಡಿಕೊಳ್ತಾ ಇದ್ದ. ಆ ಎಲ್ಲರ ಭಾವನೆಗಳು ಅವನಿಗೆ ಅರ್ಥವಾದವು. ಅವುಗಳನ್ನೆಲ್ಲಾ ತನ್ನ ಲೆಕ್ಕಾಚಾರದ ತಲೆಯಲ್ಲಿ ತುಂಬಿಕೊಂಡ. ಕೂಡು, ಕಳೆ ಮಾಡಿ ತನ್ನ ತಂದೆಯ ಸಾವೂ ಆ ಲೆಕ್ಕದಲ್ಲಿ ಒಂದಾಗಿ ಅದಕ್ಕೆ ಅಚ್ಚರೆಡ್ಡಿಯ ವರ್ತನೆಯೂ ಸೇರಿಕೊಂಡಿತು.

ಆ ದಿಬ್ಬದ ಭೂಮಿ ಹಟ್ಟಿಯ ಜನರ ಕೈಗೆ ಹೋಗೋದೇ ತನಗೆ ಒಳ್ಳೇದು ಅಂತ ಆ ಲೆಕ್ಕಾಚಾರದ ಕೊನೆಗೆ ಉತ್ತರ ಸಿಕ್ಕಿತು. ಇದು ಯಾವುದೋ ಒಂದು ಕಾಲದ ಜಾಣತನವಲ್ಲ. ವಿಭಜಿಸಿ ಪಾಲಿಸು ಅನ್ನೋದು ಬಿಳಿಯರು ಹೊಸದಾಗಿ ಕಂಡುಹಿಡಿದ ತಂತ್ರವಲ್ಲ. ಈ ನೆಲದಲ್ಲಿ ಇದ್ದದ್ದನ್ನೇ ಅವರು ಚೆನ್ನಾಗಿ ಬಳಸಿದರು ಅಷ್ಟೇ.

ದೊಡ್ಡ ಶ್ಯಾನುಭೋಗ ಹೊಲೆಯರನ್ನ, ಮಾದಿಗರನ್ನ ಬೇರೆ ಬೇರೆ ಮಾಡಿದ್ದ. ಅವರು ಒಂದಾಗದ ರೀತಿಯಲ್ಲಿ ತಮಗೆ ಬೇಕಾದ ಹಾಗೆ ಶಾಸ್ತ್ರ ಪ್ರಕಾರ ಕಟ್ಟಳೆಗಳನ್ನ ಮಾಡಿದ್ದ. ಆಗ ಈ ಅಚ್ಚರೆಡ್ಡಿಗಳು ಶ್ಯಾನುಭೋಗರ ಮಟ್ಟಕ್ಕೆ ಇನ್ನೂ ಬಂದಿರಲಿಲ್ಲ. "ನೀನು ಇಷ್ಟು ಮಾಡಿಕೋ ಹೋಗು" ಅಂತ ಒಂದು ಗೆರೆ ಹಾಕಿ ಕೊಟ್ಟರೆ ಅದನ್ನೇ ಮಹಾ ಪ್ರಸಾದ ಅಂತ ತೆಗೆದುಕೊಂಡು ಹೋಗಿ ಅಷ್ಟೇ ಜಮೀನನ್ನ ಉಳುಮೆ ಮಾಡಿಕೊಂಡಿದ್ದರವರು. ಈಗ ಚಿಕ್ಕ ಶ್ಯಾನುಭೋಗನ ಕಾಲದಲ್ಲಿ ಈ ಅಚ್ಚರೆಡ್ಡಿಗಳು ಎಚ್ಚೆತ್ತುಕೊಂಡಿದ್ದಾರೆ. ಶ್ಯಾನುಭೋಗರು ಕೊಟ್ಟಷ್ಟು ಉಳುಮೆ ಮಾಡಿಕೊಂಡು ಸುಮ್ಮನೆ ಇರೋ ಕಾಲ ಮುಗೀತು. ಹಿಂದೆ 'ಏನ್ ಅಯ್ಯನೋರೇ, ಏನ್ ಮಾಡೋಣ' ಅಂತ ಸಲಹೆ ಕೇಳೋದಕ್ಕೆ ಬರ್ತಿದ್ದ ಬುಕ್ಕ ರೆಡ್ಡಿ 'ಅದೇ ನಾನಾಗಿದ್ರೆ!' ಅನ್ನೋ ಮಟ್ಟಕ್ಕೆ ಬಂದಿದ್ದಾನೆ. ಈಗ ಚಿಕ್ಕ ಶ್ಯಾನುಭೋಗ ಚದುರಂಗದಲ್ಲಿ ಕಾಯಿಗಳನ್ನ ಹೊಸರೀತಿಯಲ್ಲಿ ನಡೆಸ ಬೇಕಾಗಿದೆ.

ಅದಕ್ಕೆ 'ನೀನು ಅಚ್ಚರೆಡ್ಡಿಗೆ ಒಂದು ಮಾತು ಹೇಳಬೇಕಾಗಿತ್ತು' ಅಂತ ಸುಮ್ಮನೆ ನಾಲಗೆ ತುದಿಯಿಂದ ನಾಲ್ಕು ಪದ ಉದುರಿಸಿದ.

ಆಮೇಲೆ 'ಅಚ್ಚರೆಡ್ಡಿ! ಈ ದೆವ್ವಗಳ ದಿಬ್ಬದ ಜಮೀನು ದೆವ್ವಗಳಿಗೇ ಇರಲೀ ಬಿಡು' ಅಂದು ತಾನು ಹೇಳಿದ್ದೇ ಕೊನೇ ಮಾತು ಅನ್ನೋ ರೀತಿಯಲ್ಲಿ ಕಟ್ಟೆ ಮೇಲಿಂದ ಎದ್ದ. 'ಹೊರಡೋಣ ಇನ್ನು' ಅಂತ ಹೇಳಿ ಹೆಜ್ಜೆ ಇಟ್ಟ.

ಅಚ್ಚರೆಡ್ಡಿ ಮನಸ್ಸಿಲ್ಲದ ಮನಸ್ಸಿನಿಂದಲೇ ಎದ್ದು ಶ್ಯಾನುಭೋಗನ ಜೊತೆ ನಡೆದ. ಹೋಗ್ತಾ ದಾರಿಯಲ್ಲಿ ಶ್ಯಾನುಭೋಗ 'ರೆಡ್ಡೀ! ಅವರು ನಮಗಿಂತ ಎತ್ತರದ ಜಾಗದಲ್ಲಿ ಸಂಸಾರ ಹೂಡಬಾರದು ಅಷ್ಟೇ ತಾನೇ! ಅವರು ಸವರಿಕೊಂಡಿದ್ದು ಅದಕ್ಕೋಸ್ಕರವಲ್ಲವಲ್ಲಾ!' ಅಂತ ಏನೋ ಹೇಳ್ತಾಲೇ ಇದ್ದ. ಆದರೆ ಅಚ್ಚರೆಡ್ಡಿಗೆ ಮಾತ್ರ ಏನೋ ಕಳಕೊಂಡ ಹಾಗೇ ಅನ್ನಿಸಿತ್ತು.

ಸಮಸ್ಯೆ ಆ ರೀತಿ ಬಗೆಹರಿಯುತ್ತೆ ಅಂತ ಪಿಟ್ಟೋನು ಅಂದುಕೊಂಡೇ ಇರಲಿಲ್ಲ. ಮರ ಕಡಿದ ಮೇಲೆ ನಿಮಗೆ ಹೇಳೋಣ ಅಂತ ಇದ್ದೆವು ಅಂತ ನಾಗನ್ನ ಹೇಳಿದ್ದು ಅವನಿಗೆ ಹಿಡಿಸಲಿಲ್ಲ. ಮುಸಲಯ್ಯನಿಗೂ ಹಾಗೇ ಅನ್ನಿಸಿತ್ತಂತೆ. ಪೋಲಯ್ಯ ಮಾತ್ರ 'ಅದಕ್ಕಿಂತಲೂ ಇನ್ನು ಏನು ಹೇಳೋದಕ್ಕಾಗುತ್ತೆ!' ಅಂದ. ಆ ರಾತ್ರಿ ನಾಗನ್ನನನ್ನೇ ಕೇಳಿದಾಗ ಅವನು ಕೊಟ್ಟ ವಿವರಣೆ ಛೇಪ್ ಅನ್ನೋಥರ ಇತ್ತು. ಅವರು ತಮ್ಮ ಮೇಲೆ ಜಗಳಕ್ಕೆ ಬರಲಿಲ್ಲ, ಪಂಚಾಯತಿಯೇ ನಡೆಸಿದರು. ಮಾತು ಕತೆ ನಡೆಯೋವಾಗ ಶ್ಯಾನುಭೋಗನಿಗೂ, ಅಚ್ಚರೆಡ್ಡಿಗೂ ನಡುವೆ ಏನೋ ಇದೆ ಅನ್ನಿಸ್ತಿತ್ತು. ಅದಕ್ಕೇ ಹಾಗೆ ಮಾತನಾಡಿದೆ. ಜತೆಗೆ ಅದು ದೆವ್ವಗಳ ದಿಬ್ಬ. ದೊಡ್ಡ ಶ್ಯಾನುಭೋಗನ ಸಾವಿಗೂ ಆ ದಿಬ್ಬಕ್ಕೂ ಸಂಬಂಧ ಇದೆ ಅಂತ ಈ ಚಿಕ್ಕ ಶ್ಯಾನುಭೋಗ ಅಂದು ಕೊಳ್ತಾ ಇದಾನೆ. ಅದಕ್ಕೇ ಅಷ್ಟು ಸುಲಭವಾಗಿ ನಮಗೆ ಆ ಭೂಮಿ ಸಿಕ್ಕಿರೋದು. ಇಲ್ಲದಿದ್ದರೆ ಅದು ನಮಗೆ ದಕ್ಕುತ್ತಲೇ ಇರಲಿಲ್ಲ - ಅಂದ.

ಕಾರಣ ಏನೇ ಇರಲಿ, ಒಟ್ಟಿನಲ್ಲಿ ಹೊಲೆಯರ ದಿಬ್ಬದಲ್ಲಿ ಹೊಲೆ ಮಾದಿಗರ ಬೇಸಾಯ ನಡೀತು. ಇದ್ದಿದ್ದರಲ್ಲಿ ಎಲ್ಲರೂ ಸ್ವಲ್ಪ ಸ್ವಲ್ಪ ಭೂಮಿ ಹಂಚಿಕೊಂಡರು. ಅವರೆಲ್ಲಾ ನೆನಪಿನಲ್ಲಿಟ್ಟುಕೋಬೇಕಾದ್ದು ನಾರಯ್ಯ, ಮಾತಯ್ಯರನ್ನ. ಆ ಭೂಮಿಯಲ್ಲಿ ಅವರ ತ್ಯಾಗ, ಸಾಹಸ, ಅವರು ಸುರಿಸಿದ ರಕ್ತ ಇವೆ. ಅವರು ತೀರಿಸಿದ ರಕ್ತದ ಸಾಲ ಅಲ್ಲಿತ್ತು, ಇತಿಹಾಸ ನಡೆಯೋದೇ ಹಾಗೆ. ಶಂಬೂಕನ ತಲೆ, ಏಕಲವ್ಯನ ಹೆಬ್ಬೆರಳು ಮಾತ್ರ ಚರಿತ್ರೆ ಅಲ್ಲ. ದಲಿತರ ಚರಿತ್ರೆ, ಅವರ ಎಷ್ಟೋ ಹೋರಾಟಗಳು, ಅವರ ರಕ್ತ ತರ್ಪಣಗಳು, ಸಾಹಸಗಳು, ತ್ಯಾಗಗಳು ಚರಿತ್ರೆಯ ಪುಟಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವು ಬೆಳಕಿಗೆ ಬಾರದೇ ಜನರ ನೆನಪಿನಿಂದ ಮಾಯವಾಗೋದೇ ಹೆಚ್ಚು, ಏನೂ ಸರಿಯಾಗಿ ಗೊತ್ತಿಲ್ಲದವರು ಏನೇನೋ ಮಾತನಾಡ್ತಾಲೇ ಇರ್ತಾರೆ. ಹೊಲೆಮಾದಿಗರಿಗೆ ಹೋರಾಟ ಒಂದು ಆದರ್ಶವಲ್ಲ, ಅಗತ್ಯ. ಅಗತ್ಯವಾದದ್ದರಿಂದಲೇ ನಾರಯ್ಯ ಮಾತಯ್ಯನಂಥವರು ಅಷ್ಟೆಲ್ಲಾ ಸಾಹಸಗಳು ಮಾಡಿದರು, ಸತ್ತರು. ಈ ದೇಶದ ಹೋರಾಟದ ಇತಿಹಾಸದ ಒಂದೊಂದು ಪುಟವೂ ಅವರ ರಕ್ತದಿಂದ ತುಂಬಿರೋದೇ, ಅವರ ಸಾಹಸದ ಕಥೆಯೇ. ಅವರು ಹೋರಾಡಿದ್ದು ಭೂಮಿಗಾಗಿ, ಒಪ್ಪತ್ತಿನ ಊಟಕ್ಕಾಗಿ, ಆತ್ಮಗೌರವಕ್ಕಾಗಿ. ವರ್ತಮಾನವೂ ಇದಕ್ಕಿಂತ ಭಿನ್ನವೇನಲ್ಲ. ಈಗಲೂ ನಡೆಯುವ, ನಡೆಯುತ್ತಿರುವ ಹೋರಾಟ ಆದರ್ಶ ಅಲ್ಲ, ಅಗತ್ಯ.

ಜಿ. ಕಲ್ಯಾಣರಾವ್‌ರವರ



ಅನುವಾದ: ಪ್ರೊ. ನಗರಗೆರೆ ರಮೇಶ್

ನಿಜಕ್ಕೂ ಹೊಲೆಯರ ದಿಬ್ಬದಲ್ಲಿ ಬೇಸಾಯ ನಡೆಯಿತು. ಅದು ಹಳೆಯದಾಗೂ ಹೋಯ್ತು. ಹೊಲೆಯರ ದಿಬ್ಬದ ಸಂದರ್ಭ ಮತ್ತೆ ಅಚ್ಚರೆಡ್ಡಿಗೆ, ಚಿಕ್ಕ ಶ್ಯಾನುಭೋಗನಿಗೆ ನೆನಪಾಗಿದ್ದು ನಾಗನ್ನನ ಆಟದಲ್ಲಿ ಅವನು ಮತ್ತೆ ತನ್ನ ಜನರನ್ನು ಎತ್ತಿ ಹಿಡಿದಾಗ. ಆ ದಿಬ್ಬದ ವಿಷಯ ಶ್ಯಾನುಭೋಗನಿಗೆ ಮುಖ್ಯ ಅನ್ನಿಸಲಿಲ್ಲ. ಆದರೆ ಆಟ ನಡೆಯುವಾಗ ಊರಿನ ದೊಡ್ಡ ಮನುಷ್ಯರ ಜಾಗದಲ್ಲಿ ಹೊಲೆ ಮಾದಿಗರ ದೊಡ್ಡವರನ್ನು ಕೂರಿಸಿದ್ದು ಅವನಿಗೆ ಹಿಡಿಸಲಿಲ್ಲ. ಅದು ದೊಡ್ಡ ಧಿಕ್ಕಾರ ಅಂತಲೇ ಅನ್ನಿಸಿತು. ಆದರೆ ಇನ್ನು ಮುಂದೆ ನಡೆಯೋ ಯಾವ ಘಟನೆಯಲ್ಲೂ ತನ್ನ ಕೈಗೆ ಮಣ್ಣಾಗಬಾರದು ಅನ್ನೋದು ಅವನ ಲೆಕ್ಕಾಚಾರ. ಅದಕ್ಕೇ ಅಚ್ಚರೆಡ್ಡಿಯನ್ನ ಕರೆದು ಇದು ಈ ಸಲ ತೀರ್ಮಾನ ಆಗೇಬಿಡಬೇಕು ಅಂದ. ಅವನಿಗೆ ಗೊತ್ತಿತ್ತು ಇಂಥ ಒಂದು ಮಾತು ಸಾಕು ಅಚ್ಚರೆಡ್ಡಿ ಏನು ಬೇಕಾದರೂ ಮಾಡ್ತಾನೆ ಅಂತ. ಹೀಗೆ ಹೇಳಿ ಶ್ಯಾನುಭೋಗ ಊರುಬಿಟ್ಟು ಮಗಳ ಮನೆಗೆ ಹೋದ. ಕೆರಳಿದ್ದ ಅಚ್ಚರೆಡ್ಡಿ ಸೀದಾ ತನ್ನ ಮಾವ ಬುಕ್ಕರೆಡ್ಡಿಯ ಊರು, ದಿಬ್ಬಲಮಿಟ್ಟದ ಕಡೆ ಹೊರಟ.

ದಿಬ್ಬಲಮಿಟ್ಟದ ಹಟ್ಟಿಗಳಲ್ಲಿ ನಾಗನ್ನ, ಎಲ್ಲನ್ನರಿಗೆ ಒಂದು ವಿಚಿತ್ರ ಸನ್ನಿವೇಶವೇ ಎದುರಾಯಿತು. ಇವರಿಬ್ಬರ ಜೊತೆ ಮಾತನಾಡೋದಕ್ಕೇ ಊರಿನ ಹೊಲೆಮಾದಿಗರ ಹಟ್ಟಿಗಳ ಜನ ಹೆದರ್ತಾ ಇದ್ದರು. ಅಲ್ಲಿನ ದೊಡ್ಡವರು ಇವರಿಬ್ಬರನ್ನೂ ಪಕ್ಕಕ್ಕೆ ಕರೆದು ಹೇಳಿದ್ರು. '... ಆಟ ಆಡಿ. ಆದರೆ ನಮ್ಮನ್ನ ಮಾತ್ರ ಕರೆಯಬೇಡಿ. ಹಾಗೇನಾದರೂ ಆದರೆ ಮುಂದೆ ಈ ಊರಿನ ಬುಕ್ಕಾರೆಡ್ಡಿಯನ್ನ ಎದುರಿಸೋದು ನಮಗೆ ಕಷ್ಟ ಆಗುತ್ತೆ. ಅಚ್ಚರೆಡ್ಡಿ ನಿಮ್ಮ ಊರಿಂದ ನಮ್ಮ ಊರಿಗೆ ತನ್ನ ಮಾವನ ಮನೆಗೆ ಬಂದಿದಾನೆ. ಅಷ್ಟೇ ಅಲ್ಲದೆ ಸುತ್ತಮುತ್ತಲ ಹಳ್ಳಿಗಳ ರೆಡ್ಡಿಗಳೆಲ್ಲಾ ಗಾಡಿಗಳಲ್ಲಿ ಈ ಊರಿಗೆ ಬರ್ತಾ ಇದಾರೆ. ನಿಮ್ಮ ಆಟ ನೋಡೋದಕ್ಕಲ್ಲ. ನೀವು ನಮ್ಮನ್ನ ದೊಡ್ಡ ಮನುಷ್ಯರನ್ನಾಗಿ ಮಾಡಿದರೆ ನಮ್ಮ ಹಟ್ಟಿಗಳ ಮೇಲೆ ಬೀಳೋದಕ್ಕೆ.' ಈ ಮಾತು ಕೇಳಿದ ನಾಗನ್ನನಿಗೆ ಸ್ವಾಭಿಮಾನಕ್ಕೆ ತಾವೆಲ್ಲಾ ತೆರಬೇಕಾದ ಬೆಲೆ ದೊಡ್ಡದೇ ಅನ್ನಿಸಿತು.

'ಶ್ಯಾನುಭೋಗನಿಗೆ ಇಲ್ಲದ ದೊಡ್ಡಸ್ತಿಕೆ ಈ ಅಚ್ಚರೆಡ್ಡಿಗೆ, ಅವನ ಮಾವನಿಗೆ ಹೇಗೆ ಬಂತು?'

'ಇಲ್ಲ ಅಂತ ಅಂದಿದ್ದು ಯಾರು? ಅವನು ಬೆಂಕಿಹಚ್ಚಿ ತಲೆ ಮರೆಸಿಕೊಂಡಿದಾನೆ ಅಷ್ಟೇ!'

'ಊರಿನ ಜನ ಎಲ್ಲಾ ಬರ್ತಾರೆ. ದೊಡ್ಡವರನ್ನ ಹಾಗೆ ಕರೆಯದೇ ಆಟ ಆಡಿ.'

'ಮುದುಕರು, ಹೆಂಗಸರು ಎಲ್ಲಾ ಎಲ್ಲನ್ನನ ಆಟ ನೋಡಬೇಕು ಅಂತ ಕುಣೀತಿದಾರೆ.'

'ಬುಕ್ಕರೆಡ್ಡಿನೂ ಅದೇ ಹೇಳಿದ್ದು-ಹಾಗೆ ಕರೆಯದೇ ಆಡಿಕೊಳ್ಳಿ ಅಂತ.'

'ಅವನು ಹೇಳಿದ ಹಾಗೆ ಕೇಳೋದಕ್ಕೆ ನಾವೇನು ಅವನ ದೊಡ್ಡೀಲಿರೋ ದನಗಳೇನು?'


'ಓಹೋ! ಬಂದ್ಬಿಟ್ಟ ಮಹಾ ದೊಡ್ಡ ಗಂಡಸು!'

ಅವರ ಸುತ್ತಲೂ ಮಾತುಗಳೋ ಮಾತುಗಳು. ಎಲ್ಲನ್ನ, ನಾಗನ್ನ ಕೇಳುತ್ತಲೇ ಇದ್ದರು. ಅವರೂ ಏನೋ ಒಂದು ಮಾತನಾಡಬೇಕಿತ್ತು, ಆದರೆ ಏನು, ಹೇಗೆ ಅನ್ನೋದು ಗೊತ್ತಾಗ್ತಾ ಇಲ್ಲ. ಈಗ ಅಲ್ಲೇ ಯಾವುದೋ ಒಂದು ನಿರ್ಣಯ ತೆಗೆದುಕೊಳ್ಳಲೇಬೇಕು. ಏನು ಮಾಡೋದು? ಆಗೋದು ಆಗಲಿ ಅಂತ ತಾವು ಹೇಳೋ ಮಾತುಗಳು ಹೇಳಿ ಆಟ ಆಡೋದಾ! ಅಥವಾ ಆಟಾನೇ ನಿಲ್ಲಿಸಿಬಿಡೋದಾ? ಈ ಹಟ್ಟಿಗಳಲ್ಲಿನ ಜನಕ್ಕೆ ತಮ್ಮ ಸ್ವಾಭಿಮಾನಕ್ಕಾಗಿ ಹೊಡೆದಾಡೋ ಕೆಚ್ಚು ಇನ್ನೂ ಬಂದಿಲ್ಲ. ಅದಕ್ಕೇ ಎಲ್ಲನ್ನ ಆಟ ಆಡದೇ ಇರೋದೇ ಒಳ್ಳೆಯದು ಅಂದುಕೊಂಡ. ಅದರಿಂದ ತಮ್ಮ ಗೌರವನಾದ್ರೂ ಉಳಿಯುತ್ತೆ. ಅದೇ ಮಾತನ್ನೇ ಅವನು ನಾಗನ್ನನಿಗೆ ಹೇಳಿದ. ನಾಗನ್ನನಿಗೂ ಅದೇ ಬೇಕಾಗಿತ್ತು. ತಾನೇ ಆ ಮಾತನ್ನ ಹೇಳೋಣ ಅಂತಿದ್ದವನು, ಎಲ್ಲನ್ನ ಹಾಗೆ ಹೇಳುತ್ತಲೇ ಒಪ್ಪಿಕೊಂಡ. ತನ್ನ ಜೀವನ ಅಂತೂ ಮುಗೀತಾ ಬಂತು. ಎಲ್ಲನ್ನ ಇನ್ನೂ ಹುಟ್ಟಬೆಳೀತಾ ಇರೋ ಹಗಲು. ಈಗ ಯಾವುದೇ ತಪ್ಪು ನಿರ್ಣಯ ತಗೊಳ್ಳದೇ ಇರೋದೇ ಒಳ್ಳೇದು.

ಉಸಿರು ಕಟ್ಟಿಸೋ ಆ ವಾತಾವರಣದಲ್ಲಿ ನಾಗನ್ನನಿಗೆ ಇನ್ನು ಇರಲಾಗಲಿಲ್ಲ. ಮನಸಿನಲ್ಲಿ ಏನೋ ದುಗುಡ. ಏನೋ ಕಳಕೊಂಡ ಹಾಗೆ. ಈ ಸೋಲನ್ನ ಒಪ್ಪಿಕೊಳ್ಳೋದು ತುಂಬಾ ಕಷ್ಟ ಅನ್ನಿಸ್ತಾ ಇತ್ತು. ಎಲ್ಲನ್ನನ ಮುಖದ ಮೇಲೂ ಇದೇ ಭಾವನೆ ಕಾಣಿಸ್ತಾ ಇತ್ತು. ಮುಖ್ಯವಾಗಿ ಅವನ ಕಣ್ಣುಗಳ ಕೆಂಪು; ಆ ಕೆಂಪು ತಾನೆಂದೂ ನೋಡಿಲ್ಲ ಅಂದುಕೊಂಡ ನಾಗನ್ನ. ಈಗ ಎಲ್ಲನ್ನನ ಮನಸ್ಸಿನಲ್ಲಿ ಇರೋ ವಿಷಯ ನಾಗನ್ನನಿಗೆ ಅರ್ಥವಾಯಿತು. ಅವನಿಗೆ ಈಗ ಬೇಕಾದದ್ದು ಭೂಮಿ. ಉತ್ತು ಬಿತ್ತಿ ಬೆಳೆಯೋದಕ್ಕೆ ತನ್ನದೇ ಆದ ಒಂದು ತುಂಡು ಭೂಮಿ. ಇರೋದಕ್ಕೆ ಮನೆ, ಉಡೋದಕ್ಕೆ ಬಟ್ಟೆ. ಜೊತೆಗೆ ತನಗೆ ಬೇಕಾದಂತೆ ಕುಣಿತ. ಆದರೆ ಇದು ಯಾವುದೂ ಅಷ್ಟು ಸುಲಭವಾಗಿ ಸಿಗೋದಲ್ಲ ಅನ್ನೋದು ಅವನಿಗೆ ಅರ್ಥವಾಗಿತ್ತು. ಭೂಮಿ ಅಗೀಬೇಕು. ಆಮೇಲೆ ಗುಂಡಿ ಮುಚ್ಚಬೇಕು. ತುಂಬಾ ಕೆಲಸ ಇದೆ. ನಾಗನ್ನ ಮತ್ತೆ ಎಲ್ಲನ್ನನ ಕಡೆ ನೋಡಿದ. ಆ ಕಣ್ಣುಗಳ ಕೆಂಪು ಇನ್ನೂ ಹೋಗಿರಲಿಲ್ಲ. ಇರಲೀ! ಅದು ಒಳ್ಳೇದೇ ಅಂದುಕೊಂಡ ನಾಗನ್ನ. ಹಾಗೇ ಇರಬೇಕು ಅಂತಲೂ ಅಂದುಕೊಂಡ.


(ಮುಂದುವರೆಯುತ್ತದೆ)

ಎಸ್‌ಎಸ್‌ಎಲ್‌ಸಿ ಫೇಲಾದರೂ ಡಾಕ್ಟರ್ ಆದವರು!



ಮುಗ್ಧರ ... ತರಕಟ್ಟುಗಳನ್ನು ಮಾಡುತ್ತಾರೆ. ... ಜನರಿಗೆ ಟೋಪಿ ಹಾಕಿ ಸುಲಿಯುತ್ತಾರೆ ಎಂಬುದಕ್ಕೆ ... ಅಧಿಕಾರಿಗಳೂ ಕೂಡ ... ಇಲ್ಲೊಂದು ಚಕ್ಕ ಉದಾಹರಣೆ. [illegible]

... ರಾಮುಸೇವಕ ... ಎಸ್‌ಎಸ್‌ಎಲ್‌ಸಿ ಫೇಲ್. ಆದರೂ ... [illegible]



... ರವಿಕುಮಾರ್ ಮತ್ತು ಎಂ.ಎಸ್.ಸಿಂಗ್ ಎಂಬ ಇನ್ನೂ ... 'ಡಾಕ್ಟರ್' ಎಂಬ ವಿಶೇಷಣವನ್ನು ತಗುಲಿಹಾಕಿಕೊಂಡು ರೋಗಿಗಳನ್ನು ... ಇವರೂ ಕೂಡ ನಕಲಿಯೇ ಅಥವಾ ಅಸಲಿಯೇ ... ಇವರಲ್ಲರೂ ಮಾರುತಿ ಪಾಲಿಕ್ಲಿನಿಕ್‌ನಲ್ಲಿ ನಕಲಿ ... [illegible]

... ಪ್ರಜ್ಞಾವಂತ ಜನರೇ ... ಜಿಲ್ಲಾಧಿಕಾರಿ ... [illegible]

ಆದಿ ಚುಂಚನಗಿರಿ ಮಠಕೂ ಕವಿಗೋಷ್ಠಿಗೂ ಏನು ಸಮುಂಧ

ಆದಿ ಚುಂಚನಗಿರಿಯಲ್ಲಿ ಕಟ್ಟಿರುವ ದೇವಸ್ಥಾನದ ಸುದ್ದಿ ಕೇಳಿದ ಕಾಳಮಾವ, ಏನೊ ಬಗಸಿಗೊಂಡಂತೆ.

"ಒಂದಿನ ಚುಂಚನಗಿರಿಗೋಗಬೇಕಲ್ಲಾ?" ಎಂದ.

"ಹೋಗು, ನಿಸ್ಕಾರಿಕಂಡಿರೋರು" ಎಂದಳು ಜುಮ್ಮಿ.

"ನೀನೂ ಬಾರ್ಲೆ, ಹೋಗಿ ಬರನ."

ಬಯಲುಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಇವತ್ತೆ ಹೋಗನ ನಡಿ. ಈಗೇನು ಅಟಾರುಕ್ಷ ಬಂದದೆ. ತಗಂಡೋಗಿ ಬ್ಯಟ್ಟದ ಬಡ್ಡಿಗೆ ಬುಡತವೆ."

"ಈ ಗಲಾಟ್ಯಲ್ಲ ತಣ್ಣಗಾಗ್ಲಿ ಇರು ಹೋಗನ."

"ಚುಂಚನಗಿರಿ ಸ್ವಾಮಿಗಳು ಗಾರೆಪರಿಗೆ ಯಜ್ಞಯಾಗ ಮಾಡದಕ್ಕಿಂತ ಆಸುಪತ್ರೆ ಓಪನ್‌ಗೆ ಮಾಡಿದ್ರಲ್ಲಾ ಅಂಗೆ ಮಾಡಬೇಕಾಗಿತ್ತು ಕಣೊ" ಎಂದ ಉಗ್ರಿ.

"ಆಸುಪತ್ರೆ ಓಪನ್ನಿಗೇನು ಮಾಡಿದ್ರೂ?"

"ಏ, ಈ ದೇಸದಲ್ಲೆ ಯಾರು ಮಾಡಿಲ್ಲ ಅಂತ ಉತ್ಸವ ಮಾಡಿದ್ರು ಕಣೇ. ಇಡೀ ಸುತ್ತಲಳ್ಳಿ ದೇವರನ್ನೆಲ್ಲ ಕರದ್ರು. ಮ್ಯರಿಯೋ ದೇವರು, ಕುಣಿಯೋ ದೇವರು, ಅಡ್ಡೆ ದೇವ್ರುರು, ಯಲ್ಲಾ ಬಂದು ಧಾಂಧೂಂ ಅಂತ ಕುಣುದ್ರು. ಸ್ವಾಮಿ ಆ ದೇವರ ಪೂಜಾರಿಗಳಿಗ್ಯಲ್ಲ ಸನುಮಾನ ಮಾಡಿದ್ರು. ಇನ್ನ ಅಂತ ಉತ್ಸವ ನೋಡಕ್ಕಾಗದಿಲ್ಲ ಬುಡು" ಎಂದ ಉಗ್ರಿ.

"ಈಗ್ಲು ಅಂಗೆ ಮಾಡಬವ್ರುದಿತ್ತು" ಎಂದ ಸೀರ.

"ಅದೆಯ ನಾನೇಳದುವೆ. ದೇವಸ್ಥಾನದ ಉದ್ಘಾಟನೆಗೆ ದೇವರು ಕರುಸಬೇಕಾಗಿತ್ತು, ಆಸುಪತ್ರೆ ಓಪನ್‌ಗೆ ಹಳೆಪಳೆ ದಾಗುಟ್ರು ಕರುಸಬೇಕಾಗಿತ್ತು. ಇವುರೊಂತರ ಉಲ್ಟಾ ಸಾಮಿ" ಎಂದ ಉಗ್ರಿ.

"ಗುಡಿ ಕಟ್ಟಕ್ಕೆ ಭಾರಿ ದುಡ್ಡು ಕರಚು ಮಾಡಿರಬೇಕಲವೇನ್ಲ?" ಎಂದ ಕಾಳಮಾವ.

"ನೂರು ಕೋಟ ಮ್ಯಾಲಾಗಿದ್ದತಂತೆ."

"ನೂರು ಕೋಟನೆ? ಅಯ್ಯೋ, ಅಯ್ಯೋ, ನಮ್ಮ ತಾಲ್ಲೂಕಿನ ನೂರೂರಲ್ಲಿ ಒಂದೊಂದು ಕೋಟಿಯಂಗೆ ಒಂದು ಗುಡಿ ಅಂದ್ರು ನೂರು ಗುಡಿ ಕಟ್ಟುಸಬವುದಿತ್ತಲ್ಲಾ?"

"ಅಂತ ಹಣೆಬರೇನು? ಭೈರವನ ಮೂಲುಸ್ಥಾನದಲ್ಲಿ ದೊಡ್ಡ ಗುಡಿ ಇರಬೇಕು ಅಂತ ಕಟ್ಟಿಸ್ಯವುರೆ. ನಿಮ್ಮೂರಿಗೆ ಗುಡಿಬೇಕಿದ್ರೆ ನೀವೆ ಕಟ್ಟುಸಿಗಳೀ."

"ಅದು ನಿಜವೆ ಬುಡು. ಅಂತು ಸ್ವಾಮಿ ವಳ್ಳೆ ಇದು ಮಾಡಿದ್ರು" ಎಂದ ಕಾಳಮಾವ ಹೇಳುತ್ತಿರುವಾಗ ವಾಟಸ್ಸೆ ಕಾಣಿಸಿಕೊಂಡ.

"ಚುಂಚನಗಿರಿಗೋಗಲಿಲವೇನ್ಲ?" ಎಂದಳು ಜುಮ್ಮಿ.

"ಅಲ್ಲಿಂದ್ಲೆ ಬಂದೆ ಕಣಕ್ಕ."

"ಅದ್ಯಾಕ್ ಬಂದೆ? ಇನ್ನು ಯರಡು ದಿನ ಇದ್ದು ಬರಿವೆ."

"ಬೇಜಾರಾಯ್ತು, ಬಂದೆ ಕಣಕ್ಕ."

"ಇವ್ರುನಿಗೆ ಯಾಕೆ ಬೇಜಾರಾಗ್ಯದೆ ಗೊತ್ತೇನೆ? ಅ ಚುಂಚನಗಿರಿಲಿ ಕುಡಿಯಂಗಿಲ್ಲ, ಅದು ಸಿಗದೂಯಿಲ್ಲ, ಅದ್ಕೆ ಓಡಿಬಂದವ್ರುನೆ" ಎಂದು ಉಗ್ರಿ ನಕ್ಕ.

"ಮಿಸ್ಟರ್ ಉಗ್ರಿ, ಅಲ್ಲಿ ಕುಡಿಯಕ್ಕೆ ಸಿಗದೆಯಿದ್ರು ಬೆಳ್ಳೂರಲ್ಲಿ ಟ್ಯಾಂಕಿ ತುಂಬಸಿಗಂಡೋಗಿ ಆರಾಮಾಗಿದ್ದು ಬರಬವ್ರುದು ಕಣೊ. ಕುಡಿಯೋ ಜನ ಖ್ಯಂಗಾರ ಮಾಡಿ ತಮ್ಮ ಮಾಲ ಒದಗಿಸಿಗತ್ತರೆ. ಆ ಮಾತು ಬುಡು. ನನಿಗ್ಯಾಕೆ ಬೇಜಾರಾಯ್ತು ಅಂದ್ರೆ ಅಲ್ಲಿ ಕವಿಗೋಷ್ಠಿ ಇತ್ತು. ಕವನ ಓದನಾ ಅಂತ ಹೋಗಿದ್ದೆ. ಅವುಕಾಸ ಕೊಡ್ಲಿಲ್ಲ, ಅದ್ಕೆ ಬಂದೆ."

"ನೀನು ಕವಿ ತರ ಕಾಣಲಿಲ್ಲವೇನೊ?"


"ಇದೇನೊ ಉಗ್ರಿ ಹಿಂಗಂತೀ? ಸಡನ್ನಂತ ನೋಡಿದ್ರೆ ನಾನು ಸುಮತೀಂದ್ರ ನಾಡಿಗರ ತಮ್ಮನಂಗೆ ಕಾಣ್ತಿನಿ. ಹೋಗ್ಲಿ, ನಾನು ಬರದ ಕವನ ಈಸಗಂಡು ಓದಿದ್ರೆ ಅಲ್ಲಿ ಬಂದಿದ್ದ ಕವಿಗಳಿಗಿಂತ ನನ್ನ ಕವನನೆ ಚನ್ನಾಗಿರದು. ನೂರಾರು ಜನ ಕವಿಗ ಮಧ್ಯೆ ನಂದೂ ಒಂದು ನ್ಯಡದೋಗದು. ಸ್ಥಳೀಯ ಪ್ರತಿಭೆನ ನೆಗ್ಲೆಟ್ ಮಾಡಿದಕ್ಕೆ ಬೇಜಾರಾಗಿ ವಾಪಾಸು ಬಂದೆ ಕಣೊ."

"ಅಂಗಲ್ಲ ಕಣೊ ವಾಟಸ್ಸೆ, ಮಠದೋರೆ ಕವಿಗಳನ್ನು ಗುರುತು ಮಾಡಿ ಕರದಿದ್ದರಂತೆ. ನೀನು ಮೊದ್ಲೆ ಹೋಗಿ ನಾಗ್ತಳ್ಳಿ ಚಂದ್ರಶೇಕ್ರನ್ನ ಕಂಡು ಈ ತರಕೀತರ ಅಂತ ಹೇಳಿಕಂಡು ಗೋಗರದಿದ್ರೆ ಅವ್ರುನು ಮುಕುಂದರಾಜನ್ನ ಕಂಡು ಮಾತಾಡು ಅಂದಿರೋನು."

"ಮುಕುಂದರಾಜ ಯಾರೊ?"

"ಅವ್ರುನು ಇಲ್ಲೆ ಮೇಸ್ಟರಾಗಿದ್ದ ಕಣೊ. ಅವ್ರು ಮಾತಾಡಿಸಿ ನಾನು ವಾಟಸ್ಸೆ ಅಂತ ಹೇಳಿದ್ರು ಸಾಕಾಗಿತ್ತು ಕವನ ಓದಬವ್ರುದಿತ್ತು."

"ಬ್ಯಾಡಬುಡು. ಅಂಗೆ ಗೋಗರದು ಕವನ ಓದದು ಬ್ಯಾಡ, ಹಾಸ್ಯಲುಡುಗ್ರು ತಟ್ಟೆ ಹಿಡಕಂಡು ಕ್ಯೂ ನಿಂತ



ಕೊಡಗಿನ ನೋವಿಗೆ ಹಿಂದೂತ್ವ ಬಾಮ್!

ಅವರ ಮನಸ್ಸಿಗೆ ನೋವಾಗಿತ್ತು.

ಅವರು ಅಂದರೆ ಯಾರು?

ಕೊಡಗಿನ ಜನರು!

ಅವರೆಲ್ಲ ಬಂದು ತಮ್ಮ ಅಳಲು ತೋಡಿಕೊಂಡರಾ?

ಮೂರ್ಖ ಪ್ರಶ್ನೆ. ಕೊಡಗಿನ ಎಲ್ಲ ಜನರೂ ಪ್ರತಿಕ್ರಿಯಿಸಲು ಸಾಧ್ಯವಾ. ಅವರ ಪ್ರತಿನಿಧಿಗಳು ಈ ಕಾರ್ಯ ನಿರ್ವಹಿಸಿದರು.

ಯಾರು ಈ ಪ್ರತಿನಿಧಿಗಳು?

ಎಂಟು ಹತ್ತು ಜನರ ಯುವಕರ ಗುಂಪು!

ಬೆಳ್ಳಂಬೆಳಿಗ್ಗೆಯೇ ಅವರು ಕುಡಿದು ತೂರಾಡುತ್ತಿದ್ದರಂತಲ್ಲಾ?

ಆ ಘಟನೆಯ ತೀವ್ರತೆ ಹಾಗಿತ್ತು! ಘಾಸಿಗೊಂಡ ಯುವಕರು ಮದ್ಯ ಸೇವಿಸುವುದು ಅನಿವಾರ್ಯ ಆಗಿತ್ತು; ಆ ಆಘಾತವನ್ನು ತಡೆದುಕೊಳ್ಳಲು ಮಾದಕ ದ್ರವ್ಯದ ಅವಶ್ಯಕತೆ ಇತ್ತು!

ನಿಲ್ಲಲೂ ಆಗದ ಸ್ಥಿತಿಯಲ್ಲಿದ್ದರು ನಿಜ. ಆದರೂ ಕೊಡಗಿನ ಜನರ ಮನಸ್ಸಿನ ಪ್ರಶ್ನೆ ನೋಡಿ. ಅಂತಹ ಸ್ಥಿತಿಯಲ್ಲೂ ಸೆಟೆದು ನಿಂತಿತು ಯುವ ಪಡೆ!

ಯಾವುದು ಅದು, ಯುವಕರನ್ನು ರೊಚ್ಚಿಗೇಳಿಸಿದ ಘಟನೆ?

ಕೊಡಗಿನ ತಾಯಿ ಕಾವೇರಿಗೆ ಹುಟ್ಟೂರಿನಲ್ಲೇ ಅವಮಾನ!

ಏನಾಯಿತು ಅಂತಹ ಅಪಮಾನ?

ತಲಕಾವೇರಿಯಲ್ಲಿ ತೀರ್ಥ-ಪ್ರಸಾದ ಸ್ವೀಕರಿಸಲು ನಿರಾಕರಣೆ! ಅದೂ ಯಾರಿಂದ?

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಅವರಿಂದ! ಸಿಡಿದೆದ್ದಿತು ಅದೇ ವರ್ಗದ ಯುವ ಪಡೆ! ಮಾಜಿ ಶಾಸಕರಿಂದ ದೊರೆಯಿತು ಇವರಿಗೆ ಬೆಂಬಲ!

ಹೌದು ತಲಕಾವೇರಿಗೆ ಯಾಕೆ ಹೋಗಿದ್ದರು ಈ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು?

ತಲಕಾವೇರಿಯ ಜೀರ್ಣೋದ್ಧಾರ ಕಾರ್ಯ ವೀಕ್ಷಿಸಲು!

ಅರೆ, ತಲಕಾವೇರಿಯ ಜೀರ್ಣೋದ್ಧಾರಕ್ಕೂ ಹಿಂದುಳಿದ ವರ್ಗಗಳ ಆಯೋಗಕ್ಕೂ ಎತ್ತಣಿಂದೆತ್ತಣ ಸಂಬಂಧವಯ್ಯ ಎಂದು ಯಾರೂ ಪ್ರಶ್ನಿಸಬೇಕಿಲ್ಲ, ಇತರೆ ಪತ್ರಿಕೆಗಳ ಮಾತು ಹಾಗಿರಲಿ, ನಮ್ಮೆಲ್ಲರ ವಿಶ್ವಾಸಾರ್ಹತೆ ಪಡೆದಿರುವ 'ಪ್ರಜಾವಾಣಿ' ಪತ್ರಿಕೆಯೇ ಹೀಗೆ ವರದಿ ಮಾಡಿದೆ! ಆಯೋಗದ ಅಧ್ಯಕ್ಷರೇ 'ನಾನು ತಲಕಾವೇರಿಯಿಂದ ಸುಮಾರು ಆರು ಕಿಲೋಮೀಟರ್ ದೂರ ಇರುವ ಗುಡ್ಡಗಾಡಿನ ಜನರಿಗೆ ಸರ್ಕಾರಿ ಸವಲತ್ತು ಕೊಡಿಸಲು ಹೋಗಿದ್ದೆ' ಎಂದು ಹೇಳಿದ್ದಾರಲ್ಲಾ... ನೀವು ವಿಶ್ವಾಸಾರ್ಹ ಪತ್ರಿಕೆಯ ವರದಿ ನಂಬುತ್ತೀರೋ, ಅಧ್ಯಕ್ಷರ ಮಾತನ್ನೋ.....

ಹಾಳಾಗಲಿ. ತೀರ್ಥ-ಪ್ರಸಾದ ಸ್ವೀಕರಿಸಲು ನಿರಾಕರಿಸಿದ್ದು ಸತ್ಯವೊ?

ವಿಶ್ವಾಸಾರ್ಹ ಪತ್ರಿಕೆಯ ವರದಿಯಂತೆ ಸತ್ಯ!

ಅಧ್ಯಕ್ಷರೇನೆನ್ನುತ್ತಾರೆ?

ಅವನ್ನು ನೀಡುತ್ತಾರೆ ಎಂಬುದೇ ನನಗೆ ತಿಳಿದಿರಲಿಲ್ಲ!

ಎಂತಹ ಉದ್ಧಟತನ! ಹಿಂದೂ ಸಂಪ್ರದಾಯಕ್ಕೆ ಎಸಗಿದ ಅವಮಾನವಲ್ಲವೆ ಇದು?

ಭಾರತೀಯ ಸಂವಿಧಾನ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ತೀರ್ಥ-ಪ್ರಸಾದ ಸ್ವೀಕರಿಸುವುದು, ಬಿಡುವುದು ವೈಯಕ್ತಿಕವಾದುದು. ಬಲವಂತದಿಂದ ಅದನ್ನು ಸ್ವೀಕರಿಸುವಂತೆ ಮಾಡುವುದು ಸಂವಿಧಾನ ವಿರೋಧಿ ಕೃತ್ಯ; ವೈಯಕ್ತಿಕ ಸ್ವಾತಂತ್ರ್ಯಹರಣ.

ಇರಬಹುದು. ಮಡಿಕೇರಿಯ ಯುವಕರ ಸಂವಿಧಾನವೇ ಬೇರೆ! ಅದು ಹಿಂದೂ ಸಂವಿಧಾನ! ದೇವಾಲಯಗಳಿಗೆ ಹೋಗದಿರುವುದು, ಹೋಮಹವನ ಮಾಡದಿರುವುದು, ತೀರ್ಥ-ಪ್ರಸಾದ ಸ್ವೀಕರಿಸದೆ ಇರುವುದು ಸಂವಿಧಾನಬಾಹಿರ ಕೃತ್ಯ! ಅಂತಹವರು ಈ ಪವಿತ್ರ ಭಾರತದಲ್ಲೇ ಇರಲೇ ಅನರ್ಹರು! ಇವುಗಳೆಲ್ಲದರ ಸಾಕಾರಮೂರ್ತಿಯಂತೆ ಕಂಡರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು!

ಅವರಿಗೆ ಕಲಿಸಬೇಡವೆ ಬುದ್ಧಿ?

ನುಗ್ಗಿತು ವೀರಪಡೆ ಅವರು ತಂಗಿದ್ದ 'ಸುದರ್ಶನ ಅತಿಥಿಗೃಹದೆಡೆ! ಅರುಚಿತು- 'ಕಾವೇರಿ ನಿಸರ್ಗದ ಕೊಡುಗೆ!'

'ಹೌದು ನಾನು ನಿಸರ್ಗವನ್ನ, ಕಾವೇರಿಯನ್ನು ಪ್ರೀತಿಸುತ್ತೇನೆ' ಅಧ್ಯಕ್ಷರು.

ತಿಳಿಯದೆ ಆ ಅಮಲಿನ ಯುವಪಡೆಗೆ ಈ ಅಧ್ಯಕ್ಷನ ಪ್ರೀತಿ! ಅಬ್ಬರಿಸಿತು- 'ನೀನು ತೀರ್ಥ ಕುಡಿಯಲೇಬೇಕು'

ಅರಿವಾಯಿತು ಅಮಲಿನ ಯುವಕರ ಪಡೆಯ ಉದ್ದೇಶ. ಕೇಳಿದರು ಅವರು- 'ಕುಡಿಯುತ್ತೇನೆ. ಉದ್ಧರಣೆ, ಪಂಚಪಾತ್ರೆ ಎಲ್ಲಿದೆ? ಪೂಜಾರಿ ಎಲ್ಲಿ?'

ಈ ಲಂಪಟನಿಗೆ ಎಂತಹ ಪೂಜೆ ಸಲ್ಲಿಸಬೇಕೆಂ ತಿಳಿದಿತ್ತಲ್ಲವೆ ಅಮಲಪಡೆಗೆ.

'ಇಲ್ಲಿದೆ ನೋಡು ತೀರ್ಥ'

ನೋಡಿದರು ಅಧ್ಯಕ್ಷರು. ಕೋಕಾಕೋ ಬಾಟಲಿಯಲ್ಲಿ ಸಂಗ್ರಹಿಸಿದ್ದ ದ್ರಾವಣ!! ಸ್ವದೇಶಿ ಮ ಪಠಿಸುವವನ ಕೈಯ್ಯಲ್ಲಿ ವಿದೇಶಿ ಸಾಮಗ್ರಿ! ಅದೇ ಕಾವೇರಿಯ ನೀರೋ, ಇವರ ದೇಹ ಹೊ ಹೊರಬಂದ ಆ ತಾಯಿಯೋ ಅಥವಾ ಅವೆರ ಮಿಶ್ರಣವೋ! ಅಂತೂ ಏನೋ ಒಂದು. ಬಲವಂತ

ಅಣಕ

■ ಎಚ್.ಎಲ್. ಕೇಶವಮೂ

ಅದನ್ನು ಕುಡಿಸಿದರು. ಯಾರೋ ಒಬ್ಬ ಹಣೆಗೆ ಕುಂಕು ಬಳಿದ. ಈ ನೂಕಾಟ, ತಳ್ಳಾಟದಲ್ಲಿ ಕೋಕಾಕೋ ದೊಳಗಿದ್ದ ದ್ರಾವಣ ನೆಲದ ಮೇಲೆ ಚೆಲ್ಲಿತು. ಅ ಕಾವೇರಿ ತಾಯಿ ಅಲ್ಲವಾ. ಅದಕ್ಕೇ ಅದನ್ನು ತುಳಿ ಕಾವೇರಿ ನದಿಯಲ್ಲಿ ಮುಳುಗಿದಷ್ಟೇ ಆನಂದೋತ್ಸಾ ಅಮಲಿನಲ್ಲಿ ಹಿಂತಿರುಗಿತು ಧೀರಪಡೆ.


ಹೋಯಿತೆ ನೋವು?

ಹೌದು! ಕೊಡಗಿನ ಜನರ ನೋವಿಗೆ ಹಿಂದೂ ಬಾಮ್!

ಅಲ್ಲ, ಇವರು ಕಾವೇರಿ ತಾಯಿಯ ಮ ಕಳೆದರೋ? ಕಾಪಾಡಿದರೋ?

ಕೊಡಗಿನ ಮರ್ಯಾದಸ್ಥ ಜನರ ಮನ ನೊಂದಿರಬೇಕು.

ಅದಿರಲಿ. ಈ ಘಟನೆ ನಡೆದಾಗ ಟಿವಿ 9 ವರದಿ ಮಾತ್ರ ಸ್ಥಳದಲ್ಲಿದ್ದಿದ್ದಂತೆ. ಅವರಿಗೇನು ಕನ ಬದ್ದಿರುತ್ತದೆಯೆ ಹಿಂಗಿಂಗಾಗುತ್ತೆ ಅಂತ. ಅಮ ಪಡೆಯೇ ತಮ್ಮ ಧೀರೋದಾತ್ತ ಕಾರ್ಯವ ಜಗಜ್ಜಾಹೀರುಪಡಿಸಲು ಕರೆತಂದಿರುತ್ತೆ. ಅವ ಎಂತಹ ಜಾಣರು ಅಂತೀರಿ, ಬೆಳಿಗ್ಗೆಯಿಂದ ಸಂಜೆವರ



ಪ್ಯಾಮಿಗಳಿಗೆ ಶಾಲು ಹೊದಿಸಿಗಳಿಕೆ, ನಿಂತಗಳಿದೂ ಬ್ಯಾಡ."

"ಅಂಗರೆ ಕವಿಗಳಿಗ್ಯಲ್ಲ ಶಾಲು ಕೊಟ್ರು ಅನ್ನು?"

"ಊ ಕಣೊ. ಒಂದು ಕವನಕ್ಕೆ ಒಂದು ಶಾಲು ಅಂತ ನೂರಾರು ಶಾಲು ಕೊಟ್ಟು ಕಳಿಸಿದ್ರು. ಶಾಲಿಗಿಂತ ಇನ್ನೆಸ್ಸಾರ ಕೊಡಬವುದಿತ್ತು."

"ನಿನ್ನಂಥೋರು ಕವನ ಓದಿದ್ರೆ, ಏನ್ಸಾರ ಕೊಡಬವುದು. ಪಾಪ ಕವಿಗಳಿಗೆ ಶಾಲನ್ನೇ ಅಲವೇನೊ ಕೊಡದು."

"ಮಿಸ್ಟರ್ ಉಗ್ರಿ, ಅಲ್ಲಿ ಬಂದಿದ್ದ ಕವಿಗಳ ಪೈಕಿ ನೈನ್‌ಟಿ ಪರಸೆಂಟ್ ನನ್ನಂಥೋರೆ ಇದ್ರು."

"ಬರೀ ನೈನ್‌ಟಿ ತಗಳೋರೆ ಅನ್ನು?"

"ಅಂಗಲ್ಲ ಕಣೊ, ಕವನ ಬರಿಯೋ ಸ್ಫೂರ್ತಿಗೆ ಏನಾರ ತಗಳೊ ಅಂಥೋರೆಯ. ಅಂಥೋರಿಗೆ ಶಾಲು ಕೊಟ್ಟದ್ದು ವೇಸ್ಟು ಅಂತ ನನ್ನ ಬಾವುನೆ."

"ನೀನೇಳೊ ಲ್ಯಕ್ಯಾಚಾರದೊನೊಬ್ಬ ಅವುನೆ ಕಣೊ."

"ಯಾರಪ್ಪ ಅದು, ಊಯೀಸ್ ದಟ್?"

"ಲಕ್ಮಿನಾರಾಯಣ ಭಟ್ಟ ಅಂತ ವಬ್ಬವುನೆ. ಅವುನ್ನ ಕರದು ಕವುನ ಓದು ಅಂದ್ರೆ 'ನನಿಗೆ ಶಾಲು, ಮಾಲೆ, ಬವುಮಾನ ಯಾವುದೂ ಬ್ಯಾಡ. ಅದರಬದ್ಲು ದುಡ್ಡ ಕೊಡಿ' ಅಂತನೆ."

"ಅದಪ್ಪ ವ್ಯವಾರ ಅಂದ್ರೆ, ಭಟ್ಟ ಎಷ್ಟೇ ಆಗ್ಲಿ ಕಾಣಿಕೆ ಕಾಸಿಗೆ ಕೈಯೊಡ್ಡಿದೋನಲವೆ? ಅಂಥೋವಿಗೆ ಊದುಬತ್ತಿ, ಕರ್ಪೂರ, ಗಂಧ ಯಲ್ಲ ವೇಸ್ಟು ಕಣೊ ಉಗ್ರಿ."

"ಆದಿರ್ಲಿ ಚುಂಚನಗಿರಿ ಮಠಕೂ, ಕವುನುಕ್ಕೂ ಏನು ಸಮುಂಧಾ?"

"ಸಮುಂಧ ಇಲ್ಲಿಗಂಟ ಇರಲಿಲ್ಲವಂತೆ. ಇನ್ನುಮುಂದೆ ಮಾಡಿಕತ್ತರಂತೆ. ಮಠದಪಾಡಿಗೆ ಮಠ, ಕವನದ ಪಾಡಿಗೆ ಕವುನ ಇರಬವುದಲವೆ?"

"ಇರ್ಲಿಬುಡು!" ■

ಇದೇ ಸುದ್ದಿಯನ್ನು ಚೂಯಿಂಗ್‌ಗಮ್ ಮಾಡಿಕೊಂಡ ಈ ಚಾನೆಲ್‌ನವರು ಅಧ್ಯಕ್ಷರು ಈ ಘಟನೆ ಕುರಿತು ನೀಡಿದ ವಿವರಣೆಯನ್ನು ಹಾಕಿದ ಹಾಗೆ ಮಾಡಿ ಹಾರಿಸೇಬಿಟ್ಟರಂತೆ!

ಹೌದು ಪತ್ರಿಕೆಗಳಿಗೆ ಈ ಸುದ್ದಿ ಹೇಗೆ ತಲುಪಿತು?

ಸಂಘ ಪರಿವಾರ ಬರೆದು ಕೊಡ್ತು. ಇವರು ಪ್ರಿಂಟ್ ಮಾಡಿದರು! ಸುದ್ದಿ ಮಾಧ್ಯಮಗಳೂ ಸಂಘ ಪರಿವಾರ ಆಗ್ತಿದಾವಾ...!

ಕೊಡಗಿನ ಜನರ ಮನಸ್ಸಿಗೆ ನೋವುಂಟು ಮಾಡಿದ ಈ ಕಾಲ್ಪನಿಕ ಘಟನೆ ಈ ರೀತಿ ಪರ್ಯಾವಸಾನ ಹೊಂದಿದರೆ ಕನ್ನಡಿಗರ ಮನಸ್ಸಿಗೆ ನೋವಾಗಿತ್ತಲ್ಲಾ ಅದರ ಕಥೆ ಏನು ಅಂತ ನೋಡೋಣ.

ಕನ್ನಡಿಗರ ಮನಸ್ಸಿಗೆ ನೋವಾದದ್ದು ಯಾರಿಂದ!

ಲಲ್ಲೂಪ್ರಸಾದ್ ಯಾದವ್‌ರಿಂದ!

ಆದದ್ದು ಇಷ್ಟೆ. ರೈಲು ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯ ಆಗಿತ್ತು. ಅದಕ್ಕಾಗಿ ಲಲ್ಲೂ ವಿರುದ್ಧ ಪ್ರತಿಭಟನೆ.

ಲಲ್ಲೂ ಪ್ರತಿಕ್ರಿಯೆ ಏನು?

ಡರ್ಟಿ ಪೀಪಲ್!

ಯಾರು ಡರ್ಟಿ?

ಡರ್ಟಿ ಪೀಪಲ್‌ಗೆ ಎಲ್ಲವೂ ಡರ್ಟಿಯಾಗೇ ಕಾಣುತ್ತವೆ!

ಅದಕ್ಕೆ ಲಲ್ಲೂ ವಿರುದ್ಧ ಪ್ರತಿಭಟನೆ.

ಮಾಡಬೇಕಾದ್ದೆ. ಆದರೆ ಹೇಗೆ?

ರೇಲು ಕಚೇರಿಗಳಿಗೆ ನುಗ್ಗಿ ಪೀಠೋಪಕರಣ ಧ್ವಂಸ ಮಾಡಿ!

ಪೊಲೀಸಿನವರು ಏನು ಕತ್ತೆ ಮೇಯಿಸುತ್ತಿದ್ದರಾ?

ಇಲ್ಲ, ಅವರೂ ಇದ್ದರು. ಧ್ವಂಸ ಪ್ರಿಯರಿಗೆ ಮಾರ್ಗದರ್ಶಕರಾಗಿ ಎಂಬಂತೆ!

ಕರವೇ ರಾಜ್ಯಾಧ್ಯಕ್ಷ ನಾರಾಯಣ ಗೌಡರಿಂದ ಗುಡುಗು– 'ಲಲ್ಲೂ ಪ್ರಸಾದ್ ಯಾದವ್ ಕನ್ನಡಿಗರಲ್ಲಿ ಕ್ಷಮೆ ಯಾಚಿಸಬೇಕು'

ಅವರು ಹಾಗೆ ಮಾಡಲಿಲ್ಲ, ಆಗ?

'ಬಿಹಾರಿಗಳನ್ನು ಬಿಹಾರಕ್ಕೆ ಎತ್ತಂಗಡಿ ಮಾಡಿಸ ಬೇಕಾಗುತ್ತದೆ!'

ಎಂತಹ ಅದ್ಭುತ ಆಲೋಚನೆ!

ಲಲ್ಲೂ ಕನ್ನಡಿಗರನ್ನು 'ಡರ್ಟಿ ಪೀಪಲ್' ಎಂದರು. ಅದನ್ನು ಸಾಬೀತುಪಡಿಸಲು ಇವರು ಪ್ರಯತ್ನಿಸುತ್ತಿರಬೇಕು! ■

ಕಾಲು ಮತ್ತು ಸಂಗೀತಗಾರ

ಮರೆಯುವ ಮುನ್ನ




■ ಪಿ. ಲಂಕೇಶ್ ಫೆಬ್ರವರಿ 25, 1990

ಈತ ಒಬ್ಬ ಸಂಗೀತಗಾರ. ಹೆಸರು ಸಿ. ಅಶ್ವಥ್. ನಾನು ವರ್ಷಕ್ಕೊಮ್ಮೆ ಕೂಡ ಹೋಗದ ಪಾರ್ಟಿಯೊಂದಕ್ಕೆ ಬಂದಿದ್ದ ಈತ ತನ್ನಲ್ಲಿದ್ದ ಸಿಟ್ಟನ್ನೆಲ್ಲ ಕಾರಿಕೊಳ್ಳಲು ಅವಕಾಶ ಮಾಡಿಕೊಳ್ಳಲೆತ್ನಿಸಿದ. ನನಗೆ ವಿವಾದ ಇಷ್ಟವಿರಲಿಲ್ಲ. ಈತನ ಎಲ್ಲ ಪ್ರಶ್ನೆಗಳಿಗೂ ಸಮಾಧಾನದಿಂದಲೇ ಉತ್ತರಿಸಿದೆ.

"ನಾವು ಸಾರ್ವಜನಿಕವಾಗಿ ಸುಮ್ಮನೇ ಹಾಡಿದರೆ ಅದರಲ್ಲೇನು ತಪ್ಪಿದೆ?" ಕೇಳಿದ.

"ಏನೂ ತಪ್ಪಿಲ್ಲ, ತುಂಬ ಒಳ್ಳೆಯದು."



"ಆದರೂ ನೀವು ಟೀಕಿಸುತ್ತೀರಿ."

"ಇಲ್ಲ, ಈ ನಿಮ್ಮ ಸಾರ್ವಜನಿಕ ಹಾಡುಗಾರಿಕೆಗೆ ಸಮಾಜದ್ರೋಹಿಗಳು, ಪಾತಕಿಗಳು ಹಣ ನೀಡಿದ್ದರೆ, ವ್ಯವಸ್ಥೆ ಮಾಡಿದ್ದರೆ ಸ್ವಲ್ಪ ತಪ್ಪಾಗುತ್ತದೆ" ಅಂದೆ.

"ನೀವು ಹರಿಖೋಡೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳ್ತಿದೀರಿ."

"ಇಲ್ಲ, ಹಾಗೇನಿಲ್ಲ, ಈ ಕ್ಷಣದಲ್ಲಿ ಆತ ಯಾರೆಂಬುದೂ ನನಗೆ ನೆನಪಾಗ್ತಿಲ್ಲ."

"ಸುಮ್ಮನೇ ಹೇಳಬೇಡಿ. ಹರಿ ಎಂಥ ಒಳ್ಳೆಯವರೆಂದು ನಿಮಗೆ ಗೊತ್ತಿಲ್ಲ. ಈತ ಮತ್ತು ಜೆ.ಎಚ್. ಪಟೇಲರು ಮಹಾ ಸಂಗೀತಪ್ರೇಮಿಗಳು. ನನ್ನ ಸಂಗೀತವನ್ನು ಮೆಚ್ಚಿದ ಹರಿಖೋಡೆ ನನ್ನ ಕಾಲಿಗೆ ಬಿದ್ದಿದ್ದಾರೆ."

"ಹೌದಾ?" ಅಂದೆ.

"ಮತ್ತೆ? ಈಗಲಾದರೂ ಆತನ ಸಂಗೀತಜ್ಞಾನ ಮೆಚ್ತೀರಾ?"

"ನನಗೆ ಇಲ್ಲಿಯವರೆಗೆ ಅನುಮಾನವಿತ್ತು, ನಿಮ್ಮ ಕಾಲಿಗೆ ಬಿದ್ದ ಅಂದಮೇಲೆ ಮುಗೀತು–ಅವನಿಗೂ ಸಂಗೀತಕ್ಕೂ, ನಿಮಗೂ ಸಂಗೀತಕ್ಕೂ ಸಂಬಂಧವಿರಲಾರದು" ಅಂದು ನಕ್ಕೆ.

ನಿರೀಕ್ಷಿಸಿದ್ದಂತೆ ಸದರಿ ಅಶ್ವಥ್ ರೇಗಾಡತೊಡಗಿದ. ಸಂಗೀತದ ಮೂಲಕ ತೋರಲಾರದ ಪ್ರತಿಭೆಯನ್ನು ಮಾತಿನ ಮೂಲಕ ತೋರತೊಡಗಿದ.

ಒಂದು ಮುಖ ಊಹಿಸಿ

ಈಗ ನನ್ನ ಮನಸ್ಸು ತುಂಬಿರುವುದು ಬಸವಪ್ಪ ಶಾಸ್ತ್ರಿ ಎಂಬ ಮನುಷ್ಯ. ಈತನನ್ನು ಕುರಿತು ಒಂದೆರಡು ಪುಟ್ಟ ಪುಸ್ತಕ ಓದಿದ್ದೇನೆ; ಇವರ ಅನುವಾದ ಕೃತಿಯಾದ 'ಅಭಿಜ್ಞಾನ ಶಾಕುಂತಲ' ಓದಲು ಯತ್ನಿಸಿ ದಂಗಾಗಿದ್ದೇನೆ. ಹಳೆಗನ್ನಡದಲ್ಲಿರುವ, ಮೂಲಕ್ಕೆ ಪ್ರಾಮಾಣಿಕವಾಗಿದ್ದೂ ತನ್ನದೇ ಆದ ತೇಜಸ್ಸು ಪಡೆದ ಪುಸ್ತಕ ಬಸವಪ್ಪ ಶಾಸ್ತ್ರಿಗಳ 'ಅಭಿಜ್ಞಾನ ಶಾಕುಂತಲ.'

1843 ರಲ್ಲಿ ಹುಟ್ಟಿದ ಬಸವಪ್ಪ ಶಾಸ್ತ್ರಿ ಬದುಕಿದ್ದು 48 ವರ್ಷಗಳ ಕಾಲ. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಇದ್ದ ಗಮಕಿ ಮತ್ತು ಕವಿ ಬಸವಪ್ಪ ಶಾಸ್ತ್ರಿ. ಕೂತಲ್ಲೇ ಕಾವ್ಯ ರಚಿಸಬಲ್ಲ, ಚಿಕ್ಕಮಕ್ಕಳ ಮನಸ್ಸೂ ಕುಣಿಯುವಂತೆ ಹಾಡಬಲ್ಲ, ಎಳೆಯರ ಹುಡುಗಾಟ ಮತ್ತು ಹಿರಿಯರ ಗಾಂಭೀರ್ಯ ಬೆರೆತಿದ್ದ ವ್ಯಕ್ತಿ ಬಸವಪ್ಪ ಶಾಸ್ತ್ರಿ. ಉದಾರಿ, ರಸಿಕ ಮತ್ತು ಸ್ನೇಹಜೀವಿ. ಎಲ್ಲಕ್ಕಿಂತ ಮುಖ್ಯವಾಗಿ ಸ್ವಾಭಿಮಾನಿ. ಒಮ್ಮೆ ಹೀಗಾಯಿತು. ಕೃಷ್ಣರಾಜ ಒಡೆಯರು ತೀರಿಕೊಂಡು ಚಾಮರಾಜ ಒಡೆಯರು ರಾಜರಾಗಿದ್ದರು; ದಿವಾನ್ ರಂಗಾಚಾರ್ಲು ಅವರ ದಿವಾನರು. ಆಸ್ಥಾನದಲ್ಲಿ ಬಸವಪ್ಪ ಶಾಸ್ತ್ರಿಗಳ ವಿರುದ್ಧ ನಡೆದಿದ್ದ ಪಿತೂರಿಗೆ ಪ್ರತಿಯಾಗಿ ಪಿತೂರಿ ಮಾಡಲಾಗದೆ ಬಸವಪ್ಪ ಶಾಸ್ತ್ರಿ ಅರಮನೆಗೆ ಬರುವುದನ್ನೇ ನಿಲ್ಲಿಸಿದರು. ಒಮ್ಮೆ ತಂಜಾವೂರಿನ ನರ್ತಕಿಯೊಬ್ಬಳಿಂದ ನರ್ತನದ ಏರ್ಪಾಟಾಯಿತು. ಆಕೆಯ ನರ್ತನಕ್ಕೆ ಸರಿಯಾಗಿ ಹಾಡುವವರಿರಲಿಲ್ಲ. ರಾಜರು ಬಸವಪ್ಪ ಶಾಸ್ತ್ರಿಗಳಿಗೆ ಹೇಳಿಕಳಿಸಿದರು. ಶಾಸ್ತ್ರಿಗಳು ಬರಲಿಲ್ಲ, ತಮಗೆ ಆಸ್ಥಾನದ ತಂಟೆಯೇ ಬೇಡವೆಂದು ಹೇಳಿದರು. ದಿವಾನ್ ರಂಗಾಚಾರ್ಲುರೇ ಹೋಗಿ ಬೇಡಿಕೊಂಡು ಕರೆತಂದರು. ಶಾಸ್ತ್ರಿ ಅಲ್ಲಿಯೇ ಕವನ ರಚಿಸಿ ಹಾಡಿದರು. ಶಾಸ್ತ್ರಿಗಳ ಅದ್ಭುತ ಗಾಯನ ಮೆಚ್ಚಿದ ಜನ; ನರ್ತಕಿ ಎಷ್ಟು ಚಕಿತಳಾದಳೆಂದರೆ ಆಕೆ ತನ್ನ ಮೆಚ್ಚಿಗೆಯ ಗುರುತಾಗಿ ಶಾಸ್ತ್ರಿಗಳಿಗೆ ಚಿನ್ನದ ನಶ್ಯದ ಡಬ್ಬಿ ಮತ್ತು ಆ ದಿನ ಬಾರಿಸಿದ ತಂಬೂರಿ ನೀಡಿದಳು.

ಬಸವಪ್ಪ ಶಾಸ್ತ್ರಿಗಳ ಇನ್ನೊಂದು ಮುಖವಿದೆ; ಇವರು ಸಾಹುಕಾರ ಪಾಪಣ್ಣ ಎಂಬ ವರ್ತಕರ ಆಪ್ತಮಿತ್ರ. ಈ ಪಾಪಣ್ಣ ಎಂಥ ರಸಿಕರು, ವಿನಯವಂತರು ಎಂದರೆ, ಶಾಸ್ತ್ರಿಗಳ ಹಾಡು ಕೇಳಿ ಗೆಳೆಯರಾದವರು; ಶಾಸ್ತ್ರಿಗಳ ಕೊಡುಗೈ ಹಿಂದಿನ ಸ್ಫೂರ್ತಿಯಾದವರು; ಏಕವಚನದ ಗೆಳೆಯರು. ಈ ಪಾಪಣ್ಣನವರ ಮೇಲೆ ನಮ್ಮ ಸಂಶೋಧಕರು ಒಂದು ಪುಸ್ತಕ ಬರೆಯಬಹುದು. ಮಂಡಿ ವ್ಯಾಪಾರಿ, ರಸಿಕ, ಉದಾರಿ, ವಿನಯವಂತ; ಶಾಸ್ತ್ರಿ ಅರಮನೆಗೆ ಹೋಗದೆ ವಾಸಿಸುತ್ತಿದ್ದುದು ಪಾಪಣ್ಣನವರ ಮನೆಯಲ್ಲಿ. ಈ ಶಾಸ್ತ್ರಿ–ವ್ಯಾಕರಣ, ಧ್ವನ್ಯಾಲೋಕ, ಛಂದಸ್ಸು, ನುಡಿಕಟ್ಟು ಎಲ್ಲ ಅರಿತು ಕನ್ನಡ ಪ್ರೇಮಿಯೂ ಆಗಿದ್ದ ಶಾಸ್ತ್ರಿ–ಹಳೆಗನ್ನಡದಲ್ಲಿ ಬರೆದರೂ ಇವರ ಪ್ರತಿಭೆ ಅಲ್ಲಿ ಚಿಮ್ಮುತ್ತಲೇ ಇದೆ. ಈ ವ್ಯಕ್ತಿಯ ಕಾಲಕ್ಕೆ ಹೊಸಗನ್ನಡ, ಮುದ್ರಣ, ಗದ್ಯ ಇದ್ದಿದ್ದರೆ... ಬಸವಪ್ಪ ಶಾಸ್ತ್ರಿಗಳು ಕುದುರೆಗಾಡಿಯ ಅಪಘಾತದಲ್ಲಿ ಸತ್ತರು. ಅವರು ಸತ್ತಾಗ ಸಾಹುಕಾರ್ ಪಾಪಣ್ಣ ಜೊತೆಗಿದ್ದರು.

ದಟ್ಟ ಪ್ರತಿಭೆಯ, ಆರ್ಥಿಕವಾಗಿ ಬಡವನಾದ, ಆಸ್ಥಾನ ವಿದ್ವಾಂಸರಾಗಿದ್ದೂ ಸಾಮಾನ್ಯನಂತಿದ್ದ ಈ ಶಾಸ್ತ್ರಿ ಮತ್ತು ಪಾಪಣ್ಣ ನೋಡಲು ಹೇಗಿದ್ದರು? ಒಂದು ಚಿತ್ರ ಕೂಡ ಇಲ್ಲ.

ತಸ್ಲೀಮಾ

ಹಿಂಡನಗಲಿದ ಹಾಡುಹಕ್ಕಿ
ಗೊತ್ತು ಕೂರಲೂ ನೆಲೆಯಿರದೆ
ಹಾರುತಿದೆ
ಮರದಿಂದ ಮರಕ್ಕೆ
ಊರಿಂದ ಊರಿಗೆ
ಕಾನಿಂದ ಕಾನಿಗೆ

ದಾರಿ ತಪ್ಪಿದುದಲ್ಲ
ಹಿಂಡು ತೊರೆದುದೂ ಅಲ್ಲ
ಅಲ್ಲದ ತಪ್ಪಿಗೆ ದೊರೆತ
ಒಂಟಿತನದ ಶಿಕ್ಷೆ

ನೆಲದ ಮೇಲೆ ದಳ್ಳುರಿ
ನೆಲೆಯ ಮೇಲೆ ಕಣ್ಣುರಿ
ಸುಡುವಗ್ನಿಯೊಂದೇ ಸುಡುತಿರಲು
ಕಾಣದ ಬಳಗದ ಶೋಧ
ನಡೆದಿದೆ ಅವ್ಯಾಹತ

ಕೇಳಿತೆ ಅದರ
ಒಡಲಾಳದ ಕ್ಷೀಣ ದನಿ?
ದಣಿದ ರೆಕ್ಕೆಗಳ
ಪಟಪಟ ಸದ್ದು?
ಮನದುಂಬಿ ಹರಿಯುತಿಹ
ತವರಿನ ಹಂಬಲ

ಹಾರಾಟ ನಿಲ್ಲಿಸದೆ
ಹೋರಾಟದ ಛಲಬಿಡದೆ
ಗೊತ್ತುಗುರಿಯಿಲ್ಲದೆ
ಗಾಳಿಗೆದುರಾಗಿ
ತೇಲುತಿದೆ ಬಾನ್ಗಡಲ
ದೋಣಿಯಾಗಿ
ತೋರುತಿದೆ ಅಂಬರದ
ಚುಕ್ಕಿಯಾಗಿ



■ ಡಾ. ಎಚ್.ಎಸ್. ಅನುಪಮಾ

ಮಿಲಿಯನ್ ಡಾಲರ್ ಪ್ರಶ್ನೆ!

(2ನೇ ಪುಟದಿಂದ)

ವೆಂದೂ, ತಮ್ಮನ್ನು ಪ್ರಾಯೋಜನೆ ಮಾಡುವ ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಆಡುತ್ತಿದ್ದೇವೆಂದೂ ಸಾಬೀತು ಮಾಡಿದ್ದಾರೆ. ಆದರೂ ಅದು ಅಷ್ಟು ಸ್ಪಷ್ಟವಾಗಿ ಗೋಚರವಾಗದೇ ಇದ್ದದರಿಂದ ಜನ ಇನ್ನೂ ಕ್ರಿಕೆಟ್ ಆಟಗಾರರನ್ನು ತಮ್ಮ ನಾಯಕರೆಂದೂ, ತಮ್ಮ ಸಾಮೂಹಿಕ ಪ್ರತಿಷ್ಠೆಯಾದ ದೇಶಾಭಿಮಾನದ ದ್ಯೋತಕವೆಂದೂ ಕಾಣುತ್ತಾ ಬಂದಿದ್ದಾರೆ.

ಆದರೆ ಈಗ ಕ್ರಿಕೆಟ್ ಜಗತ್ತಿನಲ್ಲಿ ನಡೆದಿರುವ ಬಿರುಗಾಳಿಯಂತ ವಿದ್ಯಮಾನವೊಂದು ಕೇವಲ ಭಾರತೀಯ ಆಟಗಾರರ ದೇಶಭಕ್ತಿಯ ಮುಖವಾಡವನ್ನು ಮಾತ್ರವಲ್ಲ ಜಗತ್ತಿನ ಬಹುಪಾಲು ದೇಶಗಳ ಕ್ರಿಕೆಟ್ ಆಟಗಾರರ ಮುಖವಾಡವನ್ನು ಕಿತ್ತೊಗೆದು ಅವರೊಳಗೆ ಇರುವ ವ್ಯಾಪಾರಿಯನ್ನು ಬಹಿರಂಗಗೊಳಿಸಿದೆ.

ಇತ್ತೀಚೆಗೆ ಭಾರತದ ಕ್ರಿಕೆಟ್ ಮಂಡಳಿ ಬಿಸಿಸಿಐ, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಎಂಬ ಬೃಹತ್ ಕ್ರಿಕೆಟ್ ಆಟದ ವ್ಯಾಪಾರಿ ಸಂಸ್ಥೆ ಒಂದನ್ನು ಹುಟ್ಟುಹಾಕಿತಷ್ಟೆ. ಅದು ಭಾರತವನ್ನು ಎಂಟು ವಿಭಾಗ ಗಳನ್ನಾಗಿ ವಿಭಜಿಸಿ ಒಂದೊಂದು ವಿಭಾಗದ ಕ್ರಿಕೆಟ್ ಹಕ್ಕನ್ನು ಒಂದೊಂದು ಕಂಪನಿಗೆ ಮಾರಿಕೊಂಡಿತು. ಅದು ಸರಿಸುಮಾರು 8000 ಕೋಟಿ ರೂಪಾಯಿಗಳ ವ್ಯವಹಾರ. ಈ ಲೀಗ್ ಬಿಸಿಸಿಐ ಅಧಿಕೃತವಾಗಿ ನಡೆಸುವ ಪಂದ್ಯಗಳನ್ನಲ್ಲದೆ ತಾನೂ ಸಹ 20 ಓವರ್‌ಗಳ ನಲವತ್ತಕ್ಕೂ ಹೆಚ್ಚು ಪಂದ್ಯಗಳನ್ನು ಆಡಿಸುತ್ತದೆ. ಇದಕ್ಕೆ ಒಂದೊಂದು ತಂಡದಲ್ಲಿ ಆ ಪ್ರಾಂತ್ಯದ ಆಟಗಾರರಲ್ಲದೆ ರಾಷ್ಟ್ರೀಯ ಆಟಗಾರರು ಮತ್ತು ಗರಿಷ್ಠ ಇಬ್ಬರು ಅಂತಾರಾಷ್ಟ್ರೀಯ ಆಟಗಾರರನ್ನು ನೊಂದಾಯಿಸಿಕೊಳ್ಳಬಹುದು. ಪ್ರತಿ ತಂಡವು ಆಡುವ ಪ್ರತಿ ಪಂದ್ಯದ ಮೊತ್ತ ಕನಿಷ್ಠ ಒಂದು ಮಿಲಿಯನ್ ಡಾಲರ್ ಅಂದರೆ 12 ಕೋಟಿ ರೂ.ಗಳು.

ಆದರೆ ಐಪಿಎಲ್ ಪ್ರಾಯೋಜಿತ ಪಂದ್ಯದಲ್ಲಿ ಆಡಬೇಕೆಂದರೆ ಅದರ ಜೊತೆ ಒಪ್ಪಂದ ಮಾಡಿಕೊಳ್ಳಬೇಕು. ಹಾಲಿ ತಮ್ಮ ದೇಶದಲ್ಲಿ ಆಡುತ್ತಿರುವ ವಿದೇಶಿ ಆಟಗಾರರು ಐಪಿಎಲ್ ಪಂದ್ಯಗಳಲ್ಲಿ



ಆಡಬೇಕೆಂದರೂ ಆಯಾ ದೇಶಗಳ ಕ್ರಿಕೆಟ್ ಮಂಡಳಿಗಳ ನಿರಪೇಕ್ಷಣಾ ಪತ್ರವನ್ನು ಪಡೆದಿರಬೇಕು. ಒಬ್ಬ ಆಟಗಾರ ನಿವೃತ್ತಿ ಘೋಷಿಸಿದ ನಂತರವೂ ಐಪಿಎಲ್‌ನಲ್ಲಿ ಆಡಬಹುದು. ಆದರೆ ನಿವೃತ್ತಿಯಾಗಿ ಕನಿಷ್ಠ ಎರಡು ವರ್ಷಗಳ ಕೂಲಿಂಗ್ ಪೀರಿಯಡ್ ಕಳೆಯಬೇಕು.

ಆದರೆ ಐಪಿಎಲ್ ಮುಂದಿಟ್ಟಿರುವ ಆಕರ್ಷಣೆ ಯಾವ ಪ್ರಮಾಣದ್ದು ಎಂದರೆ ಹಾಲಿ ಆಡುತ್ತಿರುವ ವಿದೇಶಿ ಮತ್ತು ಭಾರತೀಯ ಆಟಗಾರರು ಇದ್ದಕ್ಕಿದ್ದಂತೆ ನಿವೃತ್ತಿ ಘೋಷಿಸಿ ಐಪಿಎಲ್ ಸೇರಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಈವರೆಗೆ 31 ಭಾರತೀಯ ಮತ್ತು 53 ವಿದೇಶಿ ಹಾಲಿ ಮತ್ತು ನಿವೃತ್ತ ಆಟಗಾರರು ಐಪಿಎಲ್ ಜೊತೆ ಒಪ್ಪಂದ ಮಾಡಿ ಕೊಂಡಿದ್ದಾರೆ. ಈ ಎಲ್ಲಾ ಆಟಗಾರರನ್ನು ಐಪಿಎಲ್‌ನ ಎಂಟು ಫ್ರಾಂಚೈಸಿದಾರರು ಅಂದರೆ ಐಪಿಎಲ್‌ನಿಂದ ಕಾಂಟ್ರಾಕ್ಟು ಪಡೆದಿರುವ ಮಲ್ಯ, ಅಂಬಾನಿ, ಶಾರೂಕ್ ಖಾನ್, ಪ್ರೀತಿ ಜಿಂಟಾ ಇನ್ನಿತ್ಯಾದಿಗಳೆದುರು ಅಕ್ಷರಶಃ ಹರಾಜು ಹಾಕಲಾಗುತ್ತದೆ. ಒಬ್ಬೊಬ್ಬ ಆಟಗಾರನಿಗೂ ಐಪಿಎಲ್ ಕನಿಷ್ಠ ಬಿಡ್ಡಿಂಗ್ ಬೆಲೆಯನ್ನು ನಿಗದಿ ಮಾಡಿದೆ. ಉದಾಹರಣೆಗೆ ಸಚಿನ್ ತೆಂಡೂಲ್ಕರ್, ಸೌರವ ಗಂಗೂಲಿ, ರಾಹುಲ್ ದ್ರಾವಿಡ್, ಯುವರಾಜ್ ಸಿಂಗ್, ಧೋನಿ ಮತ್ತು ಶೇನ್ ವಾರ್ನೆಗಳಿಗೆ ಕನಿಷ್ಠ ಬಿಡ್ಡಿಂಗ್ ಬೆಲೆ 4 ಲಕ್ಷ ಡಾಲರ್ ಅಂದರೆ 1.6 ಕೋಟಿ ರೂ. ಎಂದು ನಿಗದಿ ಮಾಡಲಾಗಿದೆ. ಐಪಿಎಲ್‌ನ ಎಂಟು ಫ್ರಾಂಚೈಸಿಗಳು ಈ ಐವರಲ್ಲಿ ಯಾರಾದರೂ ಬೇಕೆಂದರೆ ಕನಿಷ್ಠ 4 ಲಕ್ಷ ಡಾಲರ್‌ನಿಂದ ಗರಿಷ್ಠ 5 ಲಕ್ಷ ಡಾಲರ್‌ಗಳವರೆಗೆ ಬಿಡ್ ಮಾಡಬಹುದು. ಅದೇ ರೀತಿ ಕುಂಬ್ಳೆ, ಹರಭಜನ್ ಸಿಂಗರ ಕನಿಷ್ಠ ಬೆಲೆ 2.5 ಲಕ್ಷ ಡಾಲರ್, ಇರ್ಫಾನ್ ಪಠಾಣ್ ಬೆಲೆ 1.75 ಲಕ್ಷ ಡಾಲರ್ ಹಾಗೂ ಹೊಸಬ ಇಶಾಂತ್ ಶರ್ಮನ ಕನಿಷ್ಠ ಬೆಲೆ 1 ಲಕ್ಷ ಡಾಲರ್ ಎಂದು ನಿಗದಿ ಮಾಡಲಾಗಿದೆ. ಇದಲ್ಲದೆ ಐಪಿಎಲ್ ಪಂದ್ಯದ ಮೊತ್ತದಲ್ಲೂ ಅವರವರ ಪಾಲೂ ಕೂಡಾ ಸಿಗಲಿದೆ.

ಹೀಗಾಗಿ ಐಪಿಎಲ್‌ನಲ್ಲಿ ಆಡುವುದು ತಮ್ಮ ತಮ್ಮ ದೇಶಗಳಿಗೆ ಆಡುವುದಕ್ಕಿಂತ ಹೆಚ್ಚು ಲಾಭದಾಯಕವಾಗಲಿದೆ ಎಂದು ಅರಿತಿರುವ ಆಟಗಾರರು ಕ್ರಮೇಣ ತಮ್ಮ ತಮ್ಮ ದೇಶದ ಬೋರ್ಡುಗಳ ನಿಯಂತ್ರಣವನ್ನು ತಪ್ಪಿಸಿಕೊಳ್ಳಲು ಹಲವಾರು ತಂತ್ರಗಳನ್ನು ಬಳಸುತ್ತಿದ್ದಾರೆ. ಅದರಲ್ಲಿ ಒಂದು ದಿಢೀರ್ ನಿವೃತ್ತಿ ಘೋಷಿಸುವುದು. ಆದರೆ ಐಪಿಎಲ್ ನಿಯಮಾವಳಿಯಲ್ಲಿ ಎರಡು ವರ್ಷಗಳ ಕೂಲಿಂಗ್ ಪೀರಿಯಡ್ ನಿಯಮ ಇರುವುದು ಈವಾರೆಗೆ ಒಂದು ಅಡ್ಡಿಯಾಗಿತ್ತು, ಆದರೆ ಮೊನ್ನೆ ನಿವೃತ್ತಿ ಘೋಷಿಸಿದ ಆಸ್ಟ್ರೇಲಿಯಾದ ಕೀಪರ್ ಆಡಂ ಗಿಲ್‌ಕ್ರಿಸ್ಟ್‌ನನ್ನು ಮುಂದಿನ ಏಪ್ರಿಲ್‌ನಿಂದ ನಡೆಯಲಿರುವ ಐಪಿಎಲ್ ಪಂದ್ಯಗಳಿಗೆ ಸೆಳೆಯಲು ಈ ಕೂಲಿಂಗ್ ನಿಯಮವನ್ನು ತೆಗೆದು ಹಾಕಲಾಗಿದೆ. ಇದರಿಂದಾಗಿ ಪ್ರಪಂಚಾದ್ಯಂತ ಪ್ರೌಢ ಕ್ರಿಕೆಟ್ ಆಟಗಾರರು ಇನ್ನು ಮುಂದೆ ರಾಜೀನಾಮೆ ಇತ್ತು ಕೇವಲ ಐಪಿಎಲ್‌ಗೆ ಮಾತ್ರ ಆಡಬಹುದೆಂದು ಆಸ್ಟ್ರೇಲಿಯಾ ನಾಯಕ ಪಾಂಟಿಂಗ್ ಸಹ ಅಭಿಪ್ರಾಯ ಪಟ್ಟಿದ್ದಾನೆ.

ಐಪಿಎಲ್‌ನ ಈ ಹಣದ ಪ್ರಲೋಭನೆ ಎಲ್ಲಾ ದೇಶಗಳ ಕ್ರಿಕೆಟ್ ಆಟಗಾರರ ದೇಶಭಕ್ತಿಯ ಮುಖವಾಡವನ್ನು ಸಂಪೂರ್ಣವಾಗಿ ಬಯಲು ಮಾಡಿದೆ. ಮೊನ್ನೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿಯ ವಿರುದ್ಧ ವೇಗಿ ಶೋಯಬ್ ಅಕ್ತರ್ "ನಾನು ಪಾಕಿಸ್ತಾನ ಕ್ರಿಕೆಟ್ ಬೋರ್ಡ್‌ನೊಂದಿಗೆ ಗುತ್ತಿಗೆ ಹೊಂದಿಲ್ಲ, ನಾನು ಐಪಿಎಲ್‌ನಲ್ಲಿ ಆಡಲು ಪಾಕಿಸ್ತಾನದ ಬೋರ್ಡಿನ ನಿರಪೇಕ್ಷಣಾ ಪತ್ರ ಬೇಕಾಗಿಲ್ಲ" ಎಂದು ಬಂಡಾಯವೆದ್ದಿದ್ದಾನೆ. ಮತ್ತೊಂದು ಕಡೆ ಆಸ್ಟ್ರೇಲಿಯಾದ ಶೇನ್ ವಾರ್ನ್ "ಬಿಸಿಸಿಐನ ಐಪಿಎಲ್‌ನಲ್ಲಿ ಆಡುವುದೆಂದರೆ ಅದೊಂದು ಅದ್ಭುತ ಅನುಭವ. ಕ್ರಿಕೆಟ್ ಆಸ್ಟ್ರೇಲಿಯಾ ಅದನ್ನು ವಿರೋಧಿಸುವ ಬದಲು ಅದನ್ನು ಪ್ರೋತ್ಸಾಹಿಸಬೇಕು" ಎಂದು ತಣ್ಣನೆಯ ಬೆದರಿಕೆಯನ್ನು ಒಡ್ಡಿದ್ದಾನೆ. ಆಸ್ಟ್ರೇಲಿಯಾದ ಸೈಮಂಡ್ಸ್ ಮತ್ತು ಬ್ರೆಟ್ ಲೀಗಳ ಏಜೆಂಟ್ ಆದ ನೀಲ್ ಮಾಕ್ಸೆಲ್ ಅಂತೂ ಐಪಿಎಲ್ ಜೊತೆ ಆಡುವುದನ್ನು ನಿರ್ಬಂಧಿಸಿದರೆ ಆಟಗಾರರು ಬಂಡಾಯವೆದ್ದು "ಅವಧಿ ಪೂರ್ವ ನಿವೃತ್ತಿ ಘೋಷಿಸಿ ಸೀದಾ ಐಪಿಎಲ್ ಸೇರಿಕೊಳ್ಳುತ್ತಾರೆ" ಎಂದು ಎಚ್ಚರಿಸಿದ್ದಾನೆ.

ಇದೇ ವಾಸ್ತವ. ಮಿಲಿಯನ್ ಡಾಲರ್‌ನ ಮುಂದೆ ದೇಶವೂ ಇಲ್ಲ, ಕ್ರಿಕೆಟ್ಟೂ ಇಲ್ಲ.

ಮೇಧಾ ಪಾಟ್ಕರ್‌ಗಿಲ್ಲದ ಪ್ರಶಸ್ತಿ ಯಾವ ಲೆಕ್ಕಕ್ಕೆ?

ತೆಗಳಿಕೆ ಹೊಗಳಿಕೆ

'ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್' ಎಂಬ ಏಳು ಕಂತಿನ ಬೆನಜೀರ್ ಜೀವನಚರಿತ್ರೆ, ಪತ್ರಿಕೆಯಲ್ಲಿ ತುಂಬಾ ಚೆನ್ನಾಗಿ ಮೂಡಿಬಂದಿತು. ಸ್ವಾಭಿಮಾನಿಯಾಗಿದ್ದ ಈಕೆ ಸರಿಸುಮಾರು ಒಂಭತ್ತು ವರ್ಷಗಳು ತನ್ನ ದೇಶ ಪಾಕಿಸ್ತಾನದಿಂದ ಗಡಿಪಾರಾಗಿ ಪರದೇಶಗಳಲ್ಲಿ ಆಶ್ರಯ ಪಡೆದು ಮಾನಸಿಕವಾಗಿ ಜರ್ಜರಿತವಾಗಿದ್ದಳೆಂದು ತೋರುತ್ತದೆ. ಇದರಿಂದ ತನ್ನ ದೇಶಕ್ಕೆ ಹಿಂದಿರುಗಬೇಕೆಂಬ ಬಯಕೆಯಿಂದ ತನ್ನ ರಾಜಕೀಯ ಕಡುವೈರಿ ಮತ್ತು ಸರ್ವಾಧಿಕಾರಿ ಮುಷರಫ್‌ನ ಹಿತಾಶಕ್ತಿಗನುಗುಣವಾಗಿ ರಾಜಿ ಮಾಡಿಕೊಂಡು ತನ್ನೆಲ್ಲಾ ಕೇಸುಗಳನ್ನು ಮನ್ನಾ ಮಾಡಿಸಿಕೊಂಡು ನಂತರ ತನ್ನ ಪಕ್ಷದ ಜನರ ಒತ್ತಡಕ್ಕೆ ಮಣಿದು ತಾನು ಮುಷರಫ್‌ನ ಕೈಗೊಂಬೆಯಾಗುವುದಿಲ್ಲವೆಂದು ಸಾರಿ ಹೇಳಿ ದ್ವಂದ್ವ ನೀತಿ ಅನುಸರಿಸಿದಳು. ಈ ಕಾರಣದಿಂದ ಮುಷರಫ್‌ನ ವಿರೋಧ ಕಟ್ಟಿಕೊಂಡು, ಸರ್ಕಾರದ ಸರಿಯಾದ ರಕ್ಷಣೆ ಇಲ್ಲದೆ ತನ್ನ ಜೀವಕ್ಕೆ ತಾನೇ ಸಂಚಕಾರ ತಂದಿಟ್ಟು ಕೊಂಡಳು.



1980ರ ದಶಕದಲ್ಲಿ 'ಭುಟ್ಟೊ' ನಾಟಕ ಬೆಂಗಳೂರಿನಲ್ಲಿ ನಡೆದಿತ್ತು, ಆಗ ಈ 'ಬೆನಜೀರ್'ಳ ಪಾತ್ರ ತುಂಬಾ ಆತುರದ ಮತ್ತು ಹಠಮಾರಿ ಹೆಣ್ಣು ಎಂಬಂತೆ ಕಾಣಿಸಿಕೊಂಡಂತಿತ್ತು, ಅಂದಂತೆ ತನ್ನ ಅಪ್ಪನ ಮರಣ ನಂತರ ಆತನ ರಾಜಕೀಯ ವಾರಸುದಾರಳಾದಳು. ಅಪ್ಪ ಭುಟ್ಟೊನಂತೆಯೇ ರಾಜಕೀಯ ಹುಂಬತನದ ನಿರ್ಧಾರಗಳಿಗೆ ಹೆಸರಾಗಿ ಆತನಂತೆಯೇ ಅಕಾಲಿಕ ಮರಣ ಹೊಂದಿದಳು.

-ಎಚ್.ಕೆ. ಈರಪ್ಪ, ಬೆಂಗಳೂರು

'ಗಿಡುಗಗಳಿಗೆ ಬಲಿಯಾದ ಗಿಳಿ' ಬೆನಜೀರ್, ಚಿತ್ರಣವು ಪ್ರಪಂಚದ ಪ್ರಚಲಿತ ಅಮಾನುಷತೆಗಳ ವಿವಿಧ ಮುಖಗಳನ್ನು ಕೊಟ್ಟಿತು.

ಪತ್ರಿಕೆಯ ಒಂದೊಂದು ಪುಟವೂ ವಿಷಯಾಸಕ್ತ ಓದುಗನನ್ನು ಆಲೋಚನೆಗೆ ಹಚ್ಚುತ್ತದೆ.

-ಪಿ. ಗೋಕುಲ್‌ದಾಸ್, ಮಂಗಳೂರು

ಕಳೆದ ಇಪ್ಪತ್ತು ವರ್ಷಗಳಿಂದ ಪರಿಸರ ರಕ್ಷಣೆ ಮತ್ತು ನಿರಾಶ್ರಿತರ ಪುನರ್ವಸತಿಗಾಗಿ ಹೋರಾಡುತ್ತಿರುವ ಮೇಧಾ ಪಾಟ್ಕರ್‌ಗಿಲ್ಲದ ಪ್ರಶಸ್ತಿ, ತನ್ನ ಪಾಡಿಗೆ ತಾನು ಮರಗಳನ್ನು ಬೆಳೆಸುತ್ತಿರುವ ಸಾಲುಮರದ ತಿಮ್ಮಕ್ಕನಿಗಿರದ ಪ್ರಶಸ್ತಿ, ಮೇಲ್ಜಾತಿಯ ಬಂಡವಾಳಶಾಹಿ ನಾರಾಯಣ ಮೂರ್ತಿಗೆ. ಜಾತಿಯನ್ನೇ ಬಂಡವಾಳ ಮಾಡಿಕೊಂಡು ಮುಗ್ಧರ ಭಕ್ತಿಯನ್ನು exploit ಮಾಡ್ತಾ ಇರೋ ಗೌರಿಶಂಕರನಂಥೋರಿಗೆ, ಲಕ್ಷ್ಮಿ ಮಿತ್ತಲ್‌ನಂಥ ಬಂಡ ವಾಳಶಾಹಿ ಸ್ವಾರ್ಥಿಗೆ, ದುಡ್ಡು ಮಾಡಿಕೊಳ್ಳುತ್ತಲೇ ಬಹುರಾಷ್ಟ್ರೀಯ ಕಂಪನಿಗಳ ಉತ್ಪಾದನೆಗಳಿಗೆ ಜಾಹೀರಾತುಗಳ ರೂಪದರ್ಶಿಯಾಗಿ ಸ್ವದೇಶಿ ಎಂಬುದರ ಅರಿವೇ ಇಲ್ಲದ ತೆಂಡೂಲ್ಕರ್‌ನಂಥವರಿಗೆ. ಇಂತಹ ಜನರಿಗೆ ಪದ್ಮ ಪ್ರಶಸ್ತಿಗಳನ್ನು ನೀಡಿರುವ ಸರ್ಕಾರ ಇಂಡಿಯಾದ ಜನತೆಗೆ ಅವಮಾನ ಮಾಡಿದೆ.

ಪಡೆಯುವರಿಗೆ ಇಲ್ಲದ ನಾಚಿಕೆ ಕೊಡುವವರಿಗಾದರೂ ಎಲ್ಲಿಂದ ಬರಬೇಕು? ಹೇಳಿ.

-ಕು.ಸ. ಮಧುಸೂದನ, ರಂಗೇನಹಳ್ಳಿ

ಲಂಕೇಶ್ (6.2.08) ಓದಿದೆ. ತುಂಬಾ ಸಂತೋಷವಾಯ್ತು, 'ಕಂಡಹಾಗೆ' ತುಂಬಾ ಮೆಚ್ಚುಗೆಯಾಯ್ತು.

'ಪ್ರಶಸ್ತಿಗಳ ಹರಾಜ್' ಇದು 100ಕ್ಕೆ 100 ಸತ್ಯ. ಶತ್ರುಗಳು ಕೂಡ ಒಪ್ಪಬೇಕು. ಕೇಂದ್ರ ಸರ್ಕಾರಕ್ಕೆ ಇದೂ ಗೊತ್ತಿಲ್ಲವೆಂದರೆ ಅದು ಸರ್ಕಾರವೇ ಅಲ್ಲ.

ನ್ಯಾಯಮೂರ್ತಿ ರಾಜೇಂದರ್ ಸಚಾರ್ ಪ್ರಶಸ್ತಿಯನ್ನು ತಿರಸ್ಕರಿಸಿದ್ದು ತುಂಬ ಮೆಚ್ಚಬೇಕಾದ ವಿಷಯ. ಅದು ಸತ್ವಶಾಲಿಗಳ ಸ್ವಾಭಾವಿಕ ಕ್ರಿಯೆಯಾದರೂ, ಸರ್ಕಾರಿ ಪ್ರಶಸ್ತಿಯನ್ನು ತಿರಸ್ಕರಿಸುವ ಗತ್ತನ್ನು ಪ್ರತಿಯೊಬ್ಬರೂ ಮೆಚ್ಚಬೇಕು, ಶ್ಲಾಘಿಸಬೇಕು ಮತ್ತು ಸಂಪೂರ್ಣವಾಗಿ ಬೆಂಬಲಿಸಬೇಕು.

ಮತ್ತೊಂದು ವಿಷಯವೇಂದರೆ ನ್ಯಾ. ಸಚಾರ್ ಪ್ರಶಸ್ತಿಯನ್ನು ತಿರಸ್ಕರಿಸಿದ್ದು (ನನ್ನನ್ನೂ ಒಳಗೊಂಡು) ಯಾರಿಗೂ ಗೊತ್ತಿರಲಿಲ್ಲ, ಇದು ಮಾಧ್ಯಮಗಳ ಕಾರ್ಯವೈಖರಿಯನ್ನು ತೋರಿಸುತ್ತದೆ.

ಇನ್ನು ಮಹಿಳೆಯರಿಗೆ ಸಂಬಂಧಿಸಿದಂತೆ, ತಸ್ಲೀಮಾ ನಸ್ರಿನ್‌ರನ್ನು ಸರ್ಕಾರ ನಡೆಸಿಕೊಳ್ಳುತ್ತಿರುವ ರೀತಿಯೂ ಅತ್ಯಂತ ಹೇಸಿಗೆ ತರುವಂತದ್ದು.

ಮತ್ತೊಂದು ವಿಷಯ: ರೈಲ್ವೆ ನೇಮಕಾತಿ ಹಾಗೂ ಮಹಿಳಾ ವಿಶ್ವ ವಿದ್ಯಾಲಯದ ಪ್ರಮುಖ ಸ್ಥಾನಕ್ಕೆ ಕನ್ನಡಿಗರನ್ನು ವಂಚಿಸಿ ಹೊರಗಿನವರನ್ನು ನೇಮಿಸುತ್ತಿರುವ ವಿಷಯದಲ್ಲಿ ಪ್ರಪ್ರಥಮವಾಗಿ ಧ್ವನಿ ಎತ್ತಿದ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ)ಗೆ ಬೆಲೆ ಕೊಡಲೇಬೇಕು. ಕ.ರ.ವೇ. ಧ್ವನಿ ಎತ್ತದಿದ್ದರೆ ಉಳಿದವರೆಲ್ಲಾ ಮಲಗಿ ನಿದ್ರೆಯಲ್ಲಿ ಇರುತ್ತಿದ್ದರು. ಇದಕ್ಕೆ ಸಮರ್ಥನೆ ಅನಗತ್ಯ. ಹೀಗಿರುವಾಗ ನಾರಾಯಣಗೌಡರನ್ನು ನೀವು ಜರಿಯುತ್ತಿರುವುದು ಏಕೆಂದು ಗೊತ್ತಾಗಲಿಲ್ಲ. ಬೇರೆ ವಿಷಯಗಳಲ್ಲಿ ನೀವು ನಾರಾಯಣಗೌಡರನ್ನು ಒಪ್ಪದಿರಬಹುದು. ಅಂದಮಾತ್ರಕ್ಕೆ ಒಳ್ಳೆಯ ಕೆಲಸ ಮಾಡಿದಾಗಲೂ ಒಪ್ಪದಿರುವುದು ಸರಿಯಲ್ಲ. ಯಾರೂ ಎಲ್ಲದರಲ್ಲೂ ಒಪ್ಪಿಗೆಯಾಗಲು ಸಾಧ್ಯವಿಲ್ಲ. ಆದ್ದರಿಂದ "give the devil it's due" ಎಂಬಂತೆ ಮೇಲಿನ ವಿಷಯ ಗಳಿಗೆ ಸಂಬಂಧಿಸಿದಂತೆ ಕ.ರ.ವೇ.ಯನ್ನು ಎಲ್ಲರೂ ಒಪ್ಪಲೇಬೇಕು. (ಮೆಚ್ಚದಿದ್ದರೂ ಸರಿ)

-ವೀರಖ್ಯಾತಯ್ಯ, ಬೆಂಗಳೂರು




ಜೆ. ರಾಜಶೇಖರ್‌ರವರು ತಮ್ಮ 'ಭಯೋತ್ಪಾದನೆ: ಕನ್ನಡ ಮಾಧ್ಯಮಗಳ ಸಮೂಹ ಸನ್ನಿ' ಲೇಖನದಲ್ಲಿ (ಫೆಬ್ರವರಿ 20, 2008 ಸಂಚಿಕೆ) "ಪ್ರಜಾಪ್ರಭುತ್ವದಲ್ಲಿ ಲಭ್ಯವಿರುವ ಎಲ್ಲ ಅವಕಾಶಗಳನ್ನು ಯಾವುದೇ ದಯ ದಾಕ್ಷಿಣ್ಯಗಳಿಲ್ಲದೆ ಬಳಸಿಕೊಳ್ಳುವುದರಲ್ಲಿ ನಕ್ಸಲೀಯರು ಕೂಡ ನಯವಂಚಕರು" ಎಂದು ಬರೆದಿದ್ದಾರೆ.

ನಮ್ಮ ಹೋರಾಟದ ಹಾದಿಯ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯಗಳಿರಬಹುದು, ಅದು ಅವರ ಹಕ್ಕು. ಆದರೆ ನಾವು ಯಾವ "ನಯವಂಚನೆಯಲ್ಲಿ" ತೊಡಗಿಲ್ಲ ಎಂದು ರಾಜಶೇಖರ ಅವರಿಗೆ ಸ್ಪಷ್ಟಪಡಿಸುವುದಕ್ಕೆ ಇಚ್ಛಿಸುತ್ತೇವೆ. ಹಾಗೊಮ್ಮೆ ನಾವು "ನಯವಂಚಕ"ರಾಗಿದ್ದರೆ, ಅದನ್ನು ಅವರು ಸಾಬೀತುಪಡಿಸಿದರೆ, ನಾವು ನಮ್ಮನ್ನು ತಿದ್ದುಕೊಳ್ಳುತ್ತೇವೆ ಎಂದೂ ಹೇಳಲಿಚ್ಛಿಸುತ್ತೇವೆ.

-ಗಂಗಾಧರ, ಸಿಪಿಎಂ (ಮಾವೋವಾದಿ) ಪಕ್ಷದ ಪರವಾಗಿ

ಬಾಬಾ ಆಮ್ಟೆಯವರನ್ನು ಕುರಿತ ಕಳೆದ ವಾರದ 'ಕಂಡಹಾಗೆ'ಯಲ್ಲಿ ಎರಡು ತಪ್ಪುಗಳು ಪ್ರಕಟವಾಗಿವೆ. ಮೊದಲನೆಯದಾಗಿ ಮಹಾರಾಷ್ಟ್ರದಲ್ಲಿರುವ ಮಹಾತ್ಮಾಗಾಂಧಿಯವರ ಕೊನೆಯ ಆಶ್ರಮದ ಹೆಸರು ಸೇವಾಗ್ರಾಮ. (ಸಬರಮತಿ ಇರುವುದು ಗುಜರಾತಿನಲ್ಲಿ). ನಾನು ಭೇಟಿ ನೀಡಿದ್ದು ಸೇವಾಗ್ರಾಮಕ್ಕೆ, ಎರಡನೆಯದಾಗಿ ನಾನು ಪಿಯುಸಿಯಲ್ಲಿದ್ದದ್ದು 1978ರಲ್ಲಿ (1988ರಲ್ಲಲ್ಲ). ಸಮಯದ ಒತ್ತಡ ಮತ್ತು ಕೆಲಸದ ಗಡಿಬಿಡಿಯಲ್ಲಾದ ಈ ತಪ್ಪುಗಳನ್ನು ಕ್ಷಮಿಸುತ್ತೀರೆಂದು ಭಾವಿಸುವೆ.

-ಗೌರು



ಹತ್ತು ಚಿತ್ರಗಳ ಸರಕುದಾರ ಭಟ್ಟರು!


'ಗಾಳಿಪಟ'ವನ್ನು ಹಾರಿ ಬಿಟ್ಟ ನಂತರ ಉಜಿರೆಯಲ್ಲಿರುವ ಧರ್ಮಸ್ಥಳದ ಆಯುರ್ವೇದ ನಿಸರ್ಗ ಚಿಕಿತ್ಸಾಕೇಂದ್ರಕ್ಕೆ ದಾಖಲಾಗಿದ್ದ ನಿರ್ದೇಶಕ ಯೋಗರಾಜ್ ಭಟ್ ಈಗ ತಮ್ಮ ದೇಹ ತೂಕವನ್ನು ಇಳಿಸಿ ಬೆಂಗಳೂರಿಗೆ ವಾಪಾಸಾಗಿದ್ದಾರೆ. ಹಾಗೆ ಬಂದವರಿಗೆ ಗಣೇಶನ ಮದುವೆಯ ಅನಿರೀಕ್ಷಿತ ಸ್ವಾಗತವೂ ಸಿಕ್ಕಿದೆ.

'ಗಾಳಿಪಟ'ದ ನಂತರ ಈಗ ಯೋಗರಾಜ್ ಭಟ್ ಪವರ್ ಸ್ಟಾರ್ ಪುನೀತ್‌ಗಾಗಿ ಕತೆ ಹೆಣೆಯುವುದರಲ್ಲಿ ಮಗ್ನರಾಗಿದ್ದಾರೆ. ಅಮೋಘ ಮೂರನೇ ಪ್ರಯತ್ನದ ನಂತರವಾದರೂ ಅವರಿಗೆ ಪುನೀತ್ ಸಿಕ್ಕಿದ ಬಗ್ಗೆ ತೃಪ್ತಿ ಇದೆ.

ಈ ಮಧ್ಯೆ ತನಗೆ "ಹಿಂದಿ ಚಿತ್ರ ನಿರ್ದೇಶಿಸುವ ಅವಕಾಶವೂ ಬಂದಿದೆ; ಅದನ್ನು ಒಪ್ಪಿಕೊಳ್ಳುವ ಸಾಧ್ಯತೆಯಿದೆ. ಆದರೆ ರಜನೀಕಾಂತ್, ಚಿರಂಜೀವಿಯಂತಹವರ ಚಿತ್ರ ನಿರ್ದೇಶಿಸಲು ಆಗೋದಿಲ್ಲ; ಅದಕ್ಕಾಗಿ ಆ ಅವಕಾಶಗಳನ್ನು ತಿರಸ್ಕರಿಸಿದ್ದೇನೆ" ಎಂದು ಭಟ್ ಹೇಳಿದ್ದಾರೆ. "ಕನ್ನಡದಲ್ಲಿ ಕನಿಷ್ಟ ಹತ್ತಾರು ಸಿನಿಮಾಗಳನ್ನು ಮಾಡುವ ಸರಕು ನನ್ನಲ್ಲಿದೆ" ಎಂದೂ ಇನ್ನೊಂದು ಗಾಳಿಪಟವನ್ನು ಹಾರಿಸಿದ್ದಾರೆ. ಈ ಮಾತನ್ನು ಗಾಂಧಿನಗರದ ಪಂಡಿತರು ನಂಬಿಕೊಂಡು ಅವರ ಕಾಲ್‌ಶೀಟ್ ಪಡೆಯಲು ಅವರ ಮನೆಗೆ ಹೋಗಲಾರಂಭಿಸಿದ್ದಾರೆ. ಆದರೆ ಹಿಂದಿಯ ಚಿತ್ರ ಮಾಡುತ್ತೇನೆಂದು ಹೇಳಿ ಕನ್ನಡದಲ್ಲೇ ಗಟ್ಟಿಯಾಗಿ ಉಳಿದುಕೊಳ್ಳಲು ಭಟ್ಟರು ವೇದಿಕೆ ನಿರ್ಮಿಸಿದ್ದಾರೆ ಎಂಬುದು ಅವರಿಗೆ ಗೊತ್ತಾಗುತ್ತಿಲ್ಲ.

ಈ ಹಿಂದೆ 'ಜೋಗಿ' ಚಿತ್ರ ಹಿಟ್ ಆದಾಗ ಅದರ ನಿರ್ದೇಶಕ ಪ್ರೇಮ್ ಕೂಡಾ ಇದೇ ರೀತಿ "ರಜನೀಕಾಂತ್ ಚಿತ್ರ ಮಾಡಲು ಹೋಗುತ್ತೇನೆ" ಎಂದು ಗಾಂಧಿನಗರದವರನ್ನು ಹೆದರಿಸಿದ್ದರು. ಆದರೆ ಅವರು ಎಲ್ಲೂ ಹೋಗಲಿಲ್ಲ ಮಾತ್ರವಲ್ಲ, ಇಲ್ಲೇ ಇದ್ದೂ ಗೆಲ್ಲಲಿಲ್ಲ ಎಂಬುದು ಬೇರೆ ಮಾತು!

ಎಣ್ಣೆ ಕಂಬದ ಪುರಾಣ!




ಸಿನಿಮಾಗಳನ್ನು ಬಿಡುಗಡೆ ಮಾಡುವ ಹೊತ್ತಿನಲ್ಲಿ ಪ್ರೇಕ್ಷಕರನ್ನು ಥಿಯೇಟರ್‌ಗೆ ಸೆಳೆಯಲು ಹಲವಾರು ರೀತಿಯ ಪ್ರಯತ್ನಗಳನ್ನು ನಿರ್ಮಾಪಕರು ಮಾಡುತ್ತಾರೆ. ಈ ಹಿಂದೆ ಗುಲ್ಜಾರ್ ಖಾನ್ ಎಂಬ ವ್ಯಕ್ತಿ ತನ್ನ ಚಿತ್ರವನ್ನು ನೋಡಲು ಬಂದ ಜನರಿಗೆ ಪಾತ್ರೆ-ಪಗಡೆಗಳನ್ನು ಹಂಚಿದ್ದ. ರವಿಚಂದ್ರನ್‌ರಂಥ ಸ್ಟಾರ್ ನಟರು ಕೂಡ ಥಿಯೇಟರಿನ ಮುಂದೆ ಕಾರು, ಬೈಕುಗಳನ್ನು ನಿಲ್ಲಿಸಿ ಅದೃಷ್ಟವಂತ ಪ್ರೇಕ್ಷಕರಿಗೆ ಅದನ್ನು ನೀಡುತ್ತಿದ್ದರು. ಮೊನ್ನೆ ಮೊನ್ನೆ ತಾನೆ ಬಿಡುಗಡೆಯಾದ 'ನವಶಕ್ತಿ ವೈಭವ' ಚಿತ್ರವನ್ನು ನೋಡಲು ಬಂದ ಮಹಿಳಾ ಪ್ರೇಕ್ಷಕರಿಗೆ ಉಚಿತ ಪ್ರದರ್ಶನವನ್ನು ಏರ್ಪಡಿಸಿದ್ದರು. ಆದರೂ ಆ ಚಿತ್ರ ಮಕಾಡೆ ಮಲಗುವುದನ್ನು ತಡೆಯಲಾಗಲಿಲ್ಲ.

ಇಷ್ಟೆಲ್ಲ ಪೀಠಿಕೆ ಯಾಕೆಂದರೆ ಈಗ 'ಸತ್ಯ ಇನ್ ಲವ್' ಚಿತ್ರದ ವಿತರಕ ಭಾಷಾ ಎಂಬುವವರು ಇಂತಹದ್ದೇ ಒಂದು ಹೊಸ ಮಜಬೂತಾದ ಪ್ರಯತ್ನಕ್ಕೆ ಕೈ ಹಾಕಿದ್ದಾರೆ.

ಈ ಸಿನಿಮಾ ಬಿಡುಗಡೆಯಾಗುವ ಒಂದು ವಾರಕ್ಕೆ ಮುನ್ನ ಥಿಯೇಟರಿನ ಮುಂದೆ ಒಂದು ಕಂಬವನ್ನು ನೆಟ್ಟು ಅದಕ್ಕೆ ಎಣ್ಣೆ ಸವರುತ್ತಾರಂತೆ. ಈ ಕಂಬವನ್ನು ಸಂಪೂರ್ಣವಾಗಿ ಹತ್ತಿ ಗಡಿಗೆ ಕೀಳುವ ಸ್ಪರ್ಧೆಯಲ್ಲಿ ಗೆದ್ದವರಿಗೆ ಹತ್ತಿಪ್ಪತ್ತು ಟಿಕೇಟು ಉಚಿತವಾಗಿ ನೀಡುತ್ತಾರಂತೆ. ಆದರೆ ಸರಿಯಾಗಿ ಏಣಿ ಹತ್ತಲೂ ಬಾರದ ನಮ್ಮ ನಗರವಾಸಿ ಜನ ಈ ಎಣ್ಣೆ ಕಂಬವನ್ನು ಹತ್ತುವುದಾದರೂ ಎಲ್ಲಿಂದ? ಹಾಗೊಮ್ಮೆ ಟಿಕೇಟಿನ ಆಸೆಗಾಗಿ ಕಂಬ ಹತ್ತಲು ಹೋಗಿ ಆಗಬಾರದ ಜಾಗಕ್ಕೇನಾದರೂ ಆದರೆ ಭಾಷಾ ಘೋಷಾ ಧರಿಸಿ ಓಡಾಡಬೇಕಾಗುತ್ತೆ ಎಂಬುದಂತೂ ಸತ್ಯ.

ಶಾರುಖ್‌ನ ಮಕ್ಕಳ ಚಿತ್ರ



ಒಂದೆಡೆ ಅಮಿರ್ ಖಾನ್ ನಿರ್ದೇಶಿಸಿ, ಅಭಿನಯಿಸಿರುವ 'ತಾರೆ ಜಮೀನ್ ಪರ್' ಚಿತ್ರ ಬಿಡುಗಡೆಗೊಂಡು 'ಪ್ರತಿಯೊಬ್ಬ ತಂದೆ ತಾಯಂದಿರೂ ನೋಡಲೇಬೇಕಾದ ಚಿತ್ರ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಭಾರೀ ಸುದ್ದಿ ಮಾಡುತ್ತಿದ್ದರೆ, ಇನ್ನೊಂದೆಡೆ ಬಾಲಿವುಡ್ ಬಾದ್‌ಶಾ ಶಾರುಖ್ ಖಾನ್, ಈ ಯಾಂತ್ರಿಕ ಯುಗದಲ್ಲಿ ಮಕ್ಕಳು ಹೇಗೆ ದಾರಿ ತಪ್ಪುತ್ತಿದ್ದಾರೆ ಮತ್ತು ಅದರಿಂದ ಹೊರಬರುವ ಹಾದಿ ಯಾವುದು ಎಂಬುದರ ಬಗ್ಗೆ ಚಿತ್ರವೊಂದನ್ನು ಮಾಡುವ ಆಲೋಚನೆಯಲ್ಲಿ ಮುಳುಗಿದ್ದಾನೆ.

ಮಕ್ಕಳ ಚಿತ್ರ ಎಂದ ಮಾತ್ರಕ್ಕೆ ಇದು ಕಮ್ಮಿ ಬಜೆಟ್ ಚಿತ್ರ ಎಂದೇನೂ ಭಾವಿಸುವಂತಿಲ್ಲ. ಬರೋಬ್ಬರಿ 100 ಕೋಟಿಗಳ ಬೃಹತ್ ಬಂಡವಾಳವನ್ನು ಈ ಚಿತ್ರಕ್ಕಾಗಿ ಹೂಡಲು ತಯಾರಾಗಿದ್ದಾನೆ ಶಾರುಖ್. ಅತ್ಯಾಧುನಿಕ ಕಂಪ್ಯೂಟರ್ ಗ್ರಾಫಿಕ್ಸ್, ಅನಿಮೇಶನ್ ತಂತ್ರಜ್ಞಾನವನ್ನು ಬಳಸುವುದು ಶಾರುಖ್‌ನ ಕನಸು. ಈ ಕಾರಣಕ್ಕಾಗಿಯೇ ರಜನಿಯ 'ರೋಬೋಟ್' ಚಿತ್ರವನ್ನು ನಿರ್ಮಿಸುತ್ತಿರುವ ಏರೋಸ್ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆಯೊಂದಿಗೂ ಮಾತುಕತೆ ನಡೆಸುತ್ತಿದ್ದಾನೆ ಶಾರುಖ್.

ಹಾಗೇನಾದರೂ ಈ ಚಿತ್ರ ಅಂದುಕೊಂಡಂತೆಯೇ ಮೂಡಿಬಂದರೆ ಮಕ್ಕಳ ಚಿತ್ರಕ್ಕಾಗಿ ಇಷ್ಟು ದೊಡ್ಡ ಬಜೆಟ್ ಹೂಡಿದ ಹೆಗ್ಗಳಿಕೆ ಶಾರುಖ್‌ಗೆ ಸಲ್ಲುತ್ತದೆ.

'ರೋಬೋಟ್'ನಲ್ಲಿ ಅರ್ಜುನ್

ಸೂಪರ್ ಸ್ಟಾರ್ ರಜನಿಕಾಂತ್‌ರ ಬಿಗ್ ಬಜೆಟ್ ಚಿತ್ರ 'ರೋಬೋಟ್' ಬಗೆಗಿನ ಸುದ್ದಿಗಳು ದಿನದಿಂದ ದಿನಕ್ಕೆ ಅನೇಕ ತಿರುವುಗಳನ್ನು ಪಡೆಯುತ್ತಿದೆ.



ಇತ್ತೀಚೆಗೆ ಬಂದ ಸುದ್ದಿಯ ಪ್ರಕಾರ 'ರೋಬೋಟ್' ಚಿತ್ರದಲ್ಲಿ ಮತ್ತೊಬ್ಬ ಆಕ್ಷನ್ ಹೀರೋ ಅರ್ಜುನ್ ಸರ್ಜಾ ಕೂಡಾ ವಿಶೇಷ ಪಾತ್ರವೊಂದರಲ್ಲಿ ನಟಿಸುತ್ತಿದ್ದಾನಂತೆ. ಹೀಗೆ ಒಬ್ಬ ಸ್ಟಾರ್‌ನೊಂದಿಗೆ ನಟಿಸುವುದು ಅರ್ಜುನ್ ಸರ್ಜಾನಿಗೆ ಹೊಸತೇನಲ್ಲ. ಈ ಹಿಂದೆ 'ಕೃತಿಪೊನಲ್' ಎಂಬ ಚಿತ್ರದಲ್ಲಿ ಕಮಲ್‌ಹಾಸನ್‌ನಂತಹ ಮಹಾನ್ ನಟನೊಂದಿಗೂ ನಟಿಸಿ ಭೇಷ್ ಎನಿಸಿಕೊಂಡಿದ್ದ ನಮ್ಮ ಸರ್ಜಾ.

ಒಟ್ಟಿನಲ್ಲಿ ಕನ್ನಡದಿಂದ ಬೇರೆ ಭಾಷೆಗಳಿಗೆ ಹೋಗಿ ಇಷ್ಟೊಂದು ಎತ್ತರಕ್ಕೆ ಏರಿರುವ ರಜನಿಯೊಂದಿಗೆ ಆತನ ದಾರಿಯಲ್ಲೇ ಸಾಗಿದ ಮತ್ತೊಬ್ಬ ಕನ್ನಡದ ಪ್ರತಿಭೆ ಅರ್ಜುನ್ ಸರ್ಜಾ ಜೊತೆಯಾಗುತ್ತಿರುವುದು ವಿಶೇಷವೇ ಸರಿ.


'ಮೇಷ್ಟ್ರು' ಜೊತೆ ಬರುತ್ತಿರುವ ಭಾನುಪ್ರಿಯಾ



ತಮಿಳಿನ ಮೆಗಾ ಸೀರಿಯಲ್ಲುಗಳಲ್ಲಿ ಬ್ಯುಸಿ ನಟಿಯಾಗಿರುವ ಭಾನುಪ್ರಿಯಾ ಎಂಬ ಅಂದಕಾಲತ್ತಿಲ್ ಸುಂದರಿ ಮತ್ತೆ ಕನ್ನಡ ಚಿತ್ರದಲ್ಲಿ ಕಾಣಿಸುತ್ತಿದ್ದಾಳೆ. ದೇವರಾಜ್ ನಾಯಕನಟನಾಗಿ ನಟಿಸುತ್ತಿರುವ 'ಮೇಷ್ಟ್ರು' ಎಂಬ ಚಿತ್ರಕ್ಕೆ ಈಕೆಯೇ ನಾಯಕಿ.

ಈ ಹಿಂದೆ ಆಕೆ ರವಿಚಂದ್ರನ್ ಜೊತೆ 'ರಸಿಕ' ಚಿತ್ರದಲ್ಲಿ ಮಳೆಯಲ್ಲಿ ತೊಯ್ದು ಮಾದಕವಾಗಿ ನಟಿಸಿದ್ದಳು. ಆದರೆ ಆಗ ಜೂಹಿ ಚಾವ್ಲಾ, ಖುಷ್ಬು ಮೊದಲಾದ ಎಳೆ ನಿಂಬೆಗಳ ಜೊತೆ ಚೆಲ್ಲಾಟವಾಡಿದ್ದ ರವಿಚಂದ್ರನ್‌ರ ಅಭಿಮಾನಿಗಳಿಗೆ ಭಾನುಪ್ರಿಯಾ ಅಷ್ಟೇನೂ ಇಷ್ಟವಾಗಿರಲಿಲ್ಲ. ಆನಂತರ ಸ್ವಲ್ಪ ಗ್ಯಾಪ್ ನಂತರ ಈಕೆ ವಿಷ್ಣುವರ್ಧನ್ ಜೊತೆ 'ಸಿಂಹಾದ್ರಿಯ ಸಿಂಹ'ದಲ್ಲಿ 'ಮಲ್ನಾಡ್ ಅಡಿಕೆ ಮೈಸೂರ್ ವಿಳ್ಯೆದೆಲೆ ಬೆರೆತರೇ ಕೆಂಪು...' ಎಂದು ಹಾಡಿ ಕುಣಿದುಹೋಗಿದ್ದಳು. ಅದಾದನಂತರ ಈಗ ದೇವರಾಜ್ ಎಂಬ 'ಮೇಷ್ಟ್ರು' ಜೊತೆ ಮೂರನೇ ಬಾರಿಗೆ ಕನ್ನಡಕ್ಕೆ ಬರುತ್ತಿದ್ದಾಳೆ...

ಅದೇನೇ ಇರಲಿ, ತನ್ನ ಮಾದಕ ಕಣ್ಣುಗಳಿಂದಲೇ ತಮಿಳು ಚಿತ್ರರಂಗದವರನ್ನು ಬೆರಗು ಮಾಡಿದ್ದ ಈ ಭಾನುಪ್ರಿಯಾ ಕಮಲ್, ರಜನಿ ತರಹದ ದೊಡ್ಡದೊಡ್ಡ ತಲೆಗಳೊಂದಿಗೆ ಸೆಣಗಿದವಳು. ಇಂತಹ ನಟಿಗೆ 'ಮೇಷ್ಟ್ರು' ಅದೆಂತಹ ಪಾಠ ಕಲಿಸುತ್ತಾರೋ ಅಥವಾ ಕಲಿಯುತ್ತಾರೋ ನೋಡೋಣ.



'ಇಂತಿ ನಿನ್ನ ಪ್ರೀತಿಯ' ಚಿತ್ರದಲ್ಲಿ ಭಾವನಾ

ಸ್ವಾಭಿಮಾನಿ ಮನೋಜ್



ಕನ್ನಡದ ಹಲವಾರು ಚಿತ್ರಗಳಿಗೆ ಕೊರಿಯೋಗ್ರಫಿ ಮಾಡುತ್ತಿದ್ದ ಚಂದ್ರಶೇಖರ್ ಎಂಬುವವರು 'ನಿನ್ನಲ್ಲೆ ಈ ಹೃದಯ' ಎಂಬ ಹೊಸ ಚಿತ್ರವನ್ನು ಸದ್ದಿಲ್ಲದೇ ಮಾಡಿ ಮುಗಿಸಿದ್ದಾರೆ. ಈ ಚಿತ್ರದಲ್ಲಿ ಮನೋಜ್ ಎಂಬ ಹೊಸ ಹುಡುಗ ನಾಯಕ. ಬೆಕ್ಕಿನ ಕಣ್ಣಿರುವ ಈ ಹುಡುಗ ನೋಡಲು ದರ್ಶನ್‌ನಂತಿದ್ದಾನಲ್ಲದೆ, ಅಷ್ಟೇ ಎತ್ತರ ಕೂಡ ಇದ್ದಾನೆ.

ಈಗಾಗಲೇ 'ತನುಮನ', 'ಸಿಲ್ಲಿಲಲ್ಲಿ', 'ಕಾವ್ಯಾಂಜಲಿ' ತರಹದ ಸೀರಿಯಲ್ಲುಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ಈತ ಸದ್ಯದ ಕನ್ನಡ ಚಿತ್ರರಂಗದ ಸ್ಟಾರ್ ನಟನೊಬ್ಬನ ಅಕ್ಕನ ಮಗನೂ ಹೌದು. "ಆದರೆ ಈಗಾಗಲೇ ಬೆಳೆದು ನಿಂತಿರುವ ನಾಯಕನಟನ ಸಂಬಂಧಿ ಎಂಬ ಕಿರೀಟ್ಟು ಬಳಸಿಕೊಂಡು ನಾನು ಬೆಳೆಯಬಾರದು. ಹಾಗೆ ಮಾಡಿದರೆ ಅದು ಜಾಸ್ತಿ ದಿನ ನಡೆಯೊಲ್ಲ" ಎಂಬ ಸ್ವಾಭಿಮಾನಿ ವ್ಯಕ್ತಿತ್ವ ಈ ಹುಡುಗನದ್ದು.

ಅದೇನೇ ಇರಲಿ, ನೋಡಲು ಎತ್ತರವಾಗಿ ಚೆನ್ನಾಗೇ ಇರುವ ಈ ಹುಡುಗ ಸಿಕ್ಕಿರುವ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡಿದ್ದೇ ಆದಲ್ಲಿ ಕನ್ನಡದ ಮತ್ತೊಬ್ಬ ಒಳ್ಳೆಯ ಹೀರೋ ಆಗುವುದರಲ್ಲಿ ಸಂದೇಹವಿಲ್ಲ.

R B P LANKESH, Kannada Weekly Price Rs. 12/- 27-2-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

'ಬಿಂದಾಸ್'ಗೆ ಬದುಕಿಲ್ಲ 'ಯುಗಯುಗಗಳು' ಉಳಿಯೊಲ್ಲ!

ಮೊನ್ನೆ ಬಿಡುಗಡೆಯಾದ 'ಬಿಂದಾಸ್' ಪುನೀತ್‌ರ ಹಿಂದಿನ ಚಿತ್ರಗಳಾದ 'ಅರಸು', 'ಆಕಾಶ್', 'ಮಿಲನ' ತರಹ ಜನರ ಹೃದಯ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ. ಬಾಕ್ಸಾಫೀಸಿನಲ್ಲೂ ಈ ಚಿತ್ರ ಗೆಲ್ಲುವುದು ಸ್ವಲ್ಪ ಕಷ್ಟವೇ ಸರಿ.

ಇಷ್ಟು ದಿನ ಯುವ ನಿರ್ದೇಶಕರೊಂದಿಗೇ ಸಿನಿಮಾ ಮಾಡುತ್ತಿದ್ದ ಪುನೀತ್ ಮೊಟ್ಟಮೊದಲ ಬಾರಿಗೆ ದಿ.ಬಾಬುರಂಥ ಹಿರಿ ತಲೆಯೊಂದಿಗೆ ಕೆಲಸ ಮಾಡಿದ್ದಾರೆ. ಚಿತ್ರದ ಮೊದಲರ್ಧ ಚೇತೋಹಾರಿಯಾಗಿ ಹೊಸತನದಿಂದ ಕೂಡಿದ್ದರೂ ಉಳಿದರ್ಧ ಚಿತ್ರವನ್ನು ಬಾಬು ತಮ್ಮ ಎಂದಿನ ಓಬರಾಯನ ಶೈಲಿಯಲ್ಲೇ ನಿರೂಪಿಸಿರುವುದು ಬೇಸರ ತರಿಸುತ್ತದೆ.



ಇದರ ಜೊತೆಗೆ ಜನಾರ್ದನ ಮಹರ್ಷಿ ಎಂಬ ಕಥೆಗಾರನ ತಲೆ ಖಾಲಿಯಾಗಿದೆ ಎಂಬುದೂ ಸ್ಪಷ್ಟವಾಗಿ ಗೋಚರಿಸುತ್ತಿದೆ. ವೇಣುವಿನ ಕ್ಯಾಮೆರಾ ಕೆಲಸ ಮಾತ್ರ ಚಿತ್ರದ ಹೈಲೆಟ್ ಆಗಿದೆ.

ಸಾಮಾನ್ಯವಾಗಿ ಕಥೆ ಮತ್ತು ನಿರ್ದೇಶಕರನ್ನು ಸೂಕ್ತ ರೀತಿಯಲ್ಲಿ ಆಯ್ಕೆ ಮಾಡುವ ಪುನೀತ್ ಇಲ್ಲಿ ಎಡವಿದ್ದಾರೆ ಎಂದೆನಿಸದೇ ಇರಲಾರದು. ಒಂದು ವೇಳೆ ಚಿತ್ರ ಉಳಿದರೂ ಅದು ಪುನೀತ್‌ನ 'ಪವರ್'ನಿಂದ ಮಾತ್ರ.

'ಬಿಂದಾಸ್' ಜೊತೆಯಲ್ಲೇ ಬಿಡುಗಡೆಯಾದ 'ಯುಗಯುಗಗಳೆ ಸಾಗಲಿ' ಚಿತ್ರದಲ್ಲಿ ಕೂಡ ಯಾವ ತಿರುಳೂ ಇದ್ದಂತಿಲ್ಲ. ಬಹುಶಃ ನಿರ್ದೇಶಕ ಶಶಾಂಕ್‌ರಾಜ್ ಒಂದೆರಡು ದಶಕಗಳ ಹಿಂದೆಯೇ ಈ ಚಿತ್ರಕತೆಯನ್ನು ಮಾಡಿ ಕಾದು ಕುಳಿತಿದ್ದರೇನೋ ಎನಿಸುತ್ತದೆ. ಹಾಸ್ಯ ದೃಶ್ಯಗಳಲ್ಲಿ ರಂಗಾಯಣ ರಘು ಅಲ್ಪಸ್ವಲ್ಪ ನಗಿಸುತ್ತಾರೆ. ವಿಲನ್ ಆಗಿ ಕಾಣಿಸಿರುವ ನೀನಾಸಂ ಅಶ್ವತ್ಥ್ ಮ್ಯಾನರಿಸಂ ಗಮನ ಸೆಳೆಯುತ್ತದೆ. ಇನ್ನು ಅನಂತ್‌ನಾಗ್, ಶರತ್ ಲೋಹಿತಾಶ್ವರಂಥ ಅನುಭವಿಗಳ ಕೈಲಿ ಅಭಿನಯ ತೆಗೆಯುವ ಕಲೆ ಬಹುಶಃ ನಿರ್ದೇಶಕರಿಗೆ ತಿಳಿದಂತಿಲ್ಲ.



ಚಿತ್ರಕ್ಕೆ ಸಂಗೀತ ನೀಡಿರುವ ಹಂಸಲೇಖ ಟೈಟಲ್ ಸಾಂಗ್ ಒಂದನ್ನು ಬಿಟ್ಟರೆ ಮಿಕ್ಕೆಲ್ಲವನ್ನೂ ನಿರ್ದೇಶಕರ ಮೇಲೆ ಸೇಡಿಟ್ಟು ಟ್ಯೂನ್ ಮಾಡಿದಂತಿದೆ. ಚಿತ್ರದ ನಾಯಕಿಯಂತೂ ಮೆಜೆಸ್ಟಿಕ್ಕಿನಲ್ಲಿ ಸ್ವೆಟರ್ ಮಾರುವ ಟಿಬೆಟ್ ಮಹಿಳೆಯರನ್ನು ನೆನಪಿಸುವಂತಿದ್ದಾಳೆ. ಪಟಪಟನೆ ಮಾತನಾಡಬಲ್ಲ ಅಪ್ಪಟ ಕನ್ನಡದ ಪ್ರತಿಭೆಯಾದ ನಾಯಕ ಯಶಸ್ ಮಾತ್ರ ಚಿತ್ರದ ಪ್ಲಸ್ ಪಾಯಿಂಟ್.

ಒಟ್ಟಾರೆ ನಿರ್ದೇಶಕರ ಸಪ್ಪೆ ನಿರೂಪಣೆಯಿಂದ ಚಿತ್ರ ಹಳ್ಳ ಹಿಡಿದಿದೆ.

■ ಅರುಣ್.ಜಿ

ಮತ್ತೆ ಆಗಮಿಸಿದ ಆಳ್ವ

ವಿನೋದ್ ಆಳ್ವಾ ಎಂಬ ನಟನನ್ನು ಬಹುಶಃ ಕನ್ನಡದ ಪ್ರೇಕ್ಷಕರು ಮರೆತೇಹೋಗಿರಬಹುದು. ಒಂದು ಕಾಲದಲ್ಲಿ ಕಣ್ಣೀರ ಕಥೆಯನ್ನು ಬರೆಯುತ್ತಿದ್ದ ಅಬ್ಬಯ್ಯ ನಾಯ್ಡುರವರ ಫೇವರಿಟ್ ಹುಡುಗನಂತಿದ್ದ ನಟನೀತ. ಕನ್ನಡದಲ್ಲಿ ಕೆಲವು ಚಿತ್ರಗಳಲ್ಲಿ ಮಿಂಚಿ, ಆನಂತರ ತೆಲುಗಿನಲ್ಲಿ ವಿಜಯಶಾಂತಿ ಜೊತೆ 'ಭಾರತ್ ಬಂದ್', 'ಪ್ರತಿಘಟನಾ' ತರಹದ ಚಿತ್ರಗಳಲ್ಲಿ ನಟಿಸಿದ ಈ ಕರಾವಳಿಯ ಹುಡುಗ ಆಂಧ್ರದಲ್ಲೇ ಸೆಟಲ್ ಆಗಿದ್ದ.

ಈ ಮಧ್ಯೆ ಒಮ್ಮೆ ಥ್ರಿಲ್ಲರ್ ಮಂಜು ಜೊತೆ 'ಅಮರ್ ಅಕ್ಬರ್ ಆಂಟನಿ' ಎಂಬ ಚಿತ್ರದಲ್ಲಿ ಕಾಣಿಸಿಕೊಂಡನಾದರೂ ಆ ಚಿತ್ರ ಹೇಳಹೆಸರಿಲ್ಲದಂತೆ ಮುಗ್ಗರಿಸಿ ಬಿದ್ದಿತ್ತು. ಮತ್ತೆ ಕನ್ನಡದ ಕಡೆ ಬರುವ ಸಾಹಸ ಆಳ್ವ ಮಾಡಲಿಲ್ಲ. ಆದರೆ ಈಗ ಮದನ್ ಪಟೇಲ್ ಎಂಬ 'ಮಹಾನ್ ಪ್ರತಿಭೆ' ಆಳ್ವನನ್ನು ಮತ್ತೆ ಕನ್ನಡಕ್ಕೆ ಎಳೆತರುತ್ತಿದೆ. ಈ ಬಾರಿ ಆಳ್ವನ ಕಥೆ ಏನಾಗುತ್ತೋ ನೋಡಬೇಕು.

ರಾಮು ಮನೆ ಮೇಲೆ ರೇಡು!



ಮೊನ್ನೆ ಕೇಂದ್ರ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ನಿರ್ಮಾಪಕ ರಾಮು ಕಚೇರಿ ಮೇಲೆ ದಾಳಿ ನಡೆಸಿದರು. ತಮಾಷೆ ಏನೆಂದರೆ, ಯಾವುದೋ ಥಿಯೇಟರ್ ತುಂಬುವ ನಿರ್ಮಾಪಕನ ಮನೆ ಮೇಲೆ ರೇಡು ಬಿದ್ದಿದ್ದರೆ ಅದು ಅಂತಹ ಸುದ್ದಿಯಾಗುತ್ತಿರಲಿಲ್ಲ. ಆದರೆ ಹೋಗಿ ಹೋಗಿ, ಈಗ ಸುಮ್ಮನೆ ಕೂತಿರುವ ರಾಮು ಮನೆ ಮೇಲೆ ದಾಳಿ ಮಾಡಿರುವುದು ಸುದ್ದಿಯಾಗಿದೆ ಮಾತ್ರವಲ್ಲ ಹಾಸ್ಯಾಸ್ಪದವಾಗಿದೆ.

ಕಳೆದ ಮೂರು ನಾಲ್ಕು ವರ್ಷದಿಂದ ಒಂದೇ ಒಂದು ಹಿಟ್ ಚಿತ್ರವನ್ನು ನೀಡಲಾಗದೇ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡು, ಮನೆ ಮಠವನ್ನೆಲ್ಲಾ ಹರಾಜಿಗಿಟ್ಟು, ತಲೆ ಮೇಲೆ ಕೈಹೊತ್ತು ಕುಂತಿರುವ ರಾಮು ಮನೆಗೆ ಈ ಇನ್‌ಕಂಟ್ಯಾಕ್ಸಿನವರು ದಾಳಿ ಮಾಡಿದ್ದಾರೆಂದರೆ ಅವರ ಮಾಹಿತಿ ನೆಟ್‌ವರ್ಕ್ ಎಷ್ಟು ಚೆನ್ನಾಗಿದೆ ಎಂಬುದನ್ನು ಎತ್ತಿತೋರಿಸುತ್ತದೆ.

ಏಕಾಏಕಿ ಇನ್‌ಕಂ ಟ್ಯಾಕ್ಸ್‌ನವರು ಈ ರೀತಿ ರೇಡು ಬಿದ್ದಾಗ ಯಾರೇ ಆಗಲಿ ಸ್ವಲ್ಪ ಗಾಬರಿಗೊಳ್ಳುವುದು ಸಹಜ. ಆದರೆ ರಾಮು ಮಾತ್ರ ಧೃತಿಗೆಡಲಿಲ್ಲವಂತೆ. ಬದಲಾಗಿ ಆದಾಯ ತೆರಿಗೆ ಅಧಿಕಾರಿಗಳನ್ನು ನಗುನಗುತ್ತಾ ಸ್ವಾಗತಿಸಿ ತನ್ನಲ್ಲಿರುವ ಸಾಲಗಾರರ ಪಟ್ಟಿಯನ್ನು ಒಂದೊಂದೇ ನೀಡುತ್ತಾ ಹೋದರಂತೆ. ರಾಮುವಿನ ಸಾಲಗಾರರ ಪಟ್ಟಿಯನ್ನು ಕಂಡ ಅಧಿಕಾರಿಗಳು ರೇಡು ಮಾಡುವ ಬದಲು ಸಮಾಧಾನ ಹೇಳಿ ಹೊರಬಂದರಂತೆ. ಹೀಗೆ ಬರಿಗೈಲಿ ಹಿಂದಿರುಗಿದ ಅಧಿಕಾರಿಗಳು ರಾಮುರ ಚಿಂತಾಜನಕ ಸ್ಥಿತಿಯನ್ನು ನೋಡಲಾರದೆ ಖರ್ಚಿಗೆ ಕಾಸು ಕೊಟ್ಟು ಬಂದಿದ್ದಾರೆ ಅನ್ನೋದು ಮಾತ್ರ ಗಾಂಧಿನಗರಿಗಳ ಶುದ್ಧ ಕುಹಕ!

ಕೊನೆಗೆ ಬಂದ ದಾರಿಗೆ ಸುಂಕವಿಲ್ಲ ಎಂಬಂತಾಗಬಾರದು ಎಂಬ ಕಾರಣಕ್ಕಾಗಿ ಇನ್‌ಕಂ ಟ್ಯಾಕ್ಸ್‌ನವರು ನಿರ್ಮಾಪಕ ರಮೇಶ್ ಯಾದವ್ ಮನೆ ಮತ್ತು ಕಚೇರಿಯ ಮೇಲೆ ದಾಳಿ ನಡೆಸಿದರು. ಗಣೇಶ್ ನಟಿಸಿದ್ದ 'ಕೃಷ್ಣ' ಯಶಸ್ಸೇ ಈ ದಾಳಿಗೆ ಕಾರಣ. ಆದರೆ ಯಾದವ್‌ನ ಮನೆಯಲ್ಲಿ ಸಿಕ್ಕಿದ್ದೆಷ್ಟು ಎಂಬುದು ಮಾತ್ರ ಸದ್ಯಕ್ಕೆ ಗೌಪ್ಯವಾಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44